
ಬೀದರ ಜಿಲ್ಲೆಯ ಅರಸು ಮನೆತನಗಳು

ಇಂದುಮತಿ ಪಾಟೀಲ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಬೀದರ ಜಿಲ್ಲೆಯ ಅರಸು ಮನೆತನಗಳು

ಇಂದುಮತಿ ಪಾಟೀಲ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

BIDAR JILLEYA ARASU MANETANAGALU
by : **Smt. Indumati Patil**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 98 Price : Rs. **40=00 2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ನಲವತ್ತು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ
ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗಿಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ(ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ
ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಅ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಡಾ. ಕಮಲಾ ಹಂಪನಾ, ಬೆಂಗಳೂರು
ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಭಾನು ಮುಷ್ತಾಕ್, ಹಾಸನ
ಶ್ರೀ ರಫಾಯಲ್ ರಾಜ್, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ
ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ನಿವೇದನೆ

ಇತಿಹಾಸವೆಂದರೆ, ಕೇವಲ ಚಕ್ರವರ್ತಿ, ಅರಸರು, ವೈಭವಗಳ, ದೊಡ್ಡ ದೊಡ್ಡ ಕೋಟೆ, ರಾಜಧಾನಿ ಕೇಂದ್ರಗಳೇ ಎಂಬ ಓರಿಯಂಟಲಿಸ್ಟ್ ಗ್ರಹಿಕೆಗಳೇ ಹೆಚ್ಚಾಗಿವೆ. ಹಾಗಾಗಿ ಇತಿಹಾಸವೇ ಇಂದು ಸ್ಥಾಪಿತವಾದ ನಂಬಿಕೆಯಾಗಿ ಬಿಟ್ಟಿದೆ. ವಾಸ್ತವವಾಗಿ ಚರಿತ್ರೆಯ ಎಳೆಎಳೆಗಳ ಬಿಡಿಭಾಗಗಳು ಕೂಡಿ ಇತಿಹಾಸವಾಗುತ್ತವೆ. ಸಾಮಂತರ ಆಳ್ವಿಕೆ ಗಳು, ಸ್ಥಳೀಯ ಸಾಂಸ್ಕೃತಿಕ, ಸಾಮಾಜಿಕ, ಒಬ್ಬ ವ್ಯಕ್ತಿ ಹಾಗೂ ಒಂದು ಹಾಳು ಕಟ್ಟಡ ಕೂಡ ಇತಿಹಾಸವೇ.

ಇತಿಹಾಸದಲ್ಲಿ ಒಂದು ಬಂಗಾರದ ನಾಣ್ಯ ಎಷ್ಟು ಮುಖ್ಯವೋ, ಹಳೆಯ ಮಡಕೆಯ ತುಂಡು ಕೂಡ ಅಷ್ಟೇ ಮುಖ್ಯ. ಆದರೆ ಬಹುತೇಕ ಐತಿಹಾಸಿಕ ರಚನೆಗಳು ಕೇವಲ ವೈಭವಗಳನ್ನು ಮಾತ್ರ ಕಟ್ಟಿಕೊಟ್ಟಿವೆ. ಉಳಿದವುಗಳು ಅಲಕ್ಷ್ಯಕ್ಕೆ ಒಳಗಾಗಿವೆ. ಆದ್ದರಿಂದ ಅಲಕ್ಷಿತವಾದ ಚರಿತ್ರೆಯನ್ನು ಪುನಃ ಕಟ್ಟುವ ಪ್ರಾಮಾಣಿಕ ಯತ್ನಗಳು ಇಂದಿನ ಬಹು ದೊಡ್ಡ ಅಗತ್ಯವಾಗಿವೆ. ಅರಿತ ಅಗತ್ಯತೆಗಳ ಮನವರಿಕೆಯ ಪ್ರತಿಫಲವೇ ಈ ''ಬೀದರ ಜಿಲ್ಲೆಯ ಅರಸು ಮನೆತನಗಳು''. ಸ್ವಾತಂತ್ರ್ಯೋತ್ತರ ಕರ್ನಾಟಕ ರಾಜ್ಯದ ಭೂಪಟದಲ್ಲಿ ಬೀದರ ಒಂದು ಜಿಲ್ಲೆಯಾಗಿ ಮಹತ್ವ ಪಡೆದಿದೆ. ಆದರೆ ಅತೀ ಪ್ರಾಚೀನ ಕಾಲದಿಂದಲೂ ಬೀದರ ಆಯಾ ಸಂದರ್ಭಕ್ಕನುಗುಣವಾಗಿ ಮಹತ್ವದ ಸ್ಥಾನ ಪಡೆದಿದೆ. ಐತಿಹಾಸಿಕವಾಗಿ ಗಮನಿಸುವುದಾದರೆ ಕೆಲ ಅರಸರು ಬೀದರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿ ಕೊಂಡು ಆಳ್ವಿಕೆ ನಡೆಸಿದ್ದಾರೆ. ಇನ್ನೂ ಕೆಲವರು ಬೀದರ ಸಮೀಪದ ಪಟ್ಟಣಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ್ದಾರೆ. ಉಳಿದಂತೆ ಅನೇಕ ಅರಸರ ಆಳ್ವಿಕೆಗೆ ಬೀದರ ಒಳಪಟ್ಟಿದೆ. ಹೀಗೆ ಭಿನ್ನಭಿನ್ನ ಕಾರಣಗಳಿಂದ ಬೀದರ ಇತಿಹಾಸದ ಭಾಗವಾಗಿದೆ.

ಬಹು ಮುಖ್ಯವಾಗಿ ಬೀದರ ರಾಜಧಾನಿಯಾಗಿ ರಂಜೇರಿನ ಸಿಂಧರು ಆಳ್ವಿಕೆ ಮಾಡಿದ್ದಾರೆ. ಸಾಮಂತರಾಗಿ, ಸ್ವತಂತ್ರವಾಗಿ ನಡೆಸಿರುವ ಈ ಆಳ್ವಿಕೆ ಬೀದರ ಚರಿತ್ರೆಗೆ ಬಹು ದೊಡ್ಡ ಮೈಲಿಗಲ್ಲು. ಆದರೆ ಯಾವುದೇ ಚಾರಿತ್ರಿಕ ಸಂದರ್ಭದಲ್ಲಿ ಇದನ್ನು ಪರಿಗಣಿಸಿಲ್ಲ. ಇಂಥ ಕೊರತೆಗಳನ್ನು ತುಂಬುವ ಒಂದು ಕಿರುಪ್ರಯತ್ನ ಮಾಡಿರುವೆ. ಇದು ಪರಿಪೂರ್ಣ ಅಧ್ಯಯನವಿರದಿರಬಹುದು. ಒಂದು ಗಾದೆಯ ಮಾತಿದೆ ''ಸಾವಿರ ಮೈಲಿ ನಡೆಯಬೇಕಾದರೂ ಮೊದಲ ಮೆಟ್ಟಿಲಿನಿಂದಲೆ ನಡೆಯಬೇಕು.'' ಹಾಗೇ ಮೊದಲ ಮೆಟ್ಟಿಲಾಗಿ ಈ ಕೃತಿಯನ್ನು ಗ್ರಹಿಸಬಹುದು.

''ಬೀದರ ಜಿಲ್ಲೆಯ ಅರಸು ಮನೆತನಗಳು'' ಎಂಬ ಈ ಕೃತಿಯನ್ನು ಬೀದರನಲ್ಲಿ ನಡೆಯುವ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟಿಸಲು ಅಪೇಕ್ಷಿಸಿದ್ದು, ಈ ಕೃತಿಯ ಮಹತ್ವವನ್ನು ಎತ್ತಿ ಹಿಡಿದಂತಾಗಿದೆ.

ಈ ಕೃತಿ ರಚನೆಗೆ ಮುಖ್ಯ ಕಾರಣಕರ್ತರಾದ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಜಗನ್ನಾಥ ಹೆಬ್ಬಾಳೆಯವರು ಮತ್ತು ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲ ಇವರಿಗೆ ಅನಂತ ಕೃತಜ್ಞತೆಗಳು.

ಪ್ರೊ. ಇಂದುಮತಿ ಪಿ. ಪಾಟೀಲ

ಪರಿವಿಡಿ

ಬೀದರ ಜಿಲ್ಲೆಯ ಅರಸು ಮನೆತನಗಳು

೧. ಪ್ರಸ್ತಾಪ

ಕನ್ನಡದ ಮೊದಲ ಕೃತಿ ಕವಿರಾಜಮಾರ್ಗದ ಪ್ರಕಾರ ಕಾವೇರಿಯಿಂದ ಗೋದಾವರಿವರೆಗೆ ಪಸರಿಸಿದ ಕರ್ನಾಟಕವು ಇಂದು ಕೇವಲ ಕಾವೇರಿಯಿಂದ ಮಾಂಜಾರಾ ನದಿವರೆಗೆ ಮಾತ್ರ ಉಳಿದಿದೆ. ಈ ರಾಜ್ಯಕ್ಕೆ ಒಂದು ಸಮುದ್ರ ತೀರದ ಕರಾವಳಿ ಪ್ರದೇಶವಿದ್ದರೆ ಉಳಿದ ಗಡಿಭಾಗವು ಆಂಧ್ರ, ಮಹಾರಾಷ್ಟ್ರದಿಂದ ಆವರಿಸಿದೆ. ಸುಮಾರು ೫.೫ ಕೋಟಿ ಕನ್ನಡಿಗರನ್ನು ಪ್ರತಿನಿಧಿಸುವ ಇಂದಿನ ಅಖಂಡ ಕರ್ನಾಟಕವು ೨೭ ಜಿಲ್ಲೆಗಳನ್ನೊಳಗೊಂಡಿದೆ. ಅದರಲ್ಲಿ ಬೀದರ ಜಿಲ್ಲೆ ಕೂಡ ಒಂದು. ಕರ್ನಾಟಕದ ಉತ್ತರದಲ್ಲಿರುವ ಬೀದರ ಕೊನೆಯ ಜಿಲ್ಲೆಯಾದ್ದರಿಂದ ರಾಜ್ಯದ ಕಳಸಪ್ರಾಯದಂತಿದೆ. ಜಿಲ್ಲೆಯ ಆಡಳಿತದ ಕೇಂದ್ರಸ್ಥಾನ ಬೀದರ ಪಟ್ಟಣ. ಹಳೆ ಬೇರಿಗೆ ಹೊಸ ಚಿಗುರಿನಂತೆ ಬೀದರ ಬೆಳೆದು ಬಂದಿದೆ. ಅನೇಕ ಭಾಷೆಗಳನ್ನು ಮಾತನಾಡುವ, ವಿವಿಧ ಧರ್ಮಗಳಿಗೆ ಸೇರಿರುವ ಇಲ್ಲಿಯ ಜನರ ಬದುಕು ಭಾವೈಕ್ಯತೆಯ ದರ್ಶನವಾಗಿದೆ. ಬೀದರ ನಿಜಕ್ಕೂ ಸಾಂಸ್ಕೃತಿಕ ಸಂಗಮದ ಸಂಕೇತವೇ ಸರಿ. ಭೌಗೋಳಿಕ ಪರಿಸರವೂ ಅಷ್ಟೇ. ಸುಂದರ ಆಹ್ಲಾದಕರ ಹವಾಮಾನವಾಗಿದ್ದು ನೈಸರ್ಗಿಕ ನೀರಿನ ಝರಿಗಳು, ಸುಪ್ರಸಿದ್ಧ ಧಾರ್ಮಿಕ ಕೇಂದ್ರಗಳ ನೆಲೆಯಾಗಿ, ಸರ್ವಧರ್ಮಗಳ ಸಂಗಮದ ನಾಡಾಗಿ ಬೆಳೆದು ಬಂದಿವೆ. ಹೆಜ್ಜೆ ಹೆಜ್ಜೆಗೆ ಐತಿಹಾಸಿಕ ಸ್ಮಾರಕಗಳು ತಮ್ಮ ಗತಕಾಲದ ವೈಭವವನ್ನು ಮೌನವಾಗಿ ನಿಂತು ಪ್ರೇಕ್ಷಕನ ಮನಸ್ಸಿಗೆ ಪರಿಣಾಮಕಾರಿಯಾದ ಅನುಭವ ನೀಡುತ್ತವೆ. ನೆಲದ ಮೇಲೆ ಎತ್ತಿನ ಬಂಡಿಗಳಿಂದ ಹಿಡಿದು ಆಕಾಶದಲ್ಲಿನ ಜೆಟ್ ವಿಮಾನಗಳ ಹಾರಾಟವು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಯ ಸಂಕೇತವನ್ನು, ಸಂಪರ್ಕ ವ್ಯವಸ್ಥೆ ಮತ್ತು ನಾಡಿನ ಅನನ್ಯವಾದ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತಿದೆ.

ಈ ಭಾಗದ ನಾಗರಿಕತೆ ಬೆಳೆಯಲಾರಂಭಿಸಿದ್ದು, ಕಾರಂಜಾ ಮತ್ತು ಮಾಂಜರಾ ನದಿಗಳ ಕಣಿವೆಗಳಲ್ಲಿ, ಹಳೆ ಶಿಲಾಯುಗದ ಅನೇಕ ಕುರುಹುಗಳು ಸಹ ಈ ಭಾಗದಲ್ಲಿ ದೊರೆತಿವೆ. ಬೀದರದ ಪಾಪನಾಶ, ಶುಕ್ಲತೀರ್ಥ, ಸುತ್ತಣ ವ್ಯಾಪ್ತಿಯಲ್ಲಿ ಬರುವ ಅಗ್ರಹಾರ, ಚಳಕಾಪೂರ, ರಂಜೇರು, (ಖೇಣಿ ರಂಜೋಳ) ಹಳ್ಳಿಖೇಡ ಮೊದಲಾದ ಸ್ಥಳಗಳು ತಮ್ಮ ಪ್ರಾಚೀನತೆಯನ್ನು ತೋರಿಸಿಕೊಳ್ಳುತ್ತಲಿವೆ. ಆದರೂ ಈ ಸ್ಥಳಗಳ ಬಗ್ಗೆ ಹೆಚ್ಚಿನ ಮಾಹಿತಿ ಇನ್ನೂ ಲಭ್ಯವಾಗಿರುವುದಿಲ್ಲ. ಈ ದಿಶೆಯಲ್ಲಿ ಹೆಚ್ಚಿನ ಸಂಶೋಧನೆ ಅಗತ್ಯವಾಗಿದೆ.

೨. ಬೀದರ : ಪದನಿಷ್ಪತ್ತಿ

ಬೀದರ ಚಾರಿತ್ರಿಕವಾಗಿ ಅತೀ ಪ್ರಾಚೀನ ಪರಂಪರೆಯ ಇತಿಹಾಸ ಹೊಂದಿರುವದರಿಂದ ಅದರ ಹೆಸರು ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ. ಹಾಗಾಗಿ ಜಿಲ್ಲೆಯ ಗ್ರಾಮೀಣ ಜನತೆ ಬೀದರನ್ನು ಇಂದಿಗೂ ಗುರುತಿಸುವುದು ಕೋಟೆ, ಕ್ವಾಟಿ ಎಂತಲೆ. ಬೀದರ ಕೋಟೆಯ ಪ್ರಭಾವ ಜನಮನದಲ್ಲಿ ಅಷ್ಟೊಂದು ಬೇರೂರಿದೆ. ಕೋಟೆ ಎಷ್ಟು ಹಳೆಯದು ಎಂಬುದು ಸ್ಪಷ್ಟವಾಗಿ ಗೊತ್ತಿಲ್ಲ. ಅದಕ್ಕೆಂದೆ ಬೀದರ ನಗರವನ್ನು ಕೋಟೆ, ಕೋಟೆಗಳ ಕೋಟೆ ಎಂದು ಉಲ್ಲೇಖಿಸಬಹುದು. ಎಂದರೆ ಇಲ್ಲಿ ಹಲವಾರು ಕೋಟೆಗಳೇ ತಲೆ ಎತ್ತಿ ತಮ್ಮ ಗತಕಾಲದ ವೈಭವ ಬಿಂಬಿಸುತ್ತಿವೆ.

ಒಳಗೆ, ಒಳಕೋಟೆ, ಅದರ ಪೂರ್ವದಿಕ್ಕಿಗೆ ಹಳೆಕೋಟೆ (ಪುರಾನಾ ಕಿಲಾ) ಕಾಕತೀಯರ ಕಾಲದ ಕೋಟೆ, ಬಹಮನಿ ಬರೀದಶಾಹಿಗಳ ಕೋಟೆ, ಮುಖ್ಯ ಕೋಟೆಗೆ ಹೊಂದಿಕೊಂಡಂತೆ ಪಟ್ಟಣವಾಸಿಗಳಿಗಾಗಿ ದ್ವಾರಗಳಸಹಿತ ಪ್ರತ್ಯೇಕ ಕೋಟೆ, ಅಬ್ಬೆಸೀಯಾದಿಂದ ಅಂದು ಬರುತ್ತಿದ್ದ ಹಬ್ಸಿ ಜನಾಂಗದವರಿಗೆ ಪ್ರತ್ಯೇಕ ಕೋಟೆ ಇದ್ದು, ಅದಕ್ಕೆ ಅವರ ಹೆಸರಿನಿಂದಲೇ ಹಬ್ಸಿಕೋಟೆಯೆಂದು ಕರೆಯಲಾಗುತ್ತಿತ್ತು.

೧೯೭೬ಕ್ಕೂ ಮುನ್ನ ಈ ಪಟ್ಟಣದ ಅಧಿಕೃತ ಹೆಸರು ಮಹಮ್ಮದಾಬಾದ-ಬೀದರ (ಎಂ. ಬೀದರ) ಆಗಿದ್ದಿತು. ಮಹಮ್ಮದಾಬಾದ-ಬೀದರ ಈ ಹೆಸರು ಈ ಪಟ್ಟಣಕ್ಕೆ ಬಂದದ್ದು, ಬಹಮನಿ ಅರಸ ಮಹಮ್ಮದ ಶಾಹನಿಂದ. ಆ ಮೊದಲು ಇದು ಅಹಮದಾಬಾದ ಬೀದರ ಎಂದು ಕರೆಯಲ್ಪಡುತ್ತಿತ್ತು. ಕಾಕತೀಯರ ಕಾಲದ ಹಳೆ ಕೋಟೆ ಇದ್ದ ಸ್ಥಳದಲ್ಲಿ ಅಹಮ್ಮದಶಾಹ ಆಲ್-ವಲಿ ಬಹಮನಿಯು ಕ್ರಿ.ಶ. ೧೪೨೯ ರಲ್ಲಿ ಕೋಟೆ ನಿರ್ಮಿಸಿ ತನ್ನ ರಾಜಧಾನಿಯನ್ನು ಗುಲ್ಬರ್ಗಾದಿಂದ ಬೀದರಗೆ ವರ್ಗಾಯಿಸಿದ. ಆ ಮೊದಲಿಗೆ ಬೀದರ ಬಹಮನಿ ರಾಜ್ಯದ ನಾಲ್ಕು ಪ್ರಾಂತ್ಯಗಳಲ್ಲಿ ಒಂದಾಗಿದ್ದ ಬೀದರ ಪ್ರಾಂತದ ಕೇಂದ್ರವಾಗಿದ್ದಿತು. ಅದನ್ನೇ ಬೀದರ ಎಂದು ಕರೆಯಲ್ಪಡುತ್ತಿತ್ತು. ಹಾಗಾಗಿ ಬೀದರ ಈ ಶಬ್ದದ ಅರ್ಥ ಸ್ಪಷ್ಟಗೊಳ್ಳುತ್ತಿಲ್ಲ.

ಬಹಮನಿಯರ ವಶಕ್ಕೆ ಬರುವ ಮುನ್ನವೇ ಈ ಪಟ್ಟಣವು ತೊಗಲಖ್ ಮನೆತನದ ಆಳ್ವಿಕೆಗೆ ಒಳಪಟ್ಟಿದ್ದಿತ್ತು. ಬೀದರನ್ನು ತೊಗಲಖ್‌ರ ಅಧಿಕಾರಿಗಳು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು.

ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಕಾಲಕ್ಕೆ ಅಲ್ಲದೆ ಅದಕ್ಕೂ ಮುನ್ನ ರಾಷ್ಟ್ರಕೂಟರ ಕಾಲಕ್ಕೆ ಬೀದರ ಹೇಗಿತ್ತು ? ಇಲ್ಲಿಯ ಕೋಟೆಯ ಮಹತ್ವ ಏನಾಗಿದ್ದಿತು? ಎಂಬುದು ನಿಖರವಾಗಿ ಹೇಳಲು ಆಧಾರಗಳು ದೊರಕುತ್ತಿಲ್ಲವಾದರೂ ಕೋಟೆ ಇರಲಿಲ್ಲವೆಂದು ಹೇಳುವಂತಿಲ್ಲ. ಏಕೆಂದರೆ ಕೋಟೆ ಕೂಡ ತನ್ನ ರಹಸ್ಯವನ್ನು ಬಿಚ್ಚುತ್ತಿಲ್ಲ.

ಮೌಖಿಕ ಹೇಳಿಕೆಗಳು, ಮತ್ತು ಕೆಲವು ಐತಿಹ್ಯ, ಘಟನೆಗಳನ್ನು ಆಧರಿಸಿ ಪಟ್ಟಣ ಬೆಳೆದು ಬಂದ ಬಗೆಯನ್ನು ಹೀಗೆ ಚಿತ್ರಿಸಬಹುದಾಗಿದೆ. ಕ್ರಿ.ಶ. ಪೂರ್ವ ೩೨೭ರ ಸುಮಾರಿಗೆ ವಿದುರ ಎಂಬ ಹೆಸರಿನ ಅರಸ ವಿದುರ ಬೆದುರ ನಗರ ಸ್ಥಾಪಿಸಿದನೆಂದು ನಂಬಿಕೆ. ಆ ಮೊದಲೇ ಶ್ರೀರಾಮಚಂದ್ರ ಲಂಕಾದಿಂದ ಹಿಂದಿರುಗಿ ಹೋಗುವಾಗ ಪಾಪನಾಶ ಲಿಂಗ ಪೂಜಿಸಿದ್ದ ಎನ್ನುವುದು ಮತ್ತೊಂದು ವಿಶ್ವಾಸ. ಬೀದರದ ಸಿದ್ದಿತಾಲಿಂನಲ್ಲಿ ವನವಾಸ ರಾಮಮಂದಿರವಿದೆ. ಬೀದರ ಪಟ್ಟಣದ ಹಳೆ ಭಾಗದಲ್ಲಿ ತಳವಾಡಿ ಇದ್ದು ಅಲ್ಲಿಯೂ ಪ್ರಸಿದ್ಧ ರಾಮಮಂದಿರವಿದೆ.

ಬೀದರ ಕೋಟೆಯ ಪಶ್ಚಿಮಭಾಗದಲ್ಲಿ ಪ್ರಾಚೀನ ಶುಕ್ಲತೀರ್ಥವಿದೆ. ಮಂಗಲ ಪೇಟದ ಪೂರ್ವದಲ್ಲಿ ನರಸಿಂಹ ಝರಾ ಇದೆ. ಹಳೆಕೋಟೆಯ ಭಾಗದಲ್ಲಿ ಪ್ರಾಚೀನ ಕಾಲದ ಕೋಟೆ ಇತ್ತೆಂದು ಖ್ಯಾತ ಇತಿಹಾಸಕಾರರಾದ ಜಿ.ಯಝ್ದಾನಿ ಬರೆದಿರು ತ್ತಾರೆ. ಅದರ ಸಮೀಪದ ಕೋಟೆಯ ಹೆಬ್ಬಾಗಿಲೊಂದರ ಹೆಸರು ಕಲಮಡಗಿ ದರವಾಜಾ ಎಂದಾಗಿದೆ. ಒಳಕೋಟೆಯಲ್ಲಿ ಭವಾನಿ ಮಂದಿರವಿದ್ದು ಅದರ ಸುತ್ತಲೂ ಇಂದಿಗೂ ಜನವಸತಿ ಇದೆ.

ಬೀದರ ವಿದರ್ಭದ ಎರಡನೇ ರಾಜಧಾನಿಯಾಗಿದ್ದಿತ್ತೆಂದು ಮತ್ತೊಂದು ನಂಬಿಕೆ. ಬೀದರದಿಂದ ಸೋಲಾಪುರದೆಡೆಗೆ ಹೋಗುವ ಹೆದ್ದಾರಿಯಲ್ಲಿ ನಳದುರ್ಗ ವಿದೆ. ನಳನು ಮಧ್ಯಪ್ರದೇಶದ ಕಡೆಯವನು. ಈ ನಳದುರ್ಗಕ್ಕೂ ನಳನಿಗೂ ಸಂಬಂಧ ಇರಬಹುದೆ ? ದಮಯಂತಿ ಪ್ರಾಚೀನ ಬೀದರ ಮೂಲದವಳೆ ? ಎಂಬುವದರ ಬಗ್ಗೆ ಜಿಜ್ಞಾಸೆಗಳಿವೆ.

ಪುರಾಣ ಕಾಲದಲ್ಲಿ ವಿದರ್ಭದಲ್ಲಿ ಭೋಜರು ಆಳುತ್ತಿದ್ದರು. ಅವರು ಎರಡು ರಾಜಧಾನಿಗಳನ್ನು ಹೊಂದಿದ್ದರು. ಉತ್ತರದಲ್ಲಿ ಭೋಜಕತಪುರ ದಕ್ಷಿಣ ಭಾಗದಲ್ಲಿ ವಿದರ್ಭ ನಗರ. ಆ ವಿದರ್ಭನಗರವೆ ಬೀದರ ಅನ್ನುವುದು ಊಹೆ. ಆಧಾರಗಳ ಅಭಾವ ಇದ್ದರೂ ಸಹ ಅತಿ ಪ್ರಾಚೀನ ಕಾಲದಿಂದಲೂ ಈ ಸ್ಥಳ ಪ್ರಾಮುಖ್ಯತೆ ತಳೆದಿತ್ತು ಎನ್ನುವುದರ ಬಗೆಗೆ ಅನುಮಾನವಿಲ್ಲ. ಮೈಲಾರಲಿಂಗ ಕ್ಷೇತ್ರ ಕೂಡ ಅಷ್ಟೇ ಪ್ರಾಚೀನ. ಮೈಲಾರ ಪ್ರದೇಶದ ಪ್ರಾಚೀನತೆಯ ಆಧಾರದ ಮೇಲೆಯೇ ಬೀದರಿನ ಪ್ರಾಚೀನತೆಯನ್ನು ಕೂಡಾ ನಾವು ಗುರುತಿಸಬಹುದು.

ಕೋಟೆಯ ಒಳಗಡೆಯ ಪ್ರಮುಖ ಸ್ಥಾನದಲ್ಲಿ ಬೊಮ್ಮಗೊಂಡೇಶ್ವರನ ಕೆರೆ

ಇದ್ದು ಬೊಮ್ಮಗೊಂಡೇಶ್ವರನ ಹೆಸರು ಈ ಭಾಗದಲ್ಲಿ ಪ್ರಸಿದ್ಧವಾಗಿದೆ. ಅದರ ಪಕ್ಕದ ದಿಬ್ಬದ ಮೇಲೆ ಶರಣ ವೀರಸಂಗಯ್ಯನ ಸಮಾಧಿ ಇದೆ. ಆ ಕಾಲಕ್ಕೆ ಬೀದರ ಬಿದರೂರುಪುರವೆಂದು ಕರೆಯಲ್ಪಡುತ್ತಿತ್ತು. ಹೀಗೆ ಪ್ರಾಚೀನ ಕಾಲದಿಂದಲೂ ವಿವಿಧ ಮಜಲುಗಳಲ್ಲಿ ಬೀದರ ಪಟ್ಟಣದ ಇತಿಹಾಸವನ್ನು ಅವಲೋಕಿಸಿದಾಗ ಈ ನಗರ ತನ್ನದೇ ಆದ ಮಹತ್ವದೊಂದಿಗೆ ವಿವಿಧ ಕಾಲದಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಟ್ಟು ಅಂತಿಮವಾಗಿ ಬೀದರ ನಗರವಾಗಿ ಮತ್ತು ಜಿಲ್ಲೆಯ ಕೇಂದ್ರಸ್ಥಾನವಾಗಿ ಕರ್ನಾಟಕದ ಉತ್ತರದಲ್ಲಿ ರಾರಾಜಿಸುತ್ತಿದೆ.

ಮತ್ತೊಂದು ಮಹತ್ವದ ಅಂಶವೆಂದರೆ ಹಿಂದಿನ ಕಾಲದಿಂದಲೂ ಬೀದರ ಪಟ್ಟಣ ಅನೇಕ ಬಡಾವಣೆಗಳಿಂದ ಸುತ್ತುವರಿದಿದೆ. ಅವುಗಳಲ್ಲಿ ಪ್ರಮುಖವಾದವು ಗಳೆಂದರೆ ಕುಂಬಾರಗೇರಿ, ಹಾರೂರಗೇರಿ, ಹೂಗೇರಿ, ಹಳ್ಳದ ಕೇರಿ, ಸೋಮವಾರ ಪೇಟೆ (ಇಂದಿನ ಲಾಡರಗೇರಿ), ಮಂಗಳವಾರ ಪೇಟೆ, ನಾವದಗೇರಿ ಇತ್ಯಾದಿ. ಇವುಗಳ ಮಧ್ಯದಲ್ಲಿ ಭವ್ಯ ಮಂದಿರ ಹಾಗೂ ಪಟ್ಟಣ ಇದ್ದಿರಲೇಬೇಕು. ಹೀಗೆ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಟ್ಟಿರುವ ಬೀದರ ಪಟ್ಟಣ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಅನೇಕ ಅರಸು ಮನೆತನಗಳು ಆಳಿಹೋಗಿವೆ. ಶಿಲಾಯುಗದ ಕಾಲದಿಂದ ಹಿಡಿದು ಆಧುನಿಕ ಕಾಲದ ಭಾರತ ಸ್ವಾತಂತ್ರ್ಯ ಹೊಂದುವವರೆಗೆ ಇಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳ ಬಗೆಗಿನ ಸಂಕ್ಷಿಪ್ತ ನೋಟವನ್ನು ನಾವು ಈ ಮುಂದಿನಂತೆ ಕಂಡುಕೊಳ್ಳಬಹುದು.

ಭಾರತದ ಐತಿಹಾಸಿಕ ದಖ್ಖನಿನ ಪ್ರಸಿದ್ಧ ಪಟ್ಟಣಗಳಲ್ಲಿ ಒಂದಾದ ಬೀದರ ಹದಿನೈದನೇ ಶತಮಾನದಲ್ಲಿ ಬಹಮನಿ ಸಾಮ್ರಾಜ್ಯದ ಪ್ರಸಿದ್ಧ ರಾಜಧಾನಿ ಆಗಿದ್ದಿತು. ಇದರ ಕೀರ್ತಿ ಮಧ್ಯಏಷ್ಯಾದವರೆಗೂ ಹರಡಿದ್ದಿತು. ಆ ಮೊದಲೇ ಹನ್ನೊಂದನೆಯ ಶತಮಾನದಲ್ಲಿ ಈ ಜಿಲ್ಲೆಯ ಕಲ್ಯಾಣ (ಇಂದಿನ ಬಸವಕಲ್ಯಾಣ) ಕಲ್ಯಾಣಿ ಚಾಲುಕ್ಯರ ರಾಜಧಾನಿಯಾಗಿ ಎಲ್ಲೆಲ್ಲೂ ಪ್ರಸಿದ್ಧಿ ತಳೆದಿದ್ದಿತು. ಹನ್ನೆರಡನೆಯ ಶತಮಾನದಲ್ಲಿ ಅದೇ ಕಲ್ಯಾಣಪುರವು ಶ್ರೀ ಬಸವೇಶ್ವರರ ನೇತೃತ್ವದಲ್ಲಿ ಧಾರ್ಮಿಕ, ಸಾಮಾಜಿಕ ಕ್ರಾಂತಿಯ ನೆಲೆ ಆಗಿದ್ದಿತ್ತಲ್ಲದೆ, ಬಸವಣ್ಣನವರ ನೇತೃತ್ವದಲ್ಲಿ ರಚಿತವಾದ ಅನುಭವ ಮಂಟಪವು ಶರಣ-ಶರಣೆಯರ ಆಕರ್ಷಣೆಯ ಕೇಂದ್ರವಾಗಿದ್ದಿತ್ತು. ಕಲ್ಯಾಣನಾಡು ವಚನ ಸಾಹಿತ್ಯದ ಬೀಡೂ ಹೌದು. ಸರ್ವ ಸಮಾನತೆಯ ನೆಲೆ ಈ ಬೀದರ ಸಾಮಾಜಿಕ ಸಮನ್ವಯತೆ, ಧಾರ್ಮಿಕ ಸಹಿಷ್ಣುತೆಗೆ ಹೆಸರಾಗಿತ್ತು.

ಪ್ರಾಚೀನ ವಿದರ್ಭದ ಭಾಗವಾಗಿದ್ದ ಬೀದರ ಒಂದು ರೀತಿಯಿಂದ ಬಹು ಸಂಸ್ಕೃತಿಯ ಸಂಗಮ ಸ್ಥಳವಾಗಿದೆ. ವಿವಿಧ ಭಾಷೆ, ಸಂಸ್ಕೃತಿಯನ್ನು ಹೊಂದಿರುವ ಬೀದರ ಜಿಲ್ಲೆ, ಗಡಿಯ ಆಂಧ್ರ, ಮಹಾರಾಷ್ಟ್ರ ರಾಜ್ಯಗಳಿಂದ ಸುತ್ತುವರೆದರೂ ಸಹ

ಕನ್ನಡದ ಘನತೆ, ಕನ್ನಡತನವನ್ನು ಕಾಪಾಡಿಕೊಳ್ಳುತ್ತಿರುವುದು ಶ್ಲಾಘನೀಯ ಅಂಶ ವಾಗಿದೆ. ಇಲ್ಲಿಯ ಜನಜೀವನ ವಿವಿಧತೆಯಲ್ಲಿ ಏಕತೆಯನ್ನು ಮೆರೆವ ಸಾಕಾರ ರೂಪ. ಅನೇಕ ಧಾರ್ಮಿಕ ಕೇಂದ್ರಗಳೂ ಅಗಾಧ ಐತಿಹಾಸಿಕ ಹಾಗೂ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಈ ಜಿಲ್ಲೆ ತನ್ನ ಒಡಲಿನಲ್ಲಿ ಹುದುಗಿಸಿಟ್ಟುಕೊಂಡಿದೆ. ಅದಕ್ಕಾಗಿ ಈ ಜಿಲ್ಲೆಯನ್ನು ಅನೇಕ ನಾಡುಗಳ ನಾಡು ಎಂದು ಕರೆಯಬಹುದು.

ಮೌರ್ಯರು, ಶಾತವಾಹನರು, ಚುಟುಗಳು, ಬನವಾಸಿಯ ಕದಂಬರು, ವಾಕಟಕರು, ಬಾದಾಮಿ ಚಾಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ದೇವಗಿರಿಯ ಯಾದವರು, ಓರಂಗಲ್ಲಿನ ಕಾಕತೀಯರು, ಖಿಲ್ಜಿ, ತೊಗಲಖ್, ಬಹಮನಿ, ಬರೀದ ಶಾಹಿ, ಆದಿಲ್‌ಶಾಹಿ, ಮೊಗಲ, ನೈಜಾಂ ಶಾಹಿ ಇವರುಗಳ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿದ್ದಿತು.

ರಾಜ್ಯಭಾಷೆಯಾದ ಕನ್ನಡ ಭಾಷೆಯು ಜಿಲ್ಲೆಯ ಮಾತೃಭಾಷೆಯಾದರೂ ಇಲ್ಲಿನ ಜನತೆ ಪ್ರಾಚೀನ ಕಾಲದಲ್ಲಿ ಪ್ರಾಕೃತ, ಮತ್ತು ಆಧುನಿಕ ಸಂದರ್ಭದಲ್ಲಿ, ಮೋಡಿ, ಮರಾಠಿ, ತೆಲಗು, ಸಂಸ್ಕೃತ, ಪರ್ಷಿಯನ್, ಅರೆಬಿಕ್, ಉರ್ದು, ಹಿಂದಿ, ಪಂಜಾಬಿ, ಮತ್ತು ಆಂಗ್ಲ ಭಾಷೆಗಳನ್ನು ಬಳಸುವ ಮೂಲಕ ಭಾಷಿಕ ಸಾಮರಸ್ಯ ಮೆರೆಯುತ್ತಿದೆ. ಆದರೂ ಕನ್ನಡ ತನ್ನ ಪ್ರಾಧಾನ್ಯತೆಯನ್ನು ಉಳಿಸಿಕೊಂಡು ಬಂದಿದೆ. ಶೈವ, ವೀರಶೈವ, ವೈಷ್ಣವ, ಜೈನ, ಬೌದ್ಧ, ಸಿಖ್, ಕ್ರೈಸ್ತ, ಇಸ್ಲಾಂ ಧರ್ಮ ಪಾಲಿಸು ವವರೆಲ್ಲ ಇಲ್ಲಿ ಪರಸ್ಪರ ಸಾಮರಸ್ಯದಿಂದ ಬಾಳುತ್ತಿದ್ದಾರೆ.

ಶರಣ ಸಂಸ್ಕೃತಿ ಇಲ್ಲಿಯ ಜನರ ಜೀವನದಲ್ಲಿ ಹಾಸುಹೊಕ್ಕಾಗಿ ನೆಲೆಸಿದೆ. ದೇಶಿ ಸಂಸ್ಕೃತಿಯ ಗಿರಿಜನ ಸಂಸ್ಕೃತಿಯನ್ನೂ ಕೂಡ ಇಲ್ಲಿ ಕಾಣುತ್ತೇವೆ. ವಿವಿಧ ಕಾಲದ ಐತಿಹಾಸಿಕ ಸ್ಮಾರಕಗಳು ಜಿಲ್ಲೆಯಾದ್ಯಂತ ಹರಡಿವೆ, ಈ ಜಿಲ್ಲೆಯ ವಿಶೇಷ ಕಲೆಯಾದ ಬಿದರಿ ಕಲೆಗಾಗಿ ಬೀದರ ವಿಶ್ವಪ್ರಸಿದ್ಧಿಯಾಗಿದೆ.

೩. ಭೌಗೋಳಿಕತೆ

ವ್ಯಷ್ಟಿ-ಸಮಷ್ಟಿಯ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಒಬ್ಬ ವ್ಯಕ್ತಿಯ ಬೆಳವಣಿಗೆಗೆ ಅಥವಾ ಒಂದು ಸಮುದಾಯದ ಬೆಳವಣಿಗೆಗೆ ಯಾವುದು ಕಾರಣವೆಂದರೆ ಬಹುಮುಖ್ಯವಾಗಿ ಅಲ್ಲಿನ ಭೌಗೋಳಿಕತೆ ಎಂದು ಹೇಳಬಹುದು. ಭೌಗೋಳಿಕತೆ ಎಂದರೆ ನೆಲ, ಜಲ, ಗಾಳಿ, ಇವೆಲ್ಲ ಒಳಗೊಂಡ ಒಂದು ನಿರ್ದಿಷ್ಟ ಪ್ರಾದೇಶಿಕತೆ. ಸಹಜವಾಗಿ ಮಾತನಾಡುವಾಗ ಇಲ್ಲಿ ಅಭಿವೃದ್ಧಿಯಾಗಿದೆ ಅಂದಾಗ ತಟ್ಟನೆ ಇದು ಅಲ್ಲಿನ ಮಣ್ಣಿನ ಗುಣವೆಂದು ಮಾತನಾಡುವುದು ಸಹಜ. ಹೀಗೆ ಬೀದರಿನ ಭೌಗೋಳಿಕತೆಗೂ ಒಂದು ಗುಣವಿದೆ, ಅದು ವಿಶಿಷ್ಟವೂ ಆಗಿದೆ. ಆದ್ದರಿಂದ ಬೀದರ ನಾಡು ಸಾಂಸ್ಕೃತಿಕವಾಗಿಯೂ ಸಮೃದ್ಧವಾಗಿದೆ.

ಅತ್ಯಂತ ಪ್ರಾಚೀನ ಐತಿಹಾಸಿಕ ಪರಂಪರೆ ಹೊಂದಿದ ಬೀದರ, ರಾಮಾಯಣ-ಮಹಾಭಾರತ ಕಾಲದಿಂದ ಪ್ರಸಿದ್ಧಿಯನ್ನು ಪಡೆದಿದೆ. ಮಹಾಭಾರತದ ಕಾಲಕ್ಕೆ ವಿದರ್ಭ ವಿದುರನಗರವೆಂದು ಖ್ಯಾತಿ ಪಡೆದ ಬೀದರ, ಪ್ರಾಚೀನ ಕಾಲದಲ್ಲಿ ಶ್ರೇಷ್ಠ ನಾಗರಿಕತೆಗೆ ಹೆಸರುವಾಸಿಯಾಗಿತ್ತು. ಕಾಲಕಾಲಕ್ಕೆ ತನ್ನ ಹೆಸರು ಬದಲಾಯಿಸಿ ಕೊಳ್ಳುತ್ತಾ ಇಂದು 'ಬೀದರ' ಎಂದು ಕರೆಸಿಕೊಳ್ಳುತ್ತಿದೆ. ಸ್ವಾತಂತ್ರ್ಯೋತ್ತರದಿಂದ ರಾಜಕೀಯ ಭೂಪಟದಲ್ಲಿ ಕರ್ನಾಟಕದ ಉತ್ತರ ಭಾಗಕ್ಕೆ ಇರುವ ಬೀದರ ಕೊನೆಯ ಸಣ್ಣ ಜಿಲ್ಲೆ, ಆದರೆ ಕರ್ನಾಟಕದ ಮಟ್ಟಿಗೆ ಇದು ಕಳಸಪ್ರಾಯ ಪ್ರದೇಶ.

ಜಿಲ್ಲೆಯ ಪೂರ್ವದಲ್ಲಿ ಆಂಧ್ರಪ್ರದೇಶದ ಮೇದಕ ಮತ್ತು ನಿಜಾಮಾಬಾದ ಜಿಲ್ಲೆಗಳಿವೆ. ಉತ್ತರ ಹಾಗೂ ಪಶ್ಚಿಮದಲ್ಲಿ ಮಹಾರಾಷ್ಟ್ರದ ನಾಂದೇಡ್ ಮತ್ತು ಉಸ್ಮಾನಾಬಾದ ಜಿಲ್ಲೆಗಳಿವೆ. ದಕ್ಷಿಣದಲ್ಲಿ ಕರ್ನಾಟಕದ ಗುಲ್ಬರ್ಗ ಜಿಲ್ಲೆ ಇದೆ. ಬೀದರ, ೧೭° ೩೫° ಮತ್ತು ೧೮° ೨೫° ಉತ್ತರ ಅಕ್ಷಾಂಶ ಹಾಗೂ ೭೬° ೪೨° ಮತ್ತು ೭೭° ೩೯° ಪೂರ್ವ ರೇಖಾಂಶಗಳ ಮಧ್ಯದಲ್ಲಿ ಹರವಿಕೊಂಡಿರುವ ಜಿಲ್ಲೆಯ ಭೌಗೋಳಿಕ ಮೇರೆಯು ೫,೪೧,೭೬೪ ಹೆಕ್ಟೇರು, ಅಂದರೆ ಸುಮಾರು ೫,೪೫೮ ಚ.ಕಿ.ಮೀ. ವಿಸ್ತಾರವಾಗಿದೆ. ಈ ಜಿಲ್ಲೆಯು ವಿಸ್ತೀರ್ಣದಲ್ಲಿ ರಾಜ್ಯದ ೧೭ನೇ ಸ್ಥಾನ ದಲ್ಲಿದೆ. ೨೦೦೧ರ ಜನಗಣತಿಯ ಪ್ರಕಾರ ಇಲ್ಲಿಯ ಜನಸಂಖ್ಯೆ ೧೫,೦೧,೩೭೮ ಆಗಿದ್ದು ಒಟ್ಟು ಜನಸಂಖ್ಯೆಯ ಶೇ. ೨.೮೧ರಷ್ಟಾಗಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆ ಶೇ. ೭೬ ರಷ್ಟು ಜನತೆ ಜಿಲ್ಲೆಯ ಸುಮಾರು ೬೨೨ ಹಳ್ಳಿಗಳಲ್ಲಿ ಮತ್ತು ೩೦೧

ಜನವಸತಿಗಳಲ್ಲಿ ವಾಸಿಸುತ್ತಿದ್ದಾರೆ. ಬೀದರ ಜಿಲ್ಲೆಯು ೫ ತಾಲೂಕಗಳು ಮತ್ತು ೬ ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಪ್ರಾದೇಶಿಕತೆ ಅಸಮಾನತೆಯನ್ನು ಹೋಗಲಾಡಿಸಲು ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಡಾ॥ ನಂಜುಂಡಪ್ಪನವರ ನೇತೃತ್ವದಲ್ಲಿ ಜೂನ್ ೨೦೦೨ರಲ್ಲಿ ಸಲ್ಲಿಸಿದ ನಂಜುಂಡಪ್ಪ ವರದಿಯ ಪ್ರಕಾರ, ಜಿಲ್ಲೆಯ ೫ ತಾಲೂಕಗಳಲ್ಲಿ ನಾಲ್ಕು ತಾಲೂಕುಗಳು ಅತಿ ಹಿಂದುಳಿದ ತಾಲೂಕಗಳೆಂದು ಗುರುತಿಸಲಾಗಿದೆ. ಇದಕ್ಕಿಂತ ಮುಂಚೆ ೧೯೯೯ರಲ್ಲಿ ಕರ್ನಾಟಕ ಸರಕಾರ ಪ್ರಕಟಿಸಿರುವ ಮಾನವ ಸಂಪನ್ಮೂಲ ಅಭಿವೃದ್ಧಿಯ ಅನುಸೂಚಿಯ ಪ್ರಕಾರ ಬೀದರ ಜಿಲ್ಲೆಯು ರಾಜ್ಯದಲ್ಲೇ ಬಡ ಜಿಲ್ಲೆಯಾಗಿದ್ದು, ಮಾನವ ಸಂಪನ್ಮೂಲ ಅಭಿವೃದ್ಧಿಯ ಅನುಸೂಚಿಯ ಪ್ರಕಾರ ರಾಜ್ಯದ ೨೭ ಜಿಲ್ಲೆ ಗಳಲ್ಲಿ ಬೀದರ ೧೮ನೇ ಸ್ಥಾನದಲ್ಲಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೀದರ ೧೩೯ನೇ ಸ್ಥಾನದಲ್ಲಿದೆ. ಸಾಮಾನ್ಯ ಅನುಸೂಚಿಯ ಪ್ರಕಾರ ಅದೇ ಸ್ಥಾನದಲ್ಲಿದ್ದು ಅದರ ಜಿ.ಡಿ.ಐ. ಅನುಸೂಚಿಯ ಪ್ರಕಾರ (೦.೪೦೩) ಇದ್ದು ಕರ್ನಾಟಕದ ೨೭ ಜಿಲ್ಲೆಗಳಲ್ಲಿ ಬೀದರದ ಸ್ಥಾನ ೧೮ನೆಯದಾಗಿದೆ. ಹಾಗೆಯೇ ಅದೇ ಮಾನವ ಸಂಪನ್ಮೂಲ ಅಭಿವೃದ್ಧಿಯ ವರದಿಯ ಪ್ರಕಾರ ಶಿಕ್ಷಣ ಹಾಗೂ ಆರೋಗ್ಯದಲ್ಲಿ ೧೭ನೇ ಸ್ಥಾನವನ್ನು, ಉತ್ಪನ್ನದ ಕ್ಷೇತ್ರದಲ್ಲಿ ೨೦ನೇ ಸ್ಥಾನವನ್ನು ಹೊಂದಿದೆ. ಹೀಗೆ ಸ್ವಾತಂತ್ರ್ಯೋತ್ತರದಲ್ಲಿ ನಡೆದ ಎಲ್ಲಾ ಅಧ್ಯಯನ ಹಾಗೂ ಸಮೀಕ್ಷೆಗಳ ಪ್ರಕಾರ ಕರ್ನಾಟಕದಲ್ಲಷ್ಟೇ ಅಲ್ಲದೇ ದಕ್ಷಿಣ ಭಾರತದಲ್ಲಿಯೇ ಬೀದರ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ. ಇದಕ್ಕೆ ಅನೇಕ ಕಾರಣಗಳಲ್ಲಿ ಭೌಗೋಳಿಕತೆಯು ಒಂದು ಕಾರಣವಾಗಿದೆ.

ಸಮುದ್ರ ಮಟ್ಟದಿಂದ ಸುಮಾರು ೨,೨೦೬ ಅಡಿ ಎತ್ತರವಿರುವ ಬೀದರ ಸಮಶೀತೋಷ್ಣ ಹವಾಮಾನವನ್ನು ಹೊಂದಿದೆ. ಇದು ದಖನ್ ಪ್ರಸ್ಥಭೂಮಿಯಾಗಿದ್ದು ವಿಶಾಲವಾದ ಅಟ್ಟದ ಪ್ರದೇಶಗಳಿಂದ ಕೂಡಿದೆ. ಅದಕ್ಕಾಗಿ ಇದನ್ನು ಅಟ್ಟಳೆ ನಾಡೆಂದೂ ಕರೆಯುವರು.

ಬೀದರ ಜಿಲ್ಲೆಯ ತಾಲೂಕುವಾರು ಭೌಗೋಳಿಕತೆಯ ವಿವರ :

ತಾಲೂಕುಗಳು	**ಹಳ್ಳಿಗಳು**	**ವಿಸ್ತೀರ್ಣ(ಚ.ಕಿ.ಮೀ.)**	**ಮಳೆ(ಸರಾಸರಿ ವಾರ್ಷಿಕ ಮಿ.ಮಿ.)**
ಬೀದರ	೧೫೦	೯೨೫.೩	೯೦೭.೫
ಔರಾದ	೧೪೩	೧,೨೨೮.೬	೯೧೦
ಭಾಲ್ಕಿ	೧೨೨	೧,೦೧೩.೮	೯೧೯
ಬಸವಕಲ್ಯಾಣ	೧೧೪	೧,೨೦೨	೮೯೧.೨೬
ಹುಮನಾಬಾದ	೮೭	೯೮೮.೨	೮೯೪.೨೬

ಭೂಮಿ ಮತ್ತು ಮಣ್ಣು :

ಬೀದರ ಅಟ್ಟಳೆಯ ನಾಡಾಗಿದ್ದು, ಸಮುದ್ರಮಟ್ಟಕ್ಕಿಂತ ಎತ್ತರದ ಪ್ರಾಂತ್ಯ ವಾಗಿರುವುದರಿಂದ ಇಲ್ಲಿನ ಹವಾಮಾನ ಆರೋಗ್ಯಕರ ಹಾಗೂ ಹಿತವಾಗಿದೆ. ಸಾಮಾನ್ಯವಾಗಿ ಬೇಸಿಗೆಯಲ್ಲಿ ಶೆಖೆ ಎನಿಸಿದರೂ ಡಿಸೆಂಬರ್‌ನಲ್ಲಿ ಚಳಿ ಹೆಚ್ಚು. ಮುಂಗಾರು ಮಳೆಗಾಲ ಬಿಟ್ಟರೆ ಉಳಿದ ದಿನಗಳಲ್ಲಿ ಶುಷ್ಕ ವಾತಾವರಣವಿರುತ್ತದೆ.

ಜಿಲ್ಲೆಯ ಭೂಮಿಯ ಮಣ್ಣು ಎರಡು ತೆರನಾಗಿದೆ. ಕಪ್ಪುಮಣ್ಣು ಮತ್ತು ಕೆಂಪು ಕಲ್ಲಿನ ಮಿಶ್ರಣವಿರುವ (ಕೆಂಪು)ಮಣ್ಣಿನ ಭೂಮಿಯೆಂದು ಕರೆಯುವರು. ಔರಾದ ಹಾಗೂ ಭಾಲ್ಕಿ ತಾಲೂಕುಗಳು ಗಟ್ಟಿಯಾದ ಕಪ್ಪುಮಣ್ಣಿನಿಂದ ಕೂಡಿದ ಪ್ರದೇಶ ವಾಗಿದೆ. ಇಲ್ಲಿನ ಮಣ್ಣು ಜೇಡಿ ಹಾಗೂ ಮರಳು ಬೆರೆತು ಜೇಡಿಮಣ್ಣಾಗಿದೆ. ಈ ಮಣ್ಣು ನೀರು ಹಿಡಿದಿಟ್ಟುಕೊಳ್ಳುವ ಕಡಿಮೆ ಸಾಮರ್ಥ್ಯ ಹೊಂದಿರುತ್ತವೆ. ಬಸವ ಕಲ್ಯಾಣ ತಾಲೂಕಿನ ಅರ್ಧದಷ್ಟು ಭಾಗ ಕಪ್ಪುಮಣ್ಣಿನ ಪ್ರದೇಶವಾಗಿದ್ದು ಉಳಿದ ಅರ್ಧ ಭಾಗ ಕೆಂಪು ಮಣ್ಣಿನ ಪ್ರದೇಶವಾಗಿದೆ. ಬೀದರ ತಾಲೂಕಿನ ಕೆಲಪ್ರದೇಶ ಹಾಗೂ ಹುಮನಾಬಾದಿನ ಬಹುತೇಕ ಭೂಮಿ ಜಂಬುಮಣ್ಣಿನ ಅಂದರೆ ಕಪ್ಪು ಮಣ್ಣಿನಿಂದ ಕೂಡಿದೆ. ಉಳಿದ ಭಾಗದ ಪ್ರದೇಶ ಮಧ್ಯಮ ಗುಣದ ಕಪ್ಪುಭೂಮಿ ಯಾಗಿದೆ. ವಿಶೇಷವಾಗಿ ಬಸವಕಲ್ಯಾಣ ತಾಲೂಕು ವ್ಯವಸಾಯ ಫಲಪ್ರದಾಯ ವಾಗಿದ್ದು ಬಿತ್ತಿದ್ದನ್ನು ಬೆಳೆಯುವ ಹುಲುಸಾದ ನೆಲವಾಗಿದೆ.

ಜಲಸಂಪತ್ತು :

ನೀರು ಅತ್ಯಂತ ಅವಶ್ಯಕ ವಸ್ತುಗಳಲ್ಲಿ ಒಂದು. ಜಿಲ್ಲೆಯಲ್ಲಿನ ನದಿ ಕೆರೆಗಳು ಇಲ್ಲಿನ ಮುಖ್ಯ ಜಲಸಂಪತ್ತಾಗಿವೆ. ಸಾಮಾನ್ಯವಾಗಿ, ವ್ಯವಸಾಯಕ್ಕೆ ನೀರೇ ಅವಶ್ಯಕ ವಾಗಿದ್ದು, ಜಲಸಂಪತ್ತಿನ ಮೂಲ ನೈರುತ್ಯ ಮತ್ತು ಈಶಾನ್ಯ ಮಾರುತಗಳಿಂದ ಬರುವ ಮಳೆಯಿಂದ ಮಾತ್ರ. ಜಿಲ್ಲೆಯಲ್ಲಿ ಎರಡು ಮುಖ್ಯ ಜಲಾನಯನ ಭೂಮಿಗಳನ್ನು ಕಾಣಬಹುದು. ಗೋದಾವರಿ ಹಾಗೂ ಕೃಷ್ಣಾ ನದಿಗಳ ಉಪನದಿಗಳು ಜಿಲ್ಲೆಯಲ್ಲಿ ಹರಿಯುತ್ತವೆ. ಬೀದರ ಜಿಲ್ಲೆಯ ಮುಖ್ಯ ನದಿ ಮಾಂಜರಾ. ಇದು ಗೋದಾವರಿಯ ಉಪನದಿಯಾಗಿದೆ. ಕಾರಂಜಾ ನದಿ ಮಾಂಜರಾ ನದಿಯ ಉಪನದಿಯಾಗಿದೆ. ಮುಲ್ಲಾಮಾರಿ ನದಿ ಭೀಮಾನದಿಯ ಮುಖ್ಯ ಉಪನದಿಯಾಗಿದೆ. ಕಾಗಿಣ ನದಿಯೂ ಸಹ ಭೀಮೆಯ ಉಪನದಿಯಾಗಿದೆ, ಭೀಮಾನದಿ ಕೃಷ್ಣಾನದಿಯ ಒಂದು ಮುಖ್ಯ ಉಪನದಿ. ಹೀಗೆ ಈ ನದಿಗಳು ಬೀದರದಲ್ಲಿ ಹರಿಯುತ್ತಾ ಜಿಲ್ಲೆಯ ಜಲಸಂಪತ್ತಿಗೆ ನೆರವಾಗಿವೆ.

ಮಾಂಜರಾ ನದಿ ಮಹಾರಾಷ್ಟ್ರದ ಭೀಡ್ ಜಿಲ್ಲೆಯ ಬೆಟ್ಟ ಶ್ರೇಣಿಗಳಲ್ಲಿ ಸಮುದ್ರಮಟ್ಟದಿಂದ ೮೨೩ ಮೀಟರ್‌ಗಳಷ್ಟು ಎತ್ತರದಲ್ಲಿ ಹುಟ್ಟುತ್ತದೆ. ಭಾಲ್ಕಿ, ಔರಾದ ಹಾಗೂ ಬೀದರ ತಾಲೂಕುಗಳಲ್ಲಿ ಹರಿಯುತ್ತದೆ. ಇದರ ಒಟ್ಟು ಉದ್ದ ೭೦೦ಕಿ.ಮೀ. ಬೀದರ ಜಿಲ್ಲೆಯಲ್ಲಿ ಈ ನದಿಯ ಹರಿವಿನ ಉದ್ದ ೧೬೭ ಕಿ.ಮೀ. ಈ ನದಿ ಬೀದರಿನ ಬತ್ತಿದ ಪ್ರದೇಶಗಳಿಗೆ ನೀರು ಉಣಿಸುತ್ತದೆ.

ಕಾರಂಜಾ ನದಿಯು ಆಂಧ್ರ ಪ್ರದೇಶದ ಸಂಗಾರೆಡ್ಡಿ ಜಿಲ್ಲೆಯ ಜಹಿರಾಬಾದ ತಾಲೂಕಿನ ಕೋಹಿರು ಹಳ್ಳಿಯ ಬಳಿ ಹುಟ್ಟಿ ಮುಂದೆ ಇದು ಬೀದರಿನ ಭಾಲ್ಕಿ ತಾಲೂಕಿನಲ್ಲಿ ಮಾಂಜರಾ ನದಿಯನ್ನು ಕೂಡುತ್ತದೆ. ಕಾರಂಜಾ ನದಿಯು ಬೀದರ, ಹುಮನಾಬಾದ, ಮತ್ತು ಭಾಲ್ಕಿ ತಾಲೂಕುಗಳಲ್ಲಿ ಸುಮಾರು ೮೦ ಕಿ.ಮೀ. ಹರಿಯುತ್ತದೆ. ಬೀದರ್‌ಗೆ ೨೯ ಕಿ.ಮೀ. ದೂರದ ಬ್ಯಾಲಹಳ್ಳಿಯ ಸಮೀಪ ಕಾರಂಜಾ ನದಿಗೆ ದೊಡ್ಡ ಅಣೆಕಟ್ಟನ್ನು ಕಟ್ಟಲಾಗಿದೆ.

ಬೀದರ ಜಿಲ್ಲೆಯಲ್ಲಿಯೇ ಹುಟ್ಟಿ ಹರಿಯುವ ನದಿ ಮುಲ್ಲಾಮಾರಿ. ಇದನ್ನು ಬಸವ ಕಲ್ಯಾಣ ತಾಲೂಕಿನ ಭಾಗ್ಯದ ಬಟ್ಟಲೆಂದೇ ಕರೆಯಲಾಗಿದೆ. ಬಸವಕಲ್ಯಾಣದ ಮತಾಲಹಳ್ಳಿಯ ಬಳಿ ಹುಟ್ಟಿ ವಾಯವ್ಯ ದಿಕ್ಕಿನಿಂದ ನೈರುತ್ಯ ದಿಕ್ಕಿಗೆ ಸುಮಾರು ೪೬ ಕಿ.ಮೀ.ಗಳಷ್ಟು ದೂರ ಹರಿಯುತ್ತದೆ.

ಇತರ ಉಪನದಿಗಳೆಂದರೆ ಮಾಣಿಕನಗರ ನಾಲಾ ಕಾರಂಜಾ ನದಿಯ ಉಪನದಿ ಬಸವ ಕಲ್ಯಾಣದ ಗುಣತೀರ್ಥವಾಡಿಯಲ್ಲಿ ಹುಟ್ಟಿ ೪೦ ಕಿ.ಮೀ. ಹರಿದು ಕಾರಂಜಾ ನದಿ ಸೇರುತ್ತದೆ. ಕಾರಂಜದ ಇನ್ನೊಂದು ಉಪನದಿ ಹಳ್ಳಿಖೇಡ ನಾಲಾ. ಇದು ಬಸವಕಲ್ಯಾಣದ ಗೋರ್ಟಾ ಬಳಿ ಹುಟ್ಟಿ ಹುಮನಾಬಾದಿನ ಮಾಣಿಕನಗರ ನಾಲಾವನ್ನು ಸೇರುತ್ತದೆ. ಚುಳುಕಿ (ನದಿ) ನಾಲಾ ಬಸವಕಲ್ಯಾಣ ತಾಲೂಕಿನ ರಾಮತೀರ್ಥ ವಾಡಿಯಲ್ಲಿ ಹುಟ್ಟಿ ಸುಮಾರು ೪೦ ಕಿ.ಮೀ. ಹರಿದು ಇಂಚೂರ ಬಳಿ ಕಾರಂಜಾ ನದಿ ಸೇರುತ್ತದೆ. ಭಾಲ್ಕಿ ತಾಲೂಕಿನ ಖಾನಾಪೂರ ಹಳ್ಳಿಯ ಬಳಿ ಮಧುರ (ತೊರೆ) ನಾಲೆ ಹುಟ್ಟಿ ಆಗ್ನೇಯದ ಕಡೆ ಹರಿದು ಬರೂರ ಸಮೀಪ ಕಾರಂಜಾ ನದಿಯನ್ನು ಸೇರುತ್ತದೆ. ಜಿಲ್ಲೆಯಲ್ಲಿ ಸುಮಾರು ೫೦ಕ್ಕೂ ಹೆಚ್ಚು ಕೆರೆಗಳು ಇದ್ದು ವ್ಯವಸಾಯದ ಭೂಮಿಗೆ ನೀರುಣಿಸುತ್ತಿವೆ. ಅಲ್ಲದೆ ಸಾವಿರಾರು ಬಾವಿಗಳು ಕುಡಿಯುವ ನೀರಿಗೂ, ಮತ್ತು ಕೃಷಿ ಭೂಮಿಗೂ ನೆರವಾಗಿವೆ.

ಬೀದರ ನಗರಕ್ಕೆ ಸಮೀಪದ ನಾನಕ ಝರಾ, ನರಸಿಂಹ ಝರಾ, ಪಾಪನಾಶ ಮತ್ತು ನಗರಕ್ಕೆ ದೂರದ ಗಾಯಮುಖ, ಬಸವಕಲ್ಯಾಣದ ಬಂಧವರ ಓಣಿ, ಮೊರ್ಖಂಡಿಗಳಲ್ಲಿ ನೀರಿನ ಝರಿ (ಬುಗ್ಗೆ)ಗಳು ಇದ್ದು ಜಲಚಿಕಿತ್ಸೆಗೆ ಹೆಸರಾದ ಜಲಸಂಪನ್ಮೂಲಗಳಿವೆ.

ಗಂಡೋರಿ ನಾಲಾ, ಹುಡುಗಿಹಳ್ಳ ಇವು ಜಿಲ್ಲೆಯ ಚಿಕ್ಕ ನದಿಗಳಾಗಿವೆ ಮತ್ತು ಜಿಲ್ಲೆಯ ನೈರುತ್ಯದಲ್ಲಿ ಹರಿಯುವ ಬೆಣ್ಣೆತೊರೆ ಗುಲ್ಬರ್ಗಾ-ಬೀದರಿಗೂ ಗಡಿರೇಖೆಯಾಗಿ ಹರಿಯುತ್ತದೆ.

ನೀರಾವರಿ :

ಬೀದರ ಜಿಲ್ಲೆಯಲ್ಲಿ ಒಟ್ಟು ೩.೭೯ ಲಕ್ಷ ಹೆಕ್ಟೇರ್ ಭೂಮಿಯು ಬಿತ್ತುವಿಕೆಯ ಭೂಮಿಯಾಗಿದ್ದು ಅದರಲ್ಲಿ ಶೇ. ೮೧.೦೯ ರಷ್ಟು ಭೂಮಿಯನ್ನು ಆಹಾರ ಧಾನ್ಯಗಳನ್ನು ಬೆಳೆಸಲು ಉಪಯೋಗಿಸಲಾಗುತ್ತಿದೆ. ಶೇ. ೦.೬೦ರಷ್ಟು ಭೂಮಿಯನ್ನು ತೋಟಗಾರಿಕೆ ಬೆಳೆಗಾಗಿ ಉಪಯೋಗಿಸಲಾಗುತ್ತಿದೆ. ಉಳಿದ ಶೇ. ೨೦ರಷ್ಟು ಭೂಭಾಗವನ್ನು ಇತರ ವಾಣಿಜ್ಯ ಬೆಳೆಗಳಿಗಾಗಿ ಉಪಯೋಗಿಸಲಾಗುತ್ತಿದೆ.

ಜಿಲ್ಲೆಯ ನೀರಾವರಿ ಸೌಕರ್ಯದ ಸ್ಥಿತಿಯು ತುಂಬಾ ಗಂಭೀರವಾಗಿದೆ. ಬಿತ್ತುವಿಕೆಯ ಭೂಮಿ ೩.೭೯ ಲಕ್ಷ ಹೆಕ್ಟೇರು ಭೂಮಿಯಲ್ಲಿ ಕೇವಲ ೩೭೧.೫೫ ಹೆಕ್ಟೇರ್ ಭೂಮಿ ಮಾತ್ರ ನೀರಾವರಿ ಸೌಕರ್ಯದ ಅಡಿಯಲ್ಲಿದೆ.

ಬೀದರ ಜಿಲ್ಲೆಯು ಎರಡು ನದಿಗಳ ಜಲಾನಯನ ವಿಭಾಗಗಳಲ್ಲಿ ವಿಭಜಿತವಾಗಿದೆ. ಜಿಲ್ಲೆಯ ಪ್ರತಿಶತ ೮೦ರಷ್ಟು ಕ್ಷೇತ್ರವು ಗೋದಾವರಿ ನದಿಯ ಜಲಾನಯನ ಪ್ರದೇಶದ ಅಡಿಯಲ್ಲಿ ಬಂದರೆ, ಉಳಿದ ಪ್ರತಿಶತ ೨೦ರಷ್ಟು ಕ್ಷೇತ್ರವು ಕೃಷ್ಣಾ ಜಲಾನಯನದ ಅಡಿಯಲ್ಲಿ ಬರುತ್ತದೆ.

ಶೇ. ೯.೭೦ರಷ್ಟು ಭೂಮಿ ಮಾತ್ರ ನೀರಾವರಿ ಸೌಲಭ್ಯದ ಅಡಿಯಲ್ಲಿ ಬರುತ್ತದೆ. ಉಳಿದ ಶೇ. ೯೦.೩೦ ರಷ್ಟು ಭೂಮಿ ಒಣಭೂಮಿಯಾಗಿದೆ.

ಮುಖ್ಯ ಬೆಳೆಗಳು :

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು ವ್ಯವಸಾಯ ಪ್ರಧಾನವಾದ ಜಿಲ್ಲೆಗಳಾಗಿವೆ. ಹೆಚ್ಚು ಬೆಟ್ಟಗುಡ್ಡಗಳಿಲ್ಲದ ಮೈದಾನ ಪ್ರದೇಶವನ್ನು ಹೊಂದಿದ ಬೀದರ ಜಿಲ್ಲೆಯಲ್ಲಿ ಮುಖ್ಯವಾದ ಆಹಾರ ಬೆಳೆ ಜೋಳ. ಸುಮಾರು ೧.೧೦ ಲಕ್ಷ ಎಕರೆ ಭೂಮಿಯಲ್ಲಿ ಜೋಳ ಬೆಳೆಸುವರು. ಇಲ್ಲಿನ ಇತರೆ ಬೆಳೆಗಳೆಂದರೆ ಹೆಸರು, ಕಡಲೆ, ತೊಗರಿ, ಭತ್ತ, ಸೇಂಗ, ಎಳ್ಳು, ಹೈಬ್ರಿಡ್ ಜೋಳ ಹಾಗೂ ಹೈಬ್ರಿಡ್ ಸಜ್ಜೆ, ಸೂರ್ಯಕಾಂತಿ, ಕೊತ್ತಂಬರಿ, ಹತ್ತಿ ಇತ್ಯಾದಿ, ಅಲ್ಲದೆ ಎಣ್ಣೆಕಾಳುಗಳು, ಹೂ, ಹಣ್ಣು, ತರಕಾರಿ, ಹೊಗೆಸೊಪ್ಪುಗಳನ್ನು ಸಹ ಬೆಳೆಯಲಾಗುತ್ತದೆ. ಔರಾದ, ಭಾಲ್ಕಿ ತಾಲೂಕಿನ ಕಪ್ಪು ಭೂಮಿಯು ಹತ್ತಿ ಬೆಳೆಗೆ ಅನುಕೂಲವಾದರೆ, ಬೀದರ, ಬಸವಕಲ್ಯಾಣ ಹಾಗೂ

ಹುಮನಾಬಾದ ತಾಲೂಕುಗಳಲ್ಲಿ ಕಬ್ಬು ಬೆಳೆಯುತ್ತಿದ್ದು, ಈ ಬೆಳೆಗಳಿಗೆ ನೀರಾವರಿ ಸಹಾಯವನ್ನು ಪಡೆಯಲಾಗುತ್ತಿದೆ. ಭೂಮಿಯ ಶೇ. ೭೯ ಭಾಗದಲ್ಲಿ ಆಹಾರದ ಬೆಳೆಗಳನ್ನು, ಉಳಿದ ಭಾಗದಲ್ಲಿ ಆಹಾರೇತರ ಬೆಳೆಗಳನ್ನು ಬೆಳೆಸಲಾಗುತ್ತದೆ. ಜಿಲ್ಲೆಯಲ್ಲಿ ವರ್ಷಕ್ಕೆ ಸರಾಸರಿ ೨ ಬೆಳೆಗಳನ್ನು ತೆಗೆಯಲಾಗುತ್ತದೆ.

ತಾಲೂಕುವಾರು ಬೆಳೆಗಳು :

೧. ಬೀದರ	ಜೋಳ, ಕಡಲೆ, ಕಬ್ಬು, ತೊಗರಿ, ಸೇಂಗಾ (ನೆಲಗಡಲೆ)
೨. ಔರಾದ	ಜೋಳ, ಹತ್ತಿ, ಕಡಲೆ, ಗೋಧಿ, ತೊಗರಿ, ಉದ್ದು, ಹೆಸರು
೩. ಬಸವಕಲ್ಯಾಣ	ಜೋಳ, ಸಜ್ಜೆ, ಸೇಂಗಾ, ಭತ್ತ, ಕಬ್ಬು,ತೊಗರಿ, ಹತ್ತಿ ಎಣ್ಣೆಬೀಜ
೪. ಭಾಲ್ಕಿ	ಜೋಳ, ಸೇಂಗಾ, ಕಡಲೆ, ತೊಗರಿ, ಭತ್ತ, ಹತ್ತಿ
೫. ಹುಮನಾಬಾದ	ಸೇಂಗಾ, ಜೋಳ, ಸಜ್ಜೆ, ಗೋಧಿ, ಕಡಲೆ, ಕಬ್ಬು, ತೊಗರಿ

ಜಿಲ್ಲೆಯಲ್ಲಿ ಸೂಕ್ತವಾದ ಹವಾಗುಣ ಮತ್ತು ಫಲವತ್ತಾದ ಮಣ್ಣು ಇರುವದರಿಂದ ಹೂ, ಹಣ್ಣು ಮತ್ತು ತರಕಾರಿ ಬೆಳೆಗೆ ಮತ್ತು ಅವುಗಳ ಅಭಿವೃದ್ಧಿಗೆ ಯೋಗ್ಯ ಎನ್ನಲಾಗಿದೆ. ಬೀದರ, ಹುಮನಾಬಾದ, ಬಸವಕಲ್ಯಾಣ ತಾಲೂಕುಗಳಲ್ಲಿ ದ್ರಾಕ್ಷಿ, ಮಾವು, ಸಪೋಟಾ, ಸೀಬೆ, ನಿಂಬೆ, ಮೋಸಂಬಿ, ಆಲೂಗಡ್ಡೆ, ಕೋಸು, ಬದನೆ, ಟೋಮೇಟೋಗಳು ಬೆಳೆದರೆ ಭಾಲ್ಕಿ, ಔರಾದ ತಾಲೂಕುಗಳಲ್ಲಿ ಮಾವು, ಹುಣಸೆ, ಬಾಳೆ, ನಿಂಬೆ, ಮೆಣಸಿನಕಾಯಿ, ಬದನೆ ಮೊದಲಾದವು ವ್ಯವಸಾಯಕ್ಕೆ ಯೋಗ್ಯವಾಗಿವೆ. ಬಂಗಾರದ ಬದನೆ ಹಾಗೂ ಮೂಲೆಕಾಯಿಗಿಡ ಬೀದರ ಜಿಲ್ಲೆಯ ವಿಶೇಷ ತರಕಾರಿ ಬೆಳೆಗಳಾಗಿವೆ. ಜಿಲ್ಲೆಯ ತೋಟಗಾರಿಕೆ ಇಲಾಖೆ ವತಿಯಿಂದ ಫಾರಂ ಮತ್ತು ನರ್ಸರಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು ಇವುಗಳ ಮುಖಾಂತರ ಗೋಡಂಬಿ ಮತ್ತು ಹೂವಿನ ಗಿಡಗಳಿಗೆ ಆದ್ಯತೆ ನೀಡಲಾಗುತ್ತಿದೆ.

ಜಿಲ್ಲೆಯ ಅರಣ್ಯ ಸಂಪತ್ತು :

ಪ್ರಾಚೀನ ಕಾಲದಲ್ಲಿ ದಟ್ಟವಾದ ಸ್ವಾಭಾವಿಕ ಅರಣ್ಯಗಳಿದ್ದವು. ಕಾಲಕ್ರಮೇಣ ಯುದ್ಧಗಳು, ಜನವಸತಿ ಹೆಚ್ಚಾದಂತೆ ನಶಿಸಿವೆ. ಜಿಲ್ಲೆಯ ಶೇಕಡಾ ೪.೩ ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ಜಿಲ್ಲೆಯಲ್ಲಿ ಹುಮನಾಬಾದ ತಾಲೂಕು ಹೆಚ್ಚು ವಿಸ್ತೀರ್ಣದ ಅರಣ್ಯ ಪ್ರದೇಶ ಹೊಂದಿದೆ. ಈ ಅರಣ್ಯದ ಮುಖ್ಯ ಉತ್ಪನ್ನಗಳೆಂದರೆ ಜಾಲಿ, ದಿಂಡಿಗ, ಸೀತಾಫಲ, ಮುತ್ತುಗ, ಬಸವನಪಾದ, ಹರಗಲು, ಆಲ, ಅತ್ತಿ, ಅರಳೆ,

ಬೇವು, ಬಿಕ್ಕೆ, ಮಾವು, ಹುಣಸೆ ಮೊದಲಾದ ಮರಗಳು ಕಂಡುಬರುತ್ತವೆ. ಬೀಡಿ ಎಲೆಗಳು, ರೋಸಾ ಹುಲ್ಲು, ಸೀತಾಫಲ, ಜೇನು, ಜೇನುಮೇಣ, ಹುಣಸೆ, ಮಾವಿನ ಹಣ್ಣು ಮೊದಲಾದವು ಕೂಡ ಅರಣ್ಯ ಉತ್ಪನ್ನಗಳೆನಿಸಿವೆ.

ಬೀದರ ಜಿಲ್ಲೆಯಲ್ಲಿ ನಿಬಿಡವಾದ ಅರಣ್ಯಗಳಿಲ್ಲದಿರುವುದರಿಂದ ಪ್ರಾಣಿ ಪಕ್ಷಿಗಳ ಸಂಖ್ಯೆ ಕಡಿಮೆ. ಹಾಗಾಗಿ ಇಲ್ಲಿ ಯಾವುದೇ ಮೃಗಾಲಯವಿಲ್ಲ. ಭಾಲ್ಕಿ ತಾಲೂಕಿನ ಖಾನಾಪೂರ ಕಾಡಿನಲ್ಲಿ ಮಾತ್ರ ಚಿರತೆ, ಜಿಂಕೆ, ನವಿಲುಗಳು ಜೀವಿಸುತ್ತವೆ. ಸಾಮಾನ್ಯವಾಗಿ ಪಾರಿವಾಳ, ಗಿಳಿ, ಇತರೆ ಜಲಚರ ಪಕ್ಷಿಗಳೂ ಇವೆ.

ಜಿಲ್ಲೆಯ ಪಶುಸಂಪತ್ತು :

ಸಾಕುಪ್ರಾಣಿಗಳಾದ ಆಕಳು (ಹಸು), ಕುರಿ, ಕೋಳಿ ಮೊದಲಾದ ಪಶುಪಕ್ಷಿಗಳನ್ನು ಬಳಸಿಕೊಂಡು ಜಿಲ್ಲೆಯ ಜನತೆಯ ಜೀವನ ಸಾಗಿದೆ. ವ್ಯವಸಾಯ ಬಿಟ್ಟರೆ ಜನಜೀವನಕ್ಕೆ ಪ್ರಾಣಿಪಕ್ಷಿಗಳನ್ನು ಹೆಚ್ಚಾಗಿ ಅವಲಂಬಿಸಿದ್ದು ಅಧಿಕ ಅಭಿವೃದ್ಧಿಗೆ ನೆರವಾಗಿದೆ. ಜಿಲ್ಲೆಯ ವಿಶೇಷತೆ ಎಂದರೆ ದನಗಳಲ್ಲಿ ''ದೇವಣಿ ತಳಿ'' ಕೃಷಿಗೆ, ವ್ಯವಸಾಯಕ್ಕೆ ಅತ್ಯಂತ ಉಪಯುಕ್ತವಾದ್ದರಿಂದ ಹೆಚ್ಚಿನ ಬೇಡಿಕೆ ಕೂಡ ಇದೆ. ಇಡೀ ರಾಜ್ಯದಲ್ಲೇ ಒಂಟೆಗಳ ಸಂಖ್ಯೆ ಬೀದರ ಜಿಲ್ಲೆಯಲ್ಲಿ ಹೆಚ್ಚಾಗಿದ್ದು ಇಂದು ಅವುಗಳ ಸಂಖ್ಯೆ ಕ್ಷೀಣಿಸುತ್ತಿದೆ.

ವಿಶೇಷವಾಗಿ ಜಿಲ್ಲೆಯಲ್ಲಿ ಪಶು ವಿಶ್ವವಿದ್ಯಾಲಯ, ಪಶುವೈದ್ಯ ಸಂಸ್ಥೆಗಳು ಇವೆ. ಕೋಳಿ ಫಾರಂಗಳನ್ನು ಸ್ಥಾಪಿಸಲಾಗಿದೆ.

ಬಹುಮುಖ್ಯವಾಗಿ ಪಶುಸಂಪತ್ತು ಭೌಗೋಳಿಕ ಸಮತೋಲನಕ್ಕೆ ನೆರವಾಗಿದೆ. ಜಿಲ್ಲೆಯಲ್ಲಿ ಮೀನುಗಾರಿಕೆ ಒಂದು ಸಣ್ಣ ಉದ್ಯಮವಾಗಿದೆ. ನದಿ, ಕೆರೆ ಮತ್ತು ಬಾವಿಗಳು ಒಳನಾಡ ಮೀನುಗಾರಿಕೆಗೆ ಆಶ್ರಯವಾಗಿವೆ. ಬೋವಿ-ಕೋಲಿ ಜನಾಂಗದವರು ಈ ಉದ್ಯೋಗದಲ್ಲಿದ್ದು, ಮಾಂಜಾರಾ ನದಿಯೊಳಗೊಂಡಂತೆ ಸುಮಾರು ನಾಲ್ಕು ದೊಡ್ಡ ಕೆರೆಗಳು, ಹತ್ತು ಚಿಕ್ಕ ಕೆರೆಗಳು ಮೀನುಗಾರಿಕೆಗೆ ಅನುವು ಮಾಡಿಕೊಟ್ಟಿವೆ.

ಬೀದರ ಜಿಲ್ಲೆಯ ಖನಿಜ ಸಂಪನ್ಮೂಲಗಳು :

ಜಿಲ್ಲೆಯ ಮೂರನೆಯ ಭೂಭಾಗದ ದಖ್ಖನ್ ಟ್ರ್ಯಾಪ್ ಶಿಲಾರಸದಿಂದಾವರಿಸಿದ್ದು ಇವು ಅಗ್ನಿಶಿಲೆ ರಸಗಳಿಂದ ಕೂಡಿವೆ. ಈ ಟ್ರ್ಯಾಪ್‌ಗಳು ಸಮುದ್ರಮಟ್ಟದಿಂದ ೬೧೮ ಮೀ. ಎತ್ತರದಲ್ಲಿ ಕಾಣಿಸಿಕೊಳ್ಳುತ್ತವೆ. ಬೀದರ ಮತ್ತು ಹುಮನಾಬಾದ ತಾಲೂಕಿನ ಕೆಲವೆಡೆ ಈ ಟ್ರ್ಯಾಪ್‌ಗಳ ಮೇಲು ಪದರಗಳು ಕೆಂಪುಬಣ್ಣದ ಜಂಬಿಟ್ಟಿಗೆ

ಮಣ್ಣಾಗಿ ಪರಿವರ್ತನೆಗೊಂಡು, ಏರಿಳಿತಗಳ ಪ್ರಸ್ಥಭೂಮಿಯನ್ನು ಉಂಟು ಮಾಡುತ್ತವೆ. ಜಂಬಿಟ್ಟಿಗೆಯ ಈ ಮಣ್ಣಿನ ಗಾತ್ರ ಸುತ್ತ ೧೮ ರಿಂದ ೨೪ ಮೀ. ಆಗಿರುತ್ತದೆ. ಮೃದುವಾದ ಸಣ್ಣ ರಂಧ್ರಗಳಿಂದ ಕೂಡಿದ ಇವುಗಳನ್ನು ಇಟ್ಟಿಗೆಯ ರೂಪದಲ್ಲಿ ಕತ್ತರಿಸಿ ತೆಗೆಯಬಹುದು (ಇವು ಕೆಂಪುಕಲ್ಲು ಎಂದೇ ಪ್ರಸಿದ್ಧವಾಗಿವೆ). ಬೀದರ, ಹುಮನಾಬಾದ ಮತ್ತು ಬಸವಕಲ್ಯಾಣ ತಾಲೂಕಿನ ಅನೇಕ ಕಟ್ಟಡಗಳು ಇದರಿಂದ ನಿರ್ಮಿತವಾಗಿದ್ದು ಬೇರೆ ಬೇರೆ ಕಡೆಗಳಿಂದಲೂ ಬೇಡಿಕೆ ಇದೆ. ಅಂತರ್ಜಲದ ಹೆಚ್ಚುವಿಕೆಗೆ ಈ ಭೂಮಿ ಉಪಯುಕ್ತ, ಆದರೆ ಆರ್ಥಿಕ ಪ್ರಗತಿಗೆ ನೆರವಾಗುವ ಖನಿಜ ನಿಕ್ಷೇಪಗಳು ಇಲ್ಲಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲ.

ಬಸವಕಲ್ಯಾಣಕ್ಕೆ ೩ ಕಿ.ಮೀ. ಅಂತರದಲ್ಲಿ ಶೇ. ೩೫ರಿಂದ ೪೦ರಷ್ಟು ಅಲ್ಯುಮಿನಿಯಂ ಒಳಗೊಂಡ ಮರಳು ಮಿಶ್ರಿತ ಬಾಕ್ಸೈಟ್ ಜೇಡು ಸಿಗುತ್ತದೆಂದು ಸಂಶೋಧಕರು ದಾಖಲಿಸಿದ್ದಾರೆ. ಇದೇ ಖನಿಜ ಬೀದರ್‌ನ ಇತರ ಕೆಲ ಪ್ರಾಂತ್ಯ ಗಳಲ್ಲಿ ಕೂಡ ಲಭ್ಯವಿದೆ. ಬಿಳಿಜೇಡಿನ ಗಣಿ ಕೆಲಸವು ಜಿಲ್ಲೆಯಲ್ಲಿದೆ. ಇದರಿಂದ ಪಿಂಗಾಣಿ ಸಾಮಾನು, ವಿದ್ಯುತ್ ಆವಾಹಕಗಳನ್ನು ಮತ್ತು ಇತರ ಅನೇಕ ವಸ್ತುಗಳನ್ನು ತಯಾರಿಸಬಹುದಾಗಿದೆ. ಬೀದರ ಸಮೀಪದ ಸಿರ್ಸಿ ಬಳಿ ಕೆಂಪು ಕಾವಿಮಣ್ಣು ದೊರೆಯುತ್ತಿದ್ದು, ಮನೆಗೆ ಬಣ್ಣ ಹಚ್ಚಲು ಬಳಸುತ್ತಾರೆ. ಇದನ್ನು ಜಾಜ ಎಂದೂ ಕರೆಯುವರು.

ಹೀಗೆ ಭೌಗೋಳಿಕವಾಗಿ ಬೀದರ ಜಿಲ್ಲೆ ವೈವಿಧ್ಯತೆಯನ್ನು ಹೊಂದಿದೆ. ಇಲ್ಲಿನ ಮಣ್ಣು ನೀರು ಗಾಳಿ ಆರೋಗ್ಯಕ್ಕೆ ಉಪಯುಕ್ತವಾಗಿವೆ. ನೆರೆ ಜಿಲ್ಲೆಗಳಿಗೆ ಹೋಲಿಸಿ ದರೆ ಇಲ್ಲಿನ ಹವಾಮಾನ ತುಂಬಾ ಉತ್ತಮ. ಅಂತೆಯೇ ಇಲ್ಲಿ ವಾಯುದಳಕ್ಕೆ ಸೂಕ್ತ ಸ್ಥಳವಾಗಿದ್ದರಿಂದ ಬಹಳ ಹಿಂದಿನಿಂದಲೂ ವಾಯುದಳ (Air Force ವೈಮಾನಿಕ) ತರಬೇತಿ ಕೇಂದ್ರ ತೆರೆಯಲಾಗಿದೆ. ಪೌಷ್ಟಿಕವಾದ ಹಲವಾರು ಹಣ್ಣು ತರಕಾರಿಗೆ ಈ ಭೂಮಿ ಹೇಳಿ ಮಾಡಿಸಿದಂತಿದ್ದರೂ, ಜಲಸಂಪತ್ತಿನ ಕೊರತೆಯಿಂದಾಗಿ ಸಮರ್ಪಕ ಬೆಳೆ ತರಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಕೈಗಾರಿಕೆಯು ಇಲ್ಲಿ ಸಮರ್ಪಕವಾದ ರೀತಿಯಲ್ಲಿ ಬೆಳವಣಿಗೆಯನ್ನು ಸಾಧಿಸಿಲ್ಲ. ಹಾಗಾಗಿ ಇಲ್ಲಿನ ಆರ್ಥಿಕ ಅಭಿವೃದ್ಧಿಗೆ ಬಹುತೇಕವಾಗಿ ಕೃಷಿ ಮತ್ತು ಮಾನವಸಂಪತ್ತನ್ನು ಅವಲಂಬಿಸಬೇಕಾಗಿರುವುದು ಅನಿವಾರ್ಯವಾಗಿದೆ.

ಕಾರಂಜಾ-ಮಾಂಜಾರಾ ನದಿ ಕಣಿವೆ ಸಂಸ್ಕೃತಿ :

ಬೀದರಿನ ಪ್ರಾಚೀನತೆ ಮತ್ತು ಭೌಗೋಳಿಕ ವಿಸ್ತೀರ್ಣತೆ ಬಗೆಗೆ ನೋಡಿದಾಗ ಈ ಪ್ರದೇಶವು ಕೆಂಪು ಮತ್ತು ಕಪ್ಪುಮಣ್ಣಿನ ಪ್ರದೇಶವನ್ನೊಳಗೊಂಡ ಕಾರಂಜಾ ಮತ್ತು

ಮಾಂಜಾರಾ ನದಿ ಕಣಿವೆಯ ಸಂಸ್ಕೃತಿಯನ್ನು ಹೊಂದಿದೆ. ಉತ್ತರದ ತೀರ ಪ್ರದೇಶ ದಿಂದ ದಕ್ಷಿಣದ ಸನ್ನತಿ ಪ್ರದೇಶಗಳ ಮಧ್ಯಭಾಗದಲ್ಲಿ ಇದ್ದು, ಪ್ರಾಚೀನ ಪ್ರತಿಷ್ಠಾನ ಪುರ (ಇಂದಿನ ಪೈಠಣ) ಮತ್ತು ಕೊಂಡಾಪುರಗಳು ಸಹ ಬೀದರಿನ ಉತ್ತರ ದಕ್ಷಿಣದ ಪ್ರದೇಶಗಳಿಂದ ಆವರಿಸಲ್ಪಟ್ಟಿವೆ.

ಬೀದರ ಜಿಲ್ಲೆ ಪ್ರಾಚೀನ ಕಾಲದಿಂದಲೂ ಸಾಂಸ್ಕೃತಿಕವಾಗಿ ಶ್ರೀಮಂತವಾದ ಪ್ರದೇಶ. ಆದರೆ ಬನವಾಸಿ, ಸನ್ನತಿ ಮುಂತಾದವುಗಳಷ್ಟು ಸಮೃದ್ಧವಾದದ್ದಾಗಿಲ್ಲ. ಆದರೂ ಶಿಲಾಯುಗದಿಂದಲೂ ಇಲ್ಲಿ ಜನವಸತಿಯ ನೆಲೆಗಳು ಇದ್ದದ್ದು ಕಂಡು ಬಂದಿದೆ. ಡಾ। ರೂ.ಮ. ಷಡಕ್ಷರಯ್ಯನವರು ಈ ಬಗೆಗೆ ಸಂಶೋಧನೆ ನಡೆಸಿರುತ್ತಾರೆ. ಕಾರಂಜಾ ಮತ್ತು ಮಾಂಜಾರಾ ನದಿತೀರಗಳಲ್ಲಿ ಶಿಲಾಯುಗದ ವಿವಿಧ ಕಾಲಕ್ಕೆ ಸೇರಿದ ಅನೇಕ ನೆಲೆಗಳನ್ನು ಅವರು ಗುರುತಿಸಿದ್ದಾರೆ. ಕಾರಂಜಾ ನದಿತೀರದ ಮರಕುಂದಾ, ರೇಕುಳಗಿ, ಖೇಣಿ ರಂಜೋಳ, ಅಂಬೆಸಾಂಗವಿ, ಮಾಂಜ್ರಾ ನದಿ ದಡದ ಮೇಲಿನ ಡೋಣಗಾಪೂರ ನಾರದ, ಸಂಗಮ, ಮೂಂಗನಾಳ, ವನಮಾರ ಪಳ್ಳಿ ಮುಂತಾದವುಗಳು ಅತಿ ಪ್ರಾಚೀನ ನೆಲೆಗಳಾಗಿದ್ದವು ಎನ್ನುವ ಅಂಶ ಷಡಕ್ಷರಯ್ಯನವರ ಸಂಶೋಧನೆ ಸೂಚಿಸುತ್ತದೆ. ಕ್ರಮೇಣದಲ್ಲಿ ನದಿತೀರಗಳಿಂದ ದೂರದ ಪ್ರದೇಶಗಳೊಡನೆ ಗ್ರಾಮಗಳು ಬೆಳೆದು ಬಂದವು. ಆದರೆ ಅವುಗಳೆಲ್ಲ ಸರಳ ಗ್ರಾಮೀಣ ಆರ್ಥಿಕ ನೆಲೆಗಳಾಗಿದ್ದವು ಎನ್ನುವುದು ಡಾ। ಷಡಕ್ಷರಯ್ಯನವರ ಅಭಿಪ್ರಾಯ. ಅಷ್ಟೇ ಅಲ್ಲದೆ ಇತಿಹಾಸ ಕಾಲ ಆರಂಭಗೊಂಡಾದ ಮೇಲೂ ಅದೇ ಸ್ಥಿತಿ ಮುಂದುವರೆದುಕೊಂಡು ಬಂದಿತು. ಬೀದರ ಪಟ್ಟಣದ ಸುತ್ತಲೂ ಇರುವ ಪಾಪನಾಶ ಇಲ್ಲಿನ ಕೋಟೆಯ ಪ್ರಾಚೀನತೆ, ಅಗ್ರಹಾರ, ಸಂಗನಾಳ, ಕಂಬಿಠಣ (ಇಂದಿನ ಕಮಠಾಣ) ಮುಂತಾದವುಗಳ ಬಗೆಗೆ ಇನ್ನೂ ಸ್ಥೂಲವಾದ ಅಧ್ಯಯನದ ಅಗತ್ಯವಿದೆ. ಅಲ್ಲದೆ ಕಲ್ಯಾಣಿ ಚಾಲುಕ್ಯರ ಪೂರ್ವದ ಬಗೆಗಿನ ಇತಿಹಾಸ ತಿಳಿದುಕೊಳ್ಳಲು ಇನ್ನೂ ಸಾಕಷ್ಟು ಆಧಾರಗಳಿಲ್ಲದೆ ಅವುಗಳ ಕೊರತೆಯಿಂದಾಗಿ ಅದರ ಇತಿಹಾಸ ಇನ್ನೂ ಅಪೂರ್ಣವಾಗಿದೆ. ಹನ್ನೊಂದನೆ ಶತಮಾನದಿಂದ ಈಚೆಗಿನ ಇತಿಹಾಸ ಸ್ವಲ್ಪ ಮಟ್ಟಿಗೆ ಸ್ಪಷ್ಟವಾಗುತ್ತಿದೆ. ಆದಾಗ್ಯೂ ಮಾಹಿತಿ ಇನ್ನೂ ಅಸ್ಪಷ್ಟವಾಗಿದೆ.

೪. ನಾಡುಗಳ ನಾಡು

ಬೀದರ ಸುತ್ತಣ ಪ್ರದೇಶವು ಇತಿಹಾಸದ ವಿವಿಧ ಹಂತಗಳಲ್ಲಿ ನಾಡು ಪ್ರದೇಶಗಳ ರೂಪದಲ್ಲಿ ಗುರುತಿಸಲ್ಪಡುತ್ತಿತ್ತು. ಪ್ರಾಚೀನ ಅಶ್ಮಕ ಎಂಬ ಜನಪದದ ದಕ್ಷಿಣದ ಅಂಚಿನ ಭಾಗವಿದು. ರುಷಿಕ ಎಂಬ ಪ್ರದೇಶದ ಮಂಜಿರಕದ ದೇಶದ ಪಶ್ಚಿಮದ ಅಂಚಿನಲ್ಲಿದ್ದು, ವೈದರ್ಭ ಮಂಡಲದ ದಕ್ಷಿಣ ಭಾಗದ ಪ್ರದೇಶದಲ್ಲಿ ವ್ಯಾಪಿಸಿದೆ.

ಗೋದಾವರಿ, ಮಾಂಜಾರಾ, ಪಯೋಷ್ಣಿ (ಇಂದಿನ ಪೂರ್ಣಾ) ನದಿ ತಟಾಕಗಳಲ್ಲಿ ಪ್ರಾಚೀನ ಕಾಲದಲ್ಲಿದ್ದ ಆಶ್ರಮಗಳು ಇಲ್ಲಿನ ಪ್ರಮುಖ ಋಷಿಗಳ ವಾಸಸ್ಥಾನವಾಗಿದ್ದವು. ಅಲ್ಲದೆ ಅವು ವಿದ್ಯಾಕೇಂದ್ರಗಳೂ ಆಗಿದ್ದವು. ಅಶ್ಮಕಜನಪದ ಬೀದರ ಭಾಗದ ಉತ್ತರ- ಪೂರ್ವದಲ್ಲಿ ಸ್ಥಿತವಾಗಿದ್ದಿತು. ಆರ್ಯಭಟನ ಆರ್ಯಭಟಯುಕ್ಕೆ ವ್ಯಾಖ್ಯಾನ ಬರೆದ ಆರ್ಯಭಟನು ಅಶ್ಮಕ ದೇಶದವನು. ಪದ್ಮಪುರ (ಪೋಡಂಪುರ) ಇಂದಿನ ಭೋದನ ಅದರ ರಾಜಧಾನಿಯಾಗಿದ್ದಿತು. ಮೊದಲನೆಯ ಭಾಸ್ಕರನು ಕೂಡ ಅಶ್ಮಕ (ಶ-) ಪ್ರಾಂತದವನೇ ಆಗಿದ್ದನು. ಈತನ ಸಂಬಂಧ ಬೀದರ್‌ಗೆ ಹೋಲಿಸಲಾಗುತ್ತದೆ. ಗೋದಾವರಿ ಮತ್ತು ಮಾಂಜರಾ ನದಿಗಳ ಸಂಗಮ ಸ್ಥಳದಲ್ಲಿ ಬಾಸರ ಎಂಬ ಊರು ಇದ್ದು, ಇದು ಗಣಿತಜ್ಞ, ಭಾಸ್ಕರಾಚಾರ್ಯನ ಹೆಸರಿಗೆ ಸಂಬಂಧಿತವೆ? ಅವೇ ನದಿಗಳ ಸಂಗಮ ಸ್ಥಾನದಲ್ಲಿರುವ ಕುಂದಕುರ್ತಿ ಗ್ರಾಮದಲ್ಲಿ ಋಷಿಯ ಆಶ್ರಮ ಇದ್ದಿತು ಅನ್ನುವುದು ಶ್ರೀ ಗೋ.ಪು. ಜೋಶಿಯವರ ಅಭಿಮತ. ಇಂದಿನ ಬೀದರ ಪ್ರಾಚೀನ ಕಾಲದಲ್ಲಿ ಕುಂದಿನ ನಗರ ಆಗಿದ್ದಿತೆ ? ಇದಕ್ಕೆ ವಿದುರ ನಗರ ಅನ್ನುತ್ತಿದ್ದರೆ ? ಖಚಿತ ಉತ್ತರಗಳು ಆಧಾರ ಸಹಿತವಾದ ನಿಖರ ಮಾಹಿತಿಗಳು ದೊರಕಬೇಕಾಗಿದೆ. ಖಚಿತವಾದ ಮತ್ತು ವಿವರವಾದ ಸಂಶೋಧನೆಗಳು ಕೈಗೊಂಡಲ್ಲಿ ಬೀದರ ನಾಡಿನ ಮಹತ್ವ ಇನ್ನಷ್ಟು ಹೆಚ್ಚಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.

ಅಟ್ಟಳೆ ನಾಡು :

ರಂಜೇರು (ಇಂದಿನ ಖೇಣಿ ರಂಜೋಳ) ವಿನಲ್ಲಿ ಆಳಿದ ನಾಗವಂಶದ ಸಿಂಧ ಮನೆತನಕ್ಕೆ ಸಂಬಂಧಿಸಿದ ರಂಜೇರುವಿನ ಸಿಂದರ ಹನ್ನೊಂದನೆಯ ಶತಮಾನದ

ಶಾಸನಗಳು ಬೀದರ ಜಿಲ್ಲೆಯ ಇತಿಹಾಸವನ್ನು ಕ್ರಿ.ಶ. ನಾಲ್ಕನೇ ಶತಮಾನದವರೆಗೆ ತೆಗೆದುಕೊಂಡು ಹೋಗುತ್ತವೆ. ರಂಜೇರು ಈ ಭಾಗದ ಪ್ರಪ್ರಥಮ ರಾಜಕೀಯ ಕೇಂದ್ರ. ಕಾರಂಜಾ ನದಿಯ ದಡದ ಮೇಲೆ ಇರುವ ರಂಜೇರುವಿನ ಸುತ್ತಣ ಗ್ರಾಮ ಗಳನ್ನೊಳಗೊಂಡ ಪ್ರದೇಶ ಅಟ್ಟಳೆ ನಾಡೆಂದು ಪ್ರಸಿದ್ಧಿ ತಳೆಯಿತು. ಆರಂಭದಲ್ಲಿ ಭಲ್ಲುಂಕೆ ಅದರ ವ್ಯಾಪ್ತಿಗೆ ಸೇರಿದ್ದಿತು ಎಂಬ ಉಲ್ಲೇಖಗಳನ್ನು ನಾವು ಹಲವಾರು ಶಾಸನಗಳಲ್ಲಿ ಕೂಡ ಕಾಣುತ್ತೇವೆ.

ಈ ಪ್ರದೇಶಗಳಲ್ಲೆಲ್ಲಾ ಆ ವೇಳೆಗಾಗಲೇ ಶಾತವಾಹನರು ಮತ್ತು ಚುಟುಗಳು ಆಳ್ವಿಕೆ ನಡೆಸಿ ನಂತರ ಬನವಾಸಿಯ ಕದಂಬರು ಕುಂತಲದ ಪ್ರದೇಶದಲ್ಲಿ ತಮ್ಮ ಆಳ್ವಿಕೆ ನಡೆಸಿದ್ದಾರೆಂಬುದು ತಿಳಿದುಬರುತ್ತದೆ ಏಕೆಂದರೆ ಬನವಾಸಿಯ ಸುತ್ತಣ ಹಾಗೂ ಅಟ್ಟಳೆ ನಾಡಿನ ಹಲವು ಗ್ರಾಮಗಳ ಹೆಸರುಗಳು ಉದಾ :- (ಸಿರಸಿ, ಚಟ್ಟನ್ನಳ್ಳಿ, ಕಾಡೆವಾಡಹಳ್ಳಿ, ಆಣದೂರ, ಮನಹಳ್ಳಿ, ಮಾವಿನಹಳ್ಳಿ ಹಲಸಿ) ಮತ್ತು ಬೀದರ ಪ್ರದೇಶದ ಸುತ್ತಣ ಊರುಗಳ ಹೆಸರು ಒಂದೇ ಆಗಿವೆ. ಈ ಆಧಾರಗಳ ಮೇಲೆ ವಿವಿಧ ಅರಸು ಮನೆತನಗಳು ತಮ್ಮ ಆಳ್ವಿಕೆ ಕಾಲದಲ್ಲಿ ತಮಗೆ ಸಂಬಂಧಿಸಿದ ಊರುಗಳ ಹೆಸರು ಕೊಟ್ಟಿರಬಹುದು ಎಂದು ನಂಬಲಾಗಿದೆ.

ಭಲ್ಲುಂಕೆ ನಾಡು :

ಕಲ್ಯಾಣಿ ಚಾಲುಕ್ಯರಿಗಿಂತ ಮೊದಲಿನ ಚಾಲುಕ್ಯರಿಗೆ ಸೇರಿದ ಶಿಲಾಲೇಖ (ಜಮಲ ಗ್ರಾಮದಲ್ಲಿ ದೊರೆತದ್ದು)ವೊಂದರಲ್ಲಿ ಭಲ್ಲುಂಕೆದೇಶ ಮತ್ತು ಮೋರ್ಖಂಡಿ ಎಂಬ ಊರುಗಳ ಉಲ್ಲೇಖವಿದೆ. ಭಲ್ಲುಂಕೆ (ಇಂದಿನ ಭಾಲ್ಕಿ) ಮುರ್ಕಿ ಇವುಗಳ ಬಗೆಗೂ ಸಂಶೋಧನ ಅಧ್ಯಯನ ಅಗತ್ಯವಿದೆ. ಅಟ್ಟಳೆ ನಾಡಿನ ಅಂಗವಾಗಿ ಬೆಳೆದು ಬಂದ ಭಲ್ಲುಂಕೆ ಸುತ್ತಣ ಪ್ರದೇಶ ಭಲ್ಲುಂಕೆ ನಾಡಾಗಿ ಒಂಭತ್ತನೇ ಶತಮಾನದ ವೇಳೆಗೆ ಪ್ರಸಿದ್ಧಿ ತಳೆದಿತ್ತು. ಈ ಪ್ರದೇಶದಲ್ಲಿ ಬರುವ ಮಾಸೆಮಡು ಅಂದು ಪ್ರಸಿದ್ಧ ಅಗ್ರಹಾರವಾಗಿದ್ದಿತು ಎಂದು ಹೇಳಲಾಗಿದೆ. ಇದೇ ಪ್ರದೇಶದ ಚಾಳಕಾಪೂರ ಮತ್ತೊಂದು ಪ್ರಾಚೀನ ಗ್ರಾಮವಾಗಿತ್ತು. ಅಲ್ಲದೆ ಭಟಸಂಗವಿ, ಅಂಬೇಸಂಗವಿ ಮುಂತಾದ ಊರುಗಳು ಅದೇ ಪರಿಸರಕ್ಕೆ ಸೇರಿದವುಗಳಾಗಿದ್ದವು. ರಾಷ್ಟ್ರಕೂಟರ ಮೂಲಸ್ಥಾನ ಲತ್ತ ಆಲೂರುಪುರ (ಇಂದಿನ ಲಾತೂರ) ಭಲ್ಲುಂಕೆ ನಾಡಿಗೆ ಹೊಂದಿ ಕೊಂಡಿದ್ದ ಪ್ರಸಿದ್ಧ ನಗರವಾಗಿದ್ದಿತು. ಭಾಲ್ಕೇಶ್ವರ ದೇವಾಲಯದ ಪ್ರಾಚೀನತೆ ಮತ್ತು ಇತರ ದೇವಾಲಯಗಳ ಬಗ್ಗೆ ಇನ್ನೂ ಸಂಶೋಧನೆ ಆಗ ಬೇಕಾಗಿದೆ, ಅಂದರೆ ಇವೆಲ್ಲವುಗಳ ಮೇಲೆ ಹೊಸ ಬೆಳಕು ಚೆಲ್ಲುವುದು ಅಗತ್ಯ. ಆಗ ಭಲ್ಲುಂಕೆ ನಾಡಿನ ಮಹತ್ವ ಇನ್ನಷ್ಟು ಹೆಚ್ಚಾಗಿ ಹೊಸ ಇತಿಹಾಸ ರಚನೆಗೆ ಸಹಾಯಕಾರಿಯಾಗಬಹುದು.

ಕಲ್ಯಾಣ ನಾಡು - ಶರಣರ ಬೀಡು :

ಕಲ್ಯಾಣಪುರ (ಇಂದಿನ ಬಸವಕಲ್ಯಾಣ) ಚಾಲುಕ್ಯರು ಇದನ್ನು ರಾಜಧಾನಿ ಯನ್ನಾಗಿಸುವ ಮುನ್ನವೇ ಕಲ್ಯಾಣದ ಪಕ್ಕದಲ್ಲಿರುವ ಮೋರಖಿಂಡಿ ಪ್ರಸಿದ್ಧವಾಗಿ ದ್ದಿತ್ತು. ಪ್ರಸಿದ್ಧ ಚಾಲುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ (ಹನ್ನೊಂದನೇ ಶತಮಾನ) ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಕಲ್ಯಾಣಪುರದ ಖ್ಯಾತಿ ಎಲ್ಲೆಡೆಯಲ್ಲೂ ಹರಡಿತ್ತು. ಹನ್ನೆರಡನೇ ಶತಮಾನದಲ್ಲಿಯಂತೂ ಕಲ್ಯಾಣವು ಶರಣರ ಪವಿತ್ರ ಬೀಡಾಯಿತು. ೧೨ನೇ ಶತಮಾನದ ವಚನಕಾರರ ಕ್ರಾಂತಿಯಿಂದ ಪ್ರಸಿದ್ಧಿಗೆ ಬಂದ ಈ ನಾಡು ಸರ್ವ ಸಮಾನತೆ ಸಾರುವ, ಸರ್ವರಿಗೂ ಲೇಸನ್ನೇ ಬಯಸುವ ಕಲ್ಯಾಣರಾಜ್ಯ ಅಥವಾ ಕಲ್ಯಾಣನಾಡಾಗಿ ಪರಿಣಮಿಸಿದೆ. ಕಲ್ಯಾಣಪುರ (ಇಂದಿನ ಬಸವಕಲ್ಯಾಣ) ವಿಸ್ತೃತ ವ್ಯಾಪ್ತಿಯನ್ನು ಹೊಂದಿದ್ದಿತು. ಶಿವಪುರ, ನಾರಾಯಣಪುರ, ಪ್ರತಾಪುರ ಜೊತೆಯಲ್ಲಿ ತ್ರಿಪುರಾಂತ ಕೆರೆ ಇವೆಲ್ಲ ಆ ಪುರದ ವ್ಯಾಪ್ತಿಗೆ ಸೇರಿದ್ದವು. ಇಂದಿನ ಹುಮನಾಬಾದದ ಮೊದಲಿನ ಹೆಸರು ಜಯಸಿಂಹ ಪುರ ಆಗಿದ್ದಿತ್ತು. ಮರಾಠರ ಆಳ್ವಿಕೆಯ ಕಾಲದಲ್ಲಿ ಹುಮನಾಬಾದ ಹಾಗೂ ಸುತ್ತಣ ಪ್ರದೇಶದಲ್ಲಿ ಕೆಲ ಕಟ್ಟಡಗಳು ನಿರ್ಮಾಣಗೊಂಡವು. ಕಲ್ಯಾಣಪುರ ಪ್ರದೇಶದ ಗೋರ್ಟಾ ಎಂಬುದು ಆ ಕಾಲಕ್ಕೆ ಒಂದು ದೊಡ್ಡ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿದ್ದಿತು. ಬೀದರ ಜಿಲ್ಲೆಯಾದ್ಯಂತ ಸಂಗ್ವಿಗಳು (ಜಲಸಂಗ್ವಿ, ಭಾಟಸಾಂಗ್ವಿ, ಅಂಬೆಸಂಗ್ವಿ ಮುಂತಾದವುಗಳು) ಹೆಚ್ಚಾಗಿ ಕಾಣಬರುತ್ತವೆ.

ಮೈಲಾರ ನಾಡು :

ಕಲ್ಯಾಣಿ ಚಾಲುಕ್ಯರ ಆಳ್ವಿಕೆ ಅವಸಾನ ತಳೆಯುತ್ತಿದ್ದಂತೆ ಅದರೊಳಗಿಂದ ಹೊರಬಂದು ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು ಹಾಗೂ ದ್ವಾರಸಮುದ್ರದ ಹೊಯ್ಸಳರು ಸ್ವತಂತ್ರಗೊಂಡು ಆಳಲಾರಂಭಿಸಿದರು. ಬೀದರ್‌ನ ಸಮೀಪದ ಮೈಲಾರ ಪ್ರದೇಶವು ಯಾದವರು ಮತ್ತು ಕಾಕತೀಯರ ಮೇರೆಯಾಗಿ ಮಾರ್ಪಟ್ಟು ಎರಡು ವಂಶದವರ ಕದನಗಳಿಗೆ ಕಾರಣವಾಯಿತು. ಮೊದಲು ಈ ಪ್ರದೇಶವು ಯಾದವರ ಆನಂತರ ಕಾಕತೀಯರ ವಶಕ್ಕೆ ಹೋಯಿತು. ಬೀದರ ಪಟ್ಟಣ ಬಿಡಣದ ಕೋಟೆ ಎಂದು ಪ್ರಸಿದ್ಧಿ ಪಡೆದಿತ್ತು. ಅಲ್ಲದೆ ಬಿದರೂರುಪುರ ವೆಂದೂ ಕರೆಯಲ್ಪಡುತ್ತಿತ್ತು. ಶರಣ ವೀರ ಸಂಗಯ್ಯನ ಸಮಾಧಿ ಬೀದರ ಒಳಕೋಟೆ ಯೊಳಗೆ ಇದ್ದು ಅದರ ಪಕ್ಕದಲ್ಲಿ ಬೊಮ್ಮಗೊಂಡನ ಕೆರೆಯೂ ಇದೆ. ಹೀಗೆ ಪ್ರತಿಷ್ಠೆಯ ಕಣವಾಗಿದ್ದ ಈ ಪ್ರದೇಶ ಬೀದರ ನಗರದ ಸಮೀಪ ಆವರಿಸಿದ್ದು ಈ ಪ್ರದೇಶವನ್ನು ಮೈಲಾರನಾಡೆಂದು ಕೂಡಾ ಕರೆಯಲಾಗಿದೆ.

ಸವಲಕ್ಕೆ ನಾಡು :

ಅಮರೇಶ್ವರ ವಾಡಿ (ಅಮರವಾಡಿ, ಇಂದಿನ ಔರಾದ) ಪ್ರದೇಶವು ಮೊದಲಿನಿಂದಲೂ ಬೋಧನದತ್ತ ಸಂಬಂಧ ಹೊಂದಿತ್ತು. ಪಶ್ಚಿಮದ ಹಾಗೂ ಉತ್ತರ ಭಾಗದಲ್ಲಿ ದೇವಗಿರಿಯ ಯಾದವರ ಪೂರ್ವದ ಭಾಗದಲ್ಲಿ ಕಾಕತೀಯರ ಪ್ರಭಾವ ಬೆಳೆದು ಬಂದಿತ್ತು. ಇದು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಸವಲಕ್ಕೆ ನಾಡಿನ ಭೂಭಾಗವಾಗಿದ್ದಿತ್ತು. ಮರಾಠವಾಡ, ತೆಲಂಗಾಣ ಪ್ರದೇಶಗಳಿಗೆ ಸಂಪರ್ಕ ಸೇತುವಾಗಿದ್ದಿತು. ವಾಕಟಕ ಅರಸರ ಪ್ರಭಾವವು ಬೀದರ ಜಿಲ್ಲೆಯ ಉತ್ತರ ಅಂಚಿನಲ್ಲಿ ಆದದ್ದು ಗಮನಿಸಬಹುದಾಗಿದೆ. ಯಾದವರ ಹಾಗೂ ಕಾಕತೀಯರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶದ ಅನೇಕ ಊರುಗಳು ಗಾಂವ ಹಾಗೂ ಪಲ್ಲಿಗಳಾಗಿ ಮಾರ್ಪಟ್ಟವು.

೫. ನಂದರು ಮತ್ತು ಮೌರ್ಯರು

ಭಾರತೀಯ ಇತಿಹಾಸದ ಆರಂಭಕಾಲದಿಂದಲೂ ಅಂದರೆ ಸಿಂಧೂ ಕಣಿವೆಯ ಮತ್ತು ವೇದಗಳ ಕಾಲದಲ್ಲಿನ ಇತಿಹಾಸದಲ್ಲಿ ಬೀದರ ಪ್ರದೇಶ ಯಾರ ವಶದಲ್ಲಿತ್ತು ಮತ್ತು ಇಲ್ಲಿ ಜನವಸತಿ ಇತ್ತೆ ? ಅಥವಾ ಇಲ್ಲವೆ ? ಎಂಬುದರ ಬಗ್ಗೆ ಮಾಹಿತಿಗಳ ಕೊರತೆ ಇದ್ದು ಮುಂದೆ ನಂದರ ಕಾಲದಿಂದ ಈಚೆಗೆ ಬೀದರ ಪ್ರಾಂತ್ಯದ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ದೊರಕುತ್ತದೆ.

ಬೀದರ ನಂದರ ಆಳ್ವಿಕೆಗೆ ಒಳಪಟ್ಟಿದ್ದಿತು. ನಂದವಂಶಸ್ಥರು ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿದಾಗ ದಖನ್ನಿನ ಹಲವು ಭಾಗಗಳು ಅವರ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದವು. ಇಂದಿನ ಮಹಾರಾಷ್ಟ್ರದ ನಾಂದೇಡ ಬೀದರ ಜಿಲ್ಲೆಯ ಉತ್ತರ ಗಡಿ ಭಾಗದಲ್ಲಿದ್ದು, ಪ್ರಾಚೀನ ಕಾಲದಲ್ಲಿ ನವ-ನಂದ ದೇಹರಾ ಪ್ರದೇಶ ಎಂದಾಗಿ ಗುರುತಿಸಲ್ಪಡುತ್ತಿತ್ತು.

ಅಲ್ಲದೆ ಚಾಣಕ್ಯನ ಅರ್ಥಶಾಸ್ತ್ರದಲ್ಲಿಯೂ ಸಹ ನಂದರಾಜರು ದಕ್ಷಿಣಾಪಥ ದಿಂದ ಚಿನ್ನ, ವಜ್ರ, ಮುತ್ತುಗಳನ್ನು ಉತ್ತರಪಥಕ್ಕೆ ಕೊಂಡೊಯ್ಯುತ್ತಿದ್ದರೆಂಬುದು ಶಾಸನಗಳಲ್ಲಿ ಉಲ್ಲೇಖವಿದೆ. ತದನಂತರದಲ್ಲಿ ಭಾರತೀಯ ಇತಿಹಾಸದಲ್ಲಿ ಪ್ರಸಿದ್ಧಿ ಯನ್ನು ಪಡೆದ ಮೌರ್ಯ ಸಾಮ್ರಾಜ್ಯದ ಅರಸರು ದಕ್ಷಿಣದ ಅನೇಕ ಭಾಗಗಳಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದರು ಎನ್ನುವುದಕ್ಕೆ ಅನೇಕ ಪುರಾವೆಗಳಿವೆ. ಚಂದ್ರಗುಪ್ತ ಮೌರ್ಯ ತನ್ನ ಕೊನೆಯ ದಿನಗಳನ್ನು ಕರ್ನಾಟಕದ ದಕ್ಷಿಣ ಭಾಗದಲ್ಲಿ ರುವ ಶ್ರವಣಬೆಳಗೊಳದಲ್ಲಿ ಕಳೆದನೆಂಬುದು ಅಲ್ಲದೇ ಅಶೋಕ ಚಕ್ರವರ್ತಿಯ ಕಾಲದಲ್ಲಿ ನಿರ್ಮಿತವಾದ ಹಲವಾರು ಬಂಡೆಗಲ್ಲು ಶಾಸನಗಳು ಕರ್ನಾಟಕದ ಅನೇಕ ಭಾಗಗಳಲ್ಲಿ ದೊರೆತಿರುವುದರಿಂದ ಬೀದರ ಪ್ರದೇಶ ಖಂಡಿತವಾಗಿಯೂ ಮೌರ್ಯ ಆಳ್ವಿಕೆಗೆ ಒಳಪಟ್ಟಿತ್ತು ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ. ಅಶೋಕ ಚಕ್ರವರ್ತಿಯೂ ತನ್ನ ಧರ್ಮಪ್ರಚಾರಕ್ಕಾಗಿ ಧರ್ಮ ಮಹಾಮಾತ್ರರನ್ನು ದಕ್ಷಿಣದ ಹಲವಾರು ಪ್ರದೇಶಗಳಿಗೆ ಕಳುಹಿಸಿದನೆಂಬುವುದಕ್ಕೆ ರಾಯಚೂರು, ಚಿತ್ರದುರ್ಗ, ಮತ್ತಿತರ ಕಡೆಗಳಲ್ಲಿ ದೊರೆತಿರುವ ಶಾಸನಗಳ ಆಧಾರದ ಮೇಲೆ ನಾವು ಹೇಳ ಬಹುದು. ಮೌರ್ಯ ಸಾಮ್ರಾಜ್ಯದ ಕುಂತಲ ನಾಡು ಅಂದರೆ ಉತ್ತರ ಕರ್ನಾಟಕದ

ಹಲವು ಭಾಗಗಳಲ್ಲಿ ಆಳ್ವಿಕೆ ನಡೆಸಿದ್ದರು. ನಂದರ ಕಾಲದಿಂದಲೂ ಸಾಮ್ರಾಜ್ಯದ ಭಾಗವಾಗಿದ್ದ ನಾಂದೇಡ ಇಂದಿನ ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ಮತ್ತು ಕರ್ನಾಟಕದ ಉತ್ತರ ಭಾಗದ ಪ್ರದೇಶವಾಗಿರುವುದರಿಂದ ಬೀದರ ಪ್ರದೇಶ ಮೌರ್ಯ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯದ ಪ್ರಮುಖ ಪ್ರದೇಶವಾಗಿದ್ದಿತು. ಆ ಕಾಲಕ್ಕೆ ಶಾತವಾಹನರು ಮೌರ್ಯರ ಅಧೀನರಾಗಿದ್ದರು. ಮೌರ್ಯರ ಪತನಾನಂತರ ಶಾತವಾಹನರು ಸ್ವಾತಂತ್ರ್ಯ ತಳೆದು ಆಳಲಾರಂಭಿಸಿದರು. ಆ ಕಾಲಕ್ಕೆ ಪ್ರತಿಷ್ಠಾನಪುರ (ಇಂದಿನ ಪೈಠಣ) ಅವರ ರಾಜಧಾನಿಯಾಗಿದ್ದಿತು.

ಕ್ರಿ.ಶ. ಮೂರನೆ ಶತಮಾನದ ಉತ್ತರಾರ್ಧದಲ್ಲಿ ಶಾತವಾಹನರ ಅವನತಿಯಾಗಿ ದಕ್ಷಿಣದ ಕುಂತಳದಲ್ಲಿ ಚುಟುಗಳು ಅಧಿಕಾರಕ್ಕೆ ಬಂದರು. ಪೂರ್ವದ ಆಂಧ್ರಪ್ರದೇಶದಲ್ಲಿ ಇಕ್ಷ್ವಾಕುಗಳು ಆಳಲಾರಂಭಿಸಿದರು. ಕುಂತಳದ ಉತ್ತರದಲ್ಲಿಯ ವಿದರ್ಭದಲ್ಲಿ ವಾಕಾಟಕವರು ಶಾತವಾಹನರನ್ನು ತಳ್ಳಿ ಪ್ರಾಬಲ್ಯಕ್ಕೆ ಬಂದರು. ಆ ವೇಳೆಗಾಗಲೇ ಉತ್ತರ ಭಾರತದಲ್ಲಿ ಚಂದ್ರಗುಪ್ತನ ಮಗ ಸಮುದ್ರಗುಪ್ತನು (ಕ್ರಿ.ಶ. ೩೩೫-೩೭೫) ಅಧಿಕಾರಕ್ಕೆ ಬಂದಿದ್ದನು. ಆತನು ದಕ್ಷಿಣವೂ ಸೇರಿದಂತೆ ಅನೇಕ ದಿಗ್ವಿಜಯಗಳನ್ನು ಕೈಕೊಂಡನು. ಆ ಕಾಲದಲ್ಲಿ ಏಳಿಗೆಗೆ ಬಂದ ಉತ್ತರ ಭಾರತದ ಯಮುನಾ ನದಿಯ ಪ್ರದೇಶದ ನಾಗರು, ದಖನ್ನಿನಲ್ಲಿಯ ವಾಕಾಟಕರು, ಕುಶಾನರು, ಶಕರು ಮುಂತಾದ ಅರಸರು ವಿದೇಶೀಯರನ್ನು ಯಶಸ್ವಿಯಾಗಿ ಎದುರಿಸಿದರು. ಸಮುದ್ರಗುಪ್ತ ದತ್ತಾದೇವಿಯರ ಮಗನಾಗಿದ್ದ ಚಂದ್ರಗುಪ್ತ ವಿಕ್ರಮಾದಿತ್ಯನ ಪತ್ನಿ ಕುಬೇರನಾಗಾ ನಾಗವಂಶಕ್ಕೆ ಸೇರಿದವಳು. ಚಂದ್ರಗುಪ್ತ ವಿಕ್ರಮಾದಿತ್ಯನು ತನ್ನ ಮಗಳಾದ ಪ್ರಭಾವತಿಯನ್ನು ವಾಕಾಟಕ ಅರಸ ರುದ್ರಸೇನ-೨ ಇವನಿಗೆ ಮದುವೆ ಮಾಡಿಕೊಟ್ಟು, ವೈವಾಹಿಕ ಸಂಬಂಧ ಬೆಳೆಸಿದನು. ಅವರಿಗೆ ಹುಟ್ಟಿದ ಪುತ್ರ ನರೇಂದ್ರ ಸೇನನು (ಚಂದ್ರಗುಪ್ತ ವಿಕ್ರಮಾದಿತ್ಯನ ಮೊಮ್ಮಗ) ಮದುವೆಯಾದದ್ದು ಬನವಾಸಿಯ ಕದಂಬ ಅರಸ ಕಾಕುತ್ಸ್ಥವರ್ಮನ ಮಗಳನ್ನು. ಕ್ರಿ.ಶ. ಸುಮಾರು ಐದನೆಯ ಶತಮಾನದ ವೇಳೆಗೆ ಬೀದರದ ಪ್ರದೇಶವು ಕುಂತಳ ವಿಷಯದ (ಪ್ರಾಂತ) ಅಟ್ಟಳೆ ನಾಡು ಎನಿಸಿಕೊಂಡಿತ್ತು. ವಾಕಾಟಕರು ಅದನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ್ದುಂಟು. ಹೀಗೆ ಪ್ರಾಚೀನ ಕಾಲದಲ್ಲಿ ಬೀದರ ಪ್ರದೇಶ ಬನವಾಸಿಯ ಕದಂಬರ ಹಾಗೂ ಮಧ್ಯ ಭಾರತದ ದಕ್ಷಿಣ ಭಾಗದಲ್ಲಿ ಆಳುತ್ತಿದ್ದ ವಾಕಾಟಕರ ನಡುವಣ ಪ್ರದೇಶವಾಗಿದ್ದಿತು. ಈ ಭಾಗದಲ್ಲಿ ಗೊಂದಲಿಗರು ಇಂದಿಗೂ ವಾಕಾಟಕ ಅರಸರ ಕತೆಗಳನ್ನೇ ಹೆಚ್ಚಾಗಿ ಹೇಳುವುದು ವಾಡಿಕೆಯಾಗಿದೆ. ಇಂಥ ಮೌಖಿಕ ಆಧಾರಗಳು ಕೂಡ ಚಾರಿತ್ರಿಕ ಪ್ರಜ್ಞೆಗೆ ನೆರವಾಗುತ್ತವೆ.

೬. ಶಾತವಾಹನರು

ಮೌರ್ಯ ಸಾಮ್ರಾಜ್ಯದ ಪ್ರಸಿದ್ಧ ಚಕ್ರವರ್ತಿ ಅಶೋಕನ ನಿಧನದ ನಂತರ ಅವನತಿ ಹಾದಿಯಲ್ಲಿ ನಡೆದು, ಮೌರ್ಯ ಸಾಮ್ರಾಜ್ಯವು ದಖ್ಖನಿನ್ನಲ್ಲಿ ಅವರ ಸಾಮಂತರಾಗಿದ್ದ ಶಾತವಾಹನರ ಏಳಿಗೆ ಪ್ರಾರಂಭವಾಯಿತು. ದಕ್ಷಿಣ ಭಾರತದಲ್ಲಿ ಮೊಟ್ಟಮೊದಲಿಗೆ ವಿಸ್ತಾರವಾದ ಸಾಮ್ರಾಜ್ಯ ಸ್ಥಾಪಿಸಿದವರೆಂದರೆ ಶಾತವಾಹನರು. ನಾಲ್ಕು ಶತಮಾನಗಳಿಗಿಂತಲೂ ಹೆಚ್ಚು ಕಾಲ ಆಳಿ ಕರ್ನಾಟಕದ ಚರಿತ್ರೆಯಲ್ಲಿ ಅಗ್ರಗಣ್ಯ ಅರಸು ಮನೆತನವೆನಿಸಿಕೊಂಡಿದೆ. ಶಾಸನಗಳಲ್ಲಿ ಶಾತವಾಹನರು ಶಾತಕರಣಿಗಳೆಂದು ಕರೆಸಿಕೊಂಡ ಇವರು ಪುರಾಣಗಳಲ್ಲಿ ಆಂಧ್ರರು, ಆಂಧ್ರ ಭೃತ್ಯರು, ಮತ್ತು ಆಂಧ್ರಜಾತಿಯರೆಂದು ಕರೆಸಿಕೊಂಡಿದ್ದಾರೆ. ಗೌತಮಿಪುತ್ರ ಶಾತಕರಣಿ, ವಶಿಷ್ಠ ಪುತ್ರ ಪುಳಮಾಯಿ ಯಜ್ಞಶ್ರೀ ಮುಂತಾದವರು ಈ ಮನೆತನದ ಪ್ರಮುಖ ಅರಸರಾಗಿದ್ದಾರೆ.

ಶಾತವಾಹನರು ಬೀದರ್‌ನಲ್ಲಿ ಆಳ್ವಿಕೆ ನಡೆಸಿದ್ದರೆಂಬುದಕ್ಕೆ ಜೈನ ಸಾಹಿತ್ಯದಲ್ಲಿ ಕಂಡುಬರುವ ಈ ವಂಶದ ಸ್ಥಾಪಕ ಸೀಮುಕ ಎಂಬುವವನು ಕ್ರಿ.ಪೂ. ೨೩೦ ರಿಂದ ೨೦೭ರವರೆಗೆ ಮೌರ್ಯ ಸಾಮ್ರಾಜ್ಯದ ಸಾಮಂತನಾಗಿದ್ದು ಬೀದರ ಸಮೀಪದ ಪೈಠಣ ಇವರ ರಾಜಧಾನಿಯಾಗಿದ್ದು, ನಂತರದ ಅರಸ ಕೃಷ್ಣ ಎಂಬುವವನು ನಾಸಿಕ್ ಎಂಬಲ್ಲಿ ಬೌದ್ಧ ಗುಹಾಲಯ ನಿರ್ಮಿಸಿದನೆಂಬ ಉಲ್ಲೇಖವಿದೆ. ಶಾತವಾಹನರ ಪ್ರಸಿದ್ಧ ಅರಸ ಗೌತಮಿಪುತ್ರ ಶಾತಕರಣಿಯ ಕಾಲಕ್ಕೆ ರಾಜ್ಯ ವಿಸ್ತಾರವಾಗಿ ಉತ್ತರದ ವಿಂಧ್ಯಪರ್ವತದಿಂದ ಕೊಂಕಣದವರೆಗೆ ಆತನು ರಾಜ್ಯ ವಿಸ್ತರಿಸಿದನೆಂಬ ಆಧಾರದ ಮೇಲೆ ಶಾತವಾಹನರು ಬೀದರ ಪ್ರದೇಶದಲ್ಲಿ ತಮ್ಮ ಒಡೆತನ ಸ್ಥಾಪಿಸಿದ್ದರೆಂದು ಊಹಿಸಬಹುದು. ಕಲ್ಬುರ್ಗಿ ಜಿಲ್ಲೆಯ ಸನ್ನತಿಯಲ್ಲಿ ನಡೆಸಿದ ಭೂ ಉತ್ಖನನದಲ್ಲಿ ದೊರೆತ ಸ್ತೂಪ ಮತ್ತಿತರ ಪ್ರಾಚ್ಯವಸ್ತು ಸಂಶೋಧನೆಯ ಆಧಾರದ ಮೇಲೆ ಶಾತವಾಹನರು ಅದರ ಸುತ್ತಣ ಪ್ರದೇಶವಾದ ಬೀದರದಲ್ಲಿ ತಮ್ಮ ಆಳ್ವಿಕೆ ನಡೆಸಿರಲೇಬೇಕು. ಅಲ್ಲದೆ ಅವರ ಆಡಳಿತ ಕ್ರಮದಲ್ಲಿ ರಾಜ್ಯವನ್ನು ಹಲವು ವಿಭಾಗ ಗಳಾಗಿ ವಿಂಗಡಿಸಿದ್ದು, ಅದರಲ್ಲಿ ಕೊಲ್ಹಾಪುರ, ಕಲ್ಯಾಣ, ನಾಸಿಕ, ಅಜಂತಾ ಪಟ್ಟಣ ಗಳ ಉಲ್ಲೇಖಗಳು ಬರುತ್ತವೆ.

೨೩ನೇ ರಾಜನಾದ ಗೌತಮೀಪುತ್ರ, ಶಾತವಾಹನರಲ್ಲಿ ಪ್ರಮುಖ ಅರಸ

ಎನಿಸಿದ್ದಾನೆ. ಶಾತವಾಹನವಂಶದ ಇತಿಹಾಸದ ಸಂಕಷ್ಟ ಕಾಲದಲ್ಲಿ ತನ್ನ ಕುಲದ ಘನತೆ, ಗೌರವ ಅಧೋಗತಿಗೆ ಇಳಿದಿದ್ದಾಗ ಇವನು ಅಧಿಕಾರ ವಹಿಸಿಕೊಂಡು ತನ್ನ ಕುಲದ ರಾಜಕೀಯ ಹಿರಿಮೆಯನ್ನು ಮತ್ತೆ ಹೆಚ್ಚಿಸಿ, ಆ ಕಾಲದ ಪ್ರಸಿದ್ಧ ದೊರೆ ಎನಿಸಿಕೊಂಡ. ಹೀಗೆ ಪ್ರಸಿದ್ಧಿ ಪಡೆದ ಅವನು ಶಾತವಾಹನರ ವಂಶಪರಂಪರೆಯಲ್ಲಿ ಪ್ರಮುಖಸ್ಥಾನ ಗಳಿಸಿಕೊಂಡ. ಅವನು ಸಿಂಹಾಸನಾಧೀಶನಾದ ಕೂಡಲೇ ರಾಜ್ಯದಲ್ಲಿನ ಅರಾಜಕತೆಯನ್ನು ಹೋಗಲಾಡಿಸಲು ಸತತ ಪ್ರಯತ್ನಮಾಡಿ ಸಿಂಹಾಸನಾಧೀಶನಾದಾಗಿನಿಂದಲೇ ಯುದ್ಧದಲ್ಲಿ ನಿರತನಾಗಬೇಕಾಯಿತು. ತನ್ನ ವಂಶದ ಅದೃಷ್ಟವನ್ನು ಸರಿಪಡಿಸುವುದರತ್ತ ಹೆಚ್ಚು ಗಮನಕೊಟ್ಟನು. ಅವನ ಅದೃಷ್ಟ ಎನ್ನುವಂತೆ ಆ ವೇಳೆಗೆ ಪ್ರಬಲರಾಗಿದ್ದ ಶಕ-ಪಹ್ಲವರ (ಪಲ್ಲವರ) ಸಾಮ್ರಾಜ್ಯಗಳು ಒಡೆದು, ಚಿಕ್ಕ ಚಿಕ್ಕ ಪ್ರಾಂತ್ಯಗಳಾಗಿ ಒಡೆದು ಪ್ರಾಂತಾಧಿಕಾರಿಗಳಂತೆ ಅಲ್ಲಿನ ಅರಸರು ಪರಸ್ಪರ ವೈಮನಸ್ಸಿನವರಾಗಿದ್ದರು. ಅವನ ಆಳ್ವಿಕೆಯ ೧೮ನೇ ವರ್ಷದಲ್ಲಿ ಅವರನ್ನು ಆಕ್ರಮಿಸಿ, ಸೋಲಿಸಿ ನಹಪಾಣ ಮತ್ತು ಅವನ ಅಳಿಯ ಉಷವದತ್ತನನ್ನು ಕೊಂದು, ಕ್ಷತ್ರಪ ವಂಶವನ್ನು ಸಂಪೂರ್ಣ ನಾಶಗೊಳಿಸಿದನು. ಈ ವಿಜಯದ ಸ್ಮಾರಕವಾಗಿ, ನಹಪಾಣನ ನಾಣ್ಯಗಳನ್ನು ಒರಟಾಗಿ ತನ್ನ ರಾಜ್ಯಚಿಹ್ನೆಯೊಂದಿಗೆ ಪುನಃ ಮುದ್ರಿಸಿದನು. ಈ ವಿಜಯದಿಂದ ಗೌತಮೀಪುತ್ರ ತನ್ನ ಪಿತ್ರಾರ್ಜಿತ ರಾಜ್ಯದ ಭಾಗಗಳನ್ನು ಪುನಃ ಪಡೆವಲ್ಲಿ ಯಶಸ್ವಿಯಾದನು. ಅಷ್ಟೇ ಅಲ್ಲದೆ, ಹೊಸ ಭಾಗಗಳನ್ನು ಸೇರಿಸಿಕೊಂಡು ಅವನ ಸಾಮ್ರಾಜ್ಯ ಅಸಿಕ, ಅಸಕ, ಮುಲಕ, ಸುರಾಷ್ಟ್ರ, ಕುಕುರ, ಅಪರಾಂತ, ಅನೂಪ, ವಿದರ್ಭ, ಅಕರ ಮತ್ತು ಅವಂತಿ ಸೇರಿದಂತೆ ವಿಂಧ್ಯಪರ್ವತದ ಪ್ರದೇಶಗಳು, ಅಚವಟಿ, ಪರಿಯಾತ್ರ, ಶಯ, ಕನ್ಹಗಿರಿ, ಸಿರಿತಾನ, ವಲಯ, ಮಹೇಂದ್ರ ಸೇತ ಮತ್ತು ಚಕೋರ ಪ್ರದೇಶಗಳನ್ನು ಒಳಗೊಂಡು, ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರದವರೆಗೂ ವಿಸ್ತರಿಸಿತು. ಆಗ ಶಾತವಾಹನರ ಸಮಕಾಲೀನರೂ ಅಥವಾ ಬಹುಶಃ ಅವರ ಸಾಮಂತರೂ ಆಗಿದ್ದವರಲ್ಲಿ ಚುಟುಗಳು ಕೂಡ ಪ್ರಮುಖರು.

ದಖ್ಖನ್ನಿನ ಪೈಠಣ (ಅಂದಿನ ಪ್ರತಿಷ್ಠಾನಪುರ) ಶಾತವಾಹನರ ರಾಜಧಾನಿಯಾಗಿದ್ದಿತು. ಪ್ರಸಿದ್ಧ ಕೊಂಡಾಪುರ ಶಾತವಾಹನರಿಗೆ ಸೇರಿದುದಾಗಿದ್ದಿತು. ಇಂದು ಪೈಠಣ ಮಹಾರಾಷ್ಟ್ರದಲ್ಲಿದೆ ಮತ್ತು ಕೊಂಡಾಪುರ ಆಂಧ್ರ ಪ್ರದೇಶದಲ್ಲಿದೆ. ಬೀದರ ಈ ಎರಡೂ ಪ್ರದೇಶಗಳ ನಡುವೆ ಬರುತ್ತದೆ. ಅದಕ್ಕಾಗಿ ಶಾತವಾಹನರ ಆಳ್ವಿಕೆಯ ಪ್ರಭಾವ ಎಷ್ಟರ ಮಟ್ಟಿಗೆ ಇಲ್ಲಿಯ ಜನಮನದಲ್ಲಿ ಉಳಿದುಕೊಂಡು ಬಂದಿದೆ ಎನ್ನುವುದನ್ನು ಗುರುತಿಸಲು ಈ ಅಂಶ ನೆರವಾಗುತ್ತದೆ. ಇಂದಿನ ಭಾಲ್ಕಿಯ ಸುತ್ತಣ ಪ್ರದೇಶದಲ್ಲಿ ಕೆಲವರು ತಮ್ಮ ಮಕ್ಕಳಿಗೆ ಶಾತಲಿವಾಹನ ಎಂಬ ಹೆಸರು ಇಡುವುದುಂಟು. ಅಲ್ಲದೆ ಜನ ಶಾಲಿವಾಹನ ಶಕೆ ಗಣಿಸುತ್ತಾರೆ. ಸಾತಣ್ಣ, ಸಾತಪ್ಪ ಮುಂತಾಗಿ ಇಲ್ಲಿನ

ಜನರ ಹೆಸರು ಸಾಮಾನ್ಯವಾಗಿವೆ. ಅಲ್ಲದೆ ಬೀದರ ತಾಲೂಕಿನಲ್ಲಿ ಸಾತೋಳಿ ಎಂಬ ಗ್ರಾಮವಿದೆ. ಬೀದರಿಗೆ ಸಮೀಪದಲ್ಲಿ ಆಂಧ್ರಪ್ರದೇಶದ ಸತವಾರ (ಸಾತವಾಹನರ?) ಎಂಬ ಗ್ರಾಮವೂ ಕೂಡ ಇದೆ. ಇವೆಲ್ಲ ಅಂಶಗಳು ಬೀದರದ ಕೇಂದ್ರ ಪ್ರದೇಶದೊಂದಿಗೆ ಹೊಂದಿಕೊಂಡಿರುವುದರಿಂದ ಶಾತವಾಹನರಿಗೂ ಬೀದರಿಗೂ ಇರುವ ಐತಿಹಾಸಿಕ ಸಂಬಂಧಗಳನ್ನು ವಿವರಿಸಬಹುದಾಗಿದೆ.

೭. ಕುಂತಳದ ಚುಟುಗಳು ಮತ್ತು ಬನವಾಸಿಯ ಕದಂಬರು

ಶಾತವಾಹನರೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದ ಮತ್ತೊಂದು ಪ್ರಮುಖ ರಾಜವಂಶವೆಂದರೆ ಚುಟುಗಳು. ಈ ವಂಶಕ್ಕೆ ಸಂಬಂಧಿಸಿದಂತೆ ಎರಡು ಶಾಸನಗಳು ದೊರಕಿವೆ. ಮೊದಲನೆಯ ಶಾಸನ ಶಿವಮೊಗ್ಗ ಜಿಲ್ಲೆಯ ಮಳವಳ್ಳಿಯಲ್ಲಿ ದೊರೆತಿದ್ದು ವಿನ್ಹುಕಡುಚುಟುಕುಲಾನಂದ ಶಾತಕರ್ಣಿಯು ಬನವಾಸಿಯನ್ನು ಆಳುತ್ತಿದ್ದನೆಂದು ಅದು ಉಲ್ಲೇಖಿಸುತ್ತದೆ, ಮತ್ತೊಂದು ಶಾಸನವೇ ಬನವಾಸಿಯ ನಾರಗಕಲ್ಲಿನ ಶಾಸನ. ಇದು ವಿನ್ಹುಕಡಚುಟುಕುಲಾನಂದ ಶಾತಕರ್ಣಿಯ ಮಗಳಾದ ಶಿವಸ್ಕಂದ ನಾಗಶ್ರೀಯನ್ನು ಹೆಸರಿಸುತ್ತದೆ. ಇವಳಿಗಿದ್ದ ಮಗನೊಬ್ಬನು ಯುವರಾಜ ನಾಗಿದ್ದನು. ಈ ಎರಡು ಶಾಸನಗಳ ಲಿಪಿಯ ಆಧಾರದ ಮೇಲೆ ಈ ರಾಜವಂಶವು ಕ್ರಿ.ಶ. ಮೂರನೆಯ ಶತಮಾನದಲ್ಲಿ ಆಳುತ್ತಿದ್ದಿತ್ತೆಂದು ತೀರ್ಮಾನಿಸಲಾಗಿದೆ. ಈ ಸಂದರ್ಭದಲ್ಲಿ ಚುಟುಕುಲಾನಂದ ಮತ್ತು ಮುಡಾನಂದ ಎಂಬ ಇಬ್ಬರು ರಾಜರು ತಮ್ಮ ನಾಣ್ಯಗಳ ಮೇಲಿನ ಬರಹಗಳ ಲಿಪಿ ಲಕ್ಷಣದ ಆಧಾರದ ಮೇಲೆ, ಅನೇಕ ವಿದ್ವಾಂಸರು, ಈ ಚುಟುಕುಲಾನಂದನು ಶಾಸನಗಳಲ್ಲಿ ಉಲ್ಲೇಖಿತನಾಗಿರುವ ಅದೇ ಹೆಸರಿನ ರಾಜನಿಗಿಂತ ಭಿನ್ನನೂ ಮತ್ತು ಪ್ರಾಚೀನನೂ ಆಗಿರಬಹುದು ಎಂದು ನಂಬಿದ್ದಾರೆ.

ಚುಟುಗಳಿಗೂ ಮತ್ತು ಬೀದರದ ಪ್ರದೇಶಕ್ಕೂ ನಿಕಟ ಸಂಬಂಧವಿತ್ತೆಂಬುದಕ್ಕೆ ಬನವಾಸಿ ಪ್ರದೇಶದ ಹಲವಾರು ಊರುಗಳ ಹೆಸರುಗಳೂ ಮತ್ತು ಇಂದಿನ ಬೀದರ ಜಿಲ್ಲೆಯಲ್ಲಿರುವ ಹಲವು ಊರುಗಳ ಹೆಸರುಗಳು ಒಂದೇ ಆಗಿರುವುದು ಸಾಕ್ಷಿಯಾಗಿದೆ. ಅಲ್ಲಿನ ಅರಸರು ಇಲ್ಲಿ ನೆಲೆಸಿದಾಗ ಆ ಹೆಸರುಗಳೇ ಇಲ್ಲಿ ಪುನರುಚ್ಚರಿಸಿದ್ದಾರೆ ಎಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಅಂತಹ ಹಲವು ಊರುಗಳ ಹೋಲಿಕೆ ಈ ಕೆಳಗಿನಂತಿದೆ. ಈ ವಿಸ್ತರಣೆ ಚುಟುಗಳ ನಂತರದ ಬನವಾಸಿಯ ಕದಂಬರ ಆಳ್ವಿಕೆಯ ಕಾಲದಲ್ಲಿ ಹೆಚ್ಚಾಗಿ ಆಗಿರುವಂತಿದೆ.

ಕ್ರ. ಸಂ.	ಬನವಾಸಿ ಪ್ರದೇಶದ ಹೆಸರುಗಳು	ಬೀದರ ಪ್ರದೇಶದ ಹೆಸರುಗಳು
೧	ಆಲೂರು	ಆಲೂರಾ ಬಿ.
		ಅಲ್ಲೂರ ಕೆ.
		ಅಲ್ಲೂರ ಹೆಚ್

೨	ಅಂಬೆವಾಡಿ	ಅಂಬೆಸಾಂಗವಿ
೩	ಅಟ್ಟಣಗಿ	ಅಟ್ಟೂರು
		ಅತ್ತರಗಾ
೪	ಅವರಗುಪ್ಪ	ಅವರಾದ
೫	ಬರೂರು	ಬರೂರ
೬	ಬೆಳ್ಳನಕೇರಿ	ಬೆಳಕೇರಿ
೭	ಬೆಟ್ಟಕೊಪ್ಪ	ಬೆಟ್ಟಬಾಲಕುಂದಾ
೮	ಭಂಡಾರಕೇರಿ	ಬಂಡಾರಕುಮಟಾ
೯	ಬೋರಿ	ಬೋರಾಳ
೧೦	ಚಿಮನಳ್ಳಿ	ಚಿಮಕೋಡ ಬಿ.
೧೧	ಚಿಂಚಖಂಡ	ಚಿಂತಲಗೇರಾ
೧೨	ಚಿಟಗೇರಿ	ಚಿಟಗುಪ್ಪಾ
೧೩	ದೇವಗಿರಿ	ದೇವಗಿರಿ
೧೪	ಡಿಗ್ಗಿ	ಡಿಗ್ಗಿ
೧೫	ಗೋರ್ಟಾ	ಗೋರ್ಟಾ
೧೬	ಗುರವಳ್ಳಿ	ಗೊರನಳ್ಳಿ
೧೭	ಹಳಮಳ್ಳಿ	ಹಾಲಹಳ್ಳಿ
೧೮	ಹಂಗಾರಖಂಡ	ಹಂಗರಗಿ. ಎ.
೧೯	ಹಣಕೋಣ	ಹಣಕುಣಿ
೨೦	ಜಮಗೆ	ಜಮಗಿ. ಬಿ.
೨೧	ಜನಗೇರಿ	ಜನವಾಡಾ
೨೨	ಕಲ್ಲೂರ	ಕಲ್ಲೂರ
೨೩	ಕಲಗೇರಿ	ಕಲ್ಯೂರಾ
೨೪	ಕುಣಜಿ	ಕಣಜಿ
೨೫	ಕಡವಾಡ	ಕಾಡವಾದ
೨೬	ಮಯನಾಳ	ಮಾವಿನಹಳ್ಳಿ

೧೭	ಮರೂರ	ಮರೂರ
೧೮	ನಾಗೂರ	ನಾಗೂರ
೧೯	ನಾರಾಯಣಪೂರ	ನಾರಾಯಣಪೂರ
೨೦	ಸಂಗೊಳ್ಳಿ ಮನೆ	ಸಂಗೊಳಿಗಿ
೨೧	ಶಿಂದೊಳ್ಳಿ	ಶಿಂಧೋಲ
೨೨	ಶಿವಪುರ	ಶಿವಪುರ

ಹೀಗೆ ಹಲವಾರು ಊರುಗಳ ಹೋಲಿಕೆ ಆಧಾರದ ಮೇಲೆ ಬನವಾಸಿಯ ಚುಟುಗಳು, ನಂತರ ಕದಂಬರು, ಬೀದರ್‌ನ ಪ್ರದೇಶದ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಿದರು ಎನ್ನುವುದನ್ನು ಸೂಚಿಸುವಂತಿದೆ. ಅಥವಾ ಸಾಮಂತರನ್ನು ಅಥವಾ ಅವರ ವಂಶಸ್ಥರನ್ನು ಇಲ್ಲಿಗೆ ಆಡಳಿತ ನಡೆಸಲು ಕಳುಹಿಸಿಕೊಟ್ಟಿದ್ದಾರೆಂದು ಊಹೆ ಮಾಡಬಹುದು.

ಬನವಾಸಿಯ ಕದಂಬರು ತಮ್ಮ ವಂಶದವರನ್ನು ಈ ಪ್ರದೇಶದೆಡೆಗೆ ಅಧೀನ ಆಳರಸರಾಗಿ ಯೋಜಿಸಿದರು ಎನ್ನುವ ಅಂಶ ಬಳ್ಳರೆನಾಡು, ಬಾಗಡಗೆ, ಅಟ್ಟಳೆ ನಾಡು, ಪಳಿಯಂಡ ಮುಂತಾದ ಅಂದಿನ ಅಧೀನ ರಾಜಕೀಯ ಘಟಕಗಳ ಮೂಲಕ ತಿಳಿದುಬರುತ್ತದೆ. ಬೈರನಮಟ್ಟಿ, ಕುರಗೋಡು, ರಂಜೇರು ಮುಂತಾದ ಕಡೆಗಳಲ್ಲಿ ದೊರೆತಿರುವ ಶಾಸನಗಳು ಈ ಅಂಶಕ್ಕೆ ಆಧಾರ ಒದಗಿಸುತ್ತವೆ. ಜೊತೆಯಲ್ಲಿ ಬನವಾಸಿಯ ಕಡೆಯಿಂದ ಬಂದ ಅಧೀನ ಆಳರಸರು ತಮ್ಮೊಂದಿಗೆ ಬ್ರಾಹ್ಮಣರನ್ನು ಕರೆದುಕೊಂಡುಬಂದರಲ್ಲದೆ ಅವರಿಗೆ ಅಗ್ರಹಾರಗಳನ್ನು ನಿರ್ಮಿಸಿಕೊಟ್ಟರು. ರಂಜೇರು (ಬೀದರ ಜಿಲ್ಲೆಯ ಇಂದಿನ ಖೇಣಿ ರಂಜೋಳದಲ್ಲಿ ದೊರೆತಿರುವ ಶಾಸನಗಳು ರಂಜೇರುವಿನ ಸಿಂದರು) (ನಾಗವಂಶದವರು-ಕದಂಬರೊಂದಿಗೆ ರಕ್ತಸಂಬಂಧ ಬೆಳೆಸಿದವರು) ಬೀದರ ಪ್ರದೇಶದಲ್ಲಿ ರಂಜೇರುವನ್ನು ರಾಜಧಾನಿ ಯನ್ನಾಗಿಸಿಕೊಂಡು ಭಾಲ್ಕಿಯಲ್ಲಿ ಅಗ್ರಹಾರ ನಿರ್ಮಿಸಿ ತಮ್ಮೊಂದಿಗೆ ಕರೆತಂದ ಬ್ರಾಹ್ಮಣರನ್ನು ಅಲ್ಲಿ ವಾಸಮಾಡಲು ಅವಕಾಶ ಮಾಡಿಕೊಟ್ಟರೆಂಬ ಅಂಶ ರಂಜೇರು ವಿನ ಶಾಸನ ತಿಳಿಸುತ್ತದೆ. ಸುತ್ತಲು ಅನೇಕ ಅಗ್ರಹಾರಗಳು ಬೆಳೆದು ಬಂದವು. ಅದೇ ಪರಂಪರೆ ಮುಂದುವರಿಯಿತು. ಮುಂದೆ ಪ್ರಸಿದ್ಧ ವಿಜ್ಞಾನೇಶ್ವರರು ಜನ್ಮ ತಳೆದದ್ದು ಭಾಲ್ಕಿ ತಾಲೂಕಿನ ಮಾಸೆಮಡು ಎಂಬ ಅಗ್ರಹಾರದಲ್ಲಿ ಎಂಬ ಅಂಶವೂ ತಿಳಿದು ಬರುತ್ತದೆ.

೮. ಬೀದರ : ನಾಗವಂಶದವರ ಸಂಬಂಧ

ಪ್ರಾಚೀನ ಕಾಲದಿಂದಲೂ ನಾಗರು ಪ್ರಸಿದ್ಧಿ ಪಡೆದ ಜನಾಂಗ. ಇವರು ನಾಗರ ಪಂಗಡಕ್ಕೆ ಸೇರಿದವರು. ಯಮುನಾ ನದಿಯ ಪದ್ಮಾವತಿ, ಅಹಿಚ್ಛತ್ರ, ಕಾಂತಿಪುರಗಳು ಇವರ ಚಟುವಟಿಕೆಯ ಕೇಂದ್ರಗಳಾಗಿದ್ದವು. ಕುಶಾನ ಅರಸರ ಸಾಮಂತರು (Feudatories) ಆಗಿದ್ದ ನಾಗರು, ಕ್ರಿ.ಶ. ೨ನೇ ಶತಮಾನದ ಉತ್ತರಾರ್ಧದ ವೇಳೆಗೆ ಎರಡು ಅರಸು ಮನೆತನಗಳಾಗಿ ಮಧ್ಯಪ್ರದೇಶದ ಪದಮಪಾವ್ಯ (ಇಂದಿನ ಗ್ವಾಲಿಯರ್‌ನ ಹತ್ತಿರ) ಮತ್ತೊಂದು, ಉತ್ತರ ಪ್ರದೇಶದ ಪಶ್ಚಿಮದಲ್ಲಿ ಏಳಿಗೆಗೆ ಬಂದು ಕುಶಾನರನ್ನು ಭಾರತದಲ್ಲಿ ಮೂಲೆಗೊತ್ತಿದರು. ಕುಶಾನರ ಪತನಾನಂತರ ಗುಪ್ತರು ಏಳಿಗೆಗೆ ಬರುವವರೆಗೆ (ಕ್ರಿ.ಶ. ೧೫೦ ರಿಂದ ೩೦೦ರವರೆಗೆ) ಉತ್ತರ ಭಾರತದಲ್ಲಿ ಅನೇಕ ಸಣ್ಣಪುಟ್ಟ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ನಾಗರು (ಅರಸ ಗಣಪತಿನಾಗ ಮತ್ತು ಇತರರು), ಅಹಿಚ್ಛತ್ರ (ಬೃಹತ್ಸವತಿ ಮಿತ್ರ ಇತರರು) ರಾಜ್ಯ ಪ್ರಭುತ್ವಗಳು ಕ್ರಿ.ಶ. ನಾಲ್ಕನೆಯ ಶತಮಾನದ ವೇಳೆಗೆ ನಾಗ ಮನೆತನದ ಎರಡು ಶಾಖೆಗಳು ಉತ್ತರ ಭಾರತದಲ್ಲಿ ಆಳುತ್ತಿದ್ದವು.

ಅವುಗಳಲ್ಲಿ ಒಂದು ಪ್ರಾಂತ ಮಧ್ಯಪ್ರದೇಶದ ಪದ್ಮಾವತಿ (ಇಂದಿನ ಮಧ್ಯಪ್ರದೇಶದ ಗ್ವಾಲಿಯರ್‌ನ ಹತ್ತಿರದ ನಾರಾವಾರದ ಉತ್ತರ ಪೂರ್ವದಲ್ಲಿ ೨೫ ಮೈಲಿ ದೂರದ ಪದಮಪಾವ್ಯ)ಯಲ್ಲಿ ಮತ್ತೊಂದು ಪ್ರಾಂತ ಉತ್ತರ ಪ್ರದೇಶದ ಮಥುರಾದಲ್ಲಿ ಆಳ್ವಿಕೆ ನಡೆಸಿದ್ದರು. ಇದೇ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ವಿದೇಶದಿಂದ ಆಗಮಿಸಿ ಭಾರತದಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದ ಶಕ ಕ್ಷತ್ರಪರು ಕುಶಾನರನ್ನು ಇಲ್ಲಿಂದ ಕಾಲ್ತೆಗೆಯುವಂತೆ ಪ್ರಯತ್ನಿಸಿದವರಲ್ಲಿ ನಾಗವಂಶಸ್ಥರು ಮಾತ್ರ ಎಂದು ವಾಕಾಟಕರು ಹೇಳುವುದರಲ್ಲಿ ಉತ್ಪ್ರೇಕ್ಷವಿಲ್ಲ.

ಪುರಾಣಗಳ ಮಾಹಿತಿ ಪ್ರಕಾರ ಮಥುರಾದಿಂದ ಏಳು ಅರಸರು ಮತ್ತು ಪದ್ಮಾವತಿಯಿಂದ ಒಂಬತ್ತು ಜನ ಆಳಿದ್ದು ತಿಳಿದುಬರುತ್ತದೆ. ಕ್ರಿ.ಶ. ೩೨೫ರ ಸುಮಾರಿಗೆ ಗುಪ್ತರು ಏಳಿಗೆಗೆ ಬರುತ್ತಿದ್ದ ಕಾಲದಲ್ಲಿ ನಾಗರು ಮಹತ್ವದ ಅರಸರಾಗಿದ್ದರು. ನಾಗರು ಅನನ್ಯ ಹಿಂದೂಧರ್ಮ ಪೋಷಕರು. ತೋಳುಗಳಿಗೆ ಶಿವಲಿಂಗವನ್ನು ಕಟ್ಟಿಕೊಳ್ಳುತ್ತಿದ್ದರಿಂದ ಇವರನ್ನು ಬಾರಶಿವನಾಗರೆಂದು ಕರೆಯಲಾಗಿದೆ.

ಇವರಲ್ಲಿ ಗಣಪತಿನಾಗ, ನಾಗಸೇನ, ಪ್ರಮುಖ ಅರಸರು. ಪದ್ಮಾವತಿಯ ನಾಗರು ಬಹುಶಃ ಭರಶೈವರಾಗಿದ್ದರು. ಗಂಗಾ ನದಿಯವರೆಗೆ ರಾಜ್ಯವನ್ನು ಗೆದ್ದು ಹತ್ತು ಅಶ್ವಯಾಗ (Performed ten sacrifices) ಆಚರಿಸಿದುದು ಇವರ ಸಾಮ್ರಾಜ್ಯ ಕಟ್ಟುವ ಅಪೇಕ್ಷೆಯನ್ನು ಸೂಚಿಸುತ್ತದೆ. ದಿನಕಳೆದಂತೆ ನಾಗರು ಮತ್ತು ವಾಕಾಟಕರಲ್ಲಿ ವೈವಾಹಿಕ ಸಂಬಂಧಗಳು ಏರ್ಪಟ್ಟವು. (ವಾಕಾಟಕರು ವಿಂಧ್ಯಪರ್ವತದ ಆಯಕಟ್ಟಿನ ದಖನ್ ಪ್ರದೇಶದಲ್ಲಿ ಏಳಿಗೆಗೆ ಬಂದರು. ಗುಪ್ತರೊಡನೆ ವಿವಾಹ ಸಂಬಂಧಗಳನ್ನು ಹೊಂದಿದರು. ಗುಪ್ತರು ಏಳಿಗೆಗೆ ಬಂದಂತೆ ಪ್ರಾಮುಖ್ಯ ಕಳೆದು ಕೊಂಡ ವಾಕಾಟಕರು ಮತ್ತು ಗುಪ್ತರ ಪತನಾನಂತರ ಕ್ರಿ.ಶ. ಸುಮಾರು ೬ನೇ ಶತಮಾನದಲ್ಲಿ ಪ್ರಬಲರಾದರು. ವಾಕಾಟಕರು ಹಿಂದೂ ಧರ್ಮಕ್ಕೆ ನೀಡಿದ ಪ್ರೋತ್ಸಾಹ ಸ್ಮರಣೀಯ. ಉತ್ತರ ಭಾರತದಲ್ಲಿ ನಾಗರಿಂದ ಆರಂಭವಾದ ಒಂದು ಹಿಂದು ರಾಜ್ಯ ಸ್ಥಾಪನೆಯ ಕಾರ್ಯ ವಾಕಾಟಕರಿಂದ ಮುಂದುವರಿದು ಗುಪ್ತರ ಆಳಿಕೆ ಯಲ್ಲಿ ಪೂರ್ಣಗೊಂಡಿತ್ತು. ಈ ಮುನ್ನ ಆಳ್ವಿಕೆ ನಡೆಸಿದ ಕುಶಾನರು ಬೌದ್ಧಧರ್ಮದ ಪ್ರೋತ್ಸಾಹಕರಾಗಿದ್ದರು. ಆದ್ದರಿಂದ ಹಿಂದೂ ಧರ್ಮ ನಿರ್ಲಕ್ಷಿಸಲ್ಪಟ್ಟಿತ್ತು.)

ನಾಗರಿ ಲಿಪಿಯೂ ಮತ್ತು ನಾಗರ ಶೈಲಿಯೂ ಅಲ್ಲದೆ ಪ್ರಾಕೃತಕ್ಕೆ ಬದಲಾಗಿ ಸಂಸ್ಕೃತ ಬಳಕೆಯಲ್ಲಿ ಬಂದುದು ಇವರಿಂದಲೇ. ಗುಪ್ತರು ಸಂಸ್ಕೃತದಲ್ಲಿ ನವೋದಯ ತರಲು ನಾಗರೇ ಕಾರಣ. ಇವರ ಆಶ್ರಯದಲ್ಲಿ ಅಜಂತಾದ ಕೆಲವು ಗುಹೆಗಳು ನಿರ್ಮಿತವಾದಂತೆ ಕಂಡುಬರುತ್ತದೆ.

ಬೀದರ ಜಿಲ್ಲೆಯ ಅಟ್ಟಳೆ ನಾಡಿನ ರಾಜಧಾನಿ ರಂಜೇರುವಿನ ಆಳರಸರು ತಮ್ಮನ್ನು ಸಿಂದಕುಳೋದ್ಭವರೆಂದು ಪರಿಗಣಿಸುತ್ತಾರೆ. ತಮ್ಮ ದೇಶವನ್ನು ''ದೇಶಂಗಳ ರಸನಟ್ಟಳೆದೇಶಂ'' ಎಂದಿದ್ದಾರೆ. ಅವರು ಪದ್ಮಾವತಿಲಬ್ಧ ವರ-ಪ್ರಸಾದ, ಭೋಗಾವತಿ ಪುರವರಾಧೀಶ್ವರ, ಅಹಿಚ್ಛತ್ರ ಪುರವರ್ಮನ-ರಕ್ಷ ದಕ್ಷ, ವ್ಯಾಘ್ರ ಲಾಂಛನ, ಫಣೀಂದ್ರಕೇತನ ಮೊದಲಾದ ಅನೇಕ ಬಿರುದುಗಳನ್ನು ಹೊಂದಿದ್ದರು. ಖೇಣಿ ರಂಜೋಲ ದಲ್ಲಿರುವ ಶಾಸನಗಳು ಇವೆಲ್ಲವುಗಳಿಗೆ ಆಧಾರ. ಸಿಂದರ ಬೇರೆಡೆ ಸಿಗುವ ಶಾಸನಗಳಲ್ಲೂ ಸಹ ಇವೇ ಅಂಶಗಳು ಕಂಡುಬರುತ್ತವೆ. ಸಿಂದರು ತಮ್ಮನ್ನು ನಾಗವಂಶದವರೆಂದು ಹೇಳಿಕೊಂಡಿರುತ್ತಾರೆ. ಈ ಮನೆತನದ ಇತಿಹಾಸ ನಮ್ಮನ್ನು ಬನವಾಸಿ ಯವರೆಗೂ ಅಹಿಚ್ಛತ್ರದವರೆಗೂ - ಮಧ್ಯಪ್ರದೇಶದ ಸಿಂದ-ಪಾರಾ ನದಿ ತೀರ ಪ್ರದೇಶದೆಡೆಗೆ ತೆಗೆದುಕೊಂಡುಹೋಗುತ್ತದೆ. ಬೀದರ ಜಿಲ್ಲೆಯಲ್ಲಿ ಪಾರಾ, ಸಿಂಧೋಲ ಮನೆತನ, ಸಿಂದನಕೇರಾ, ಸಿಂಧೋಲ, ಸಿಂಧಬಂದಗಿ ಗ್ರಾಮಗಳು ಸಮೀಪದಲ್ಲಿ ನಾಗನಕೇರಾ ಊರುಗಳು ಇವೆ. ಬೀದರ್‌ನ ಸಂಗ್ರಹಾಲಯದಲ್ಲಿರುವ ನಾಗವಂಶದ ಸಿಂದರ ಶಾಸನದಲ್ಲಿ ಮೈಲಾರ ವೀರಪ್ರದೇಶದ ಉಲ್ಲೇಖವಿದೆ.

ಮೈಲಾರಕ್ಷೇತ್ರ ಬೀದರ-ಭಾಲ್ಕಿ ಇವುಗಳ ನಡುವೆ ಬರುತ್ತದೆ. ರಂಜೇರುವಿನ ಸಿಂಧ ಮನೆತನದ ಅರಸನೋರ್ವನಿಗೆ ಚಾಳುಕ್ಯರಾಯನಿಂದ ಪ್ರತಿಷ್ಠಾಚಾರ್ಯನೆಂಬ ಬಿರುದು ದೊರಕಿದ್ದಿತು. ಕಲ್ಯಾಣಿ ಚಾಲುಕ್ಯರಿಗೆ ಅವರ ಅಧೀನದಲ್ಲಿದ್ದು ಅನೇಕ ರೀತಿಯಲ್ಲಿ ಅವರು ಸಹಾಯ ಒದಗಿಸಿದ ಉದಾಹರಣೆಗಳಿವೆ. ಹದಿಮೂರನೆ ಶತಮಾನದಲ್ಲಿ ಈ ಮನೆತನದವರು ಓರಂಗಲ್ಲಿನ ಕಾಕತೀಯರ ಪರವಾಗಿ ಕಾದಿದ ಉಲ್ಲೇಖಗಳು ಶಾಸನಗಳಲ್ಲಿ ದೊರಕುತ್ತವೆ. ಮೈಲಾರ ವೀರ ಪ್ರದೇಶದೊಳು ಸೇಉಣರಂ ಗೆಲಿದು ರುದ್ರಮದೇವರಾಯಗೆ ಬೀದರ ಸುತ್ತಣ ಪ್ರದೇಶವನ್ನು ಕಾಕತೀಯ ರಾಜ್ಯದ ಭಾಗವಾಗಿಸಿದರು. ಅಂದು ಬೀದರ ದೇವಗಿರಿಯ ಯಾದವರ ಆನಂತರ ಓರಂಗಲ್ಲಿನ ಕಾಕತೀಯರ ಅಧೀನದ ಪ್ರಸಿದ್ಧ ಪಟ್ಟಣವಾಗಿದ್ದಿತು. ಆಗ ಬೀದರನ್ನು ಬೆಡಣದ ಕೋಟ ಎಂದು ಕರೆಯಲ್ಪಡುತ್ತಿತ್ತು.

ಅದೇ ಸುಮಾರಿಗೆ ಇಲ್ಲಿ ಶರಣ ವೀರಸಂಗಯ್ಯ ಪ್ರಸಿದ್ಧಿ ತಳೆದಿದ್ದರು. ವೀರ ಸಂಗಯ್ಯನ ಚೌಪದಗಳು ಪ್ರಸಿದ್ಧವಿವೆ. ಆ ಕಾಲಕ್ಕೆ ಬೀದರ ಬಿದರೂರುಪುರ ಎಂದು ಕರೆಯಲ್ಪಡುತ್ತಿತ್ತು. ಕೋಹಿರ (ಈಗ ಆಂಧ್ರದಲ್ಲಿದೆ) ಓಂಕಾರಪುರವೆಂದು ಪ್ರಸಿದ್ಧಿ ಪಡೆದಿದ್ದಿತು. ವೀರಸಂಗಯ್ಯ ಓಂಕಾರಪುರದ ಭಾಸ್ಕರ ಎಂಬಾತನೊಂದಿಗೆ ಕದನ ನಡೆಸಿ ಗೆದ್ದ ಉಲ್ಲೇಖ ಕೂಡ ದೊರಕುತ್ತದೆ. ವೀರಸಂಗಯ್ಯನ ಸಮಾಧಿ ಬೊಮ್ಮ ಗೊಂಡೇಶ್ವರ ಕೆರೆಯ ಪಕ್ಕದಲ್ಲಿದ್ದು, ಈ ಎರಡೂ ಪ್ರಸಿದ್ಧ ಸ್ಥಳಗಳು ಬೀದರ ಕೋಟೆಯ ಒಳಗೆ ಇರುವುದು ಗಮನಾರ್ಹವಾಗಿದೆ.

ದೇವಗಿರಿಯ ಯಾದವರ ವಶದಲ್ಲಿ ಈ ಪ್ರದೇಶ ಕೆಲಕಾಲ ಇದ್ದ ಪರಿಣಾಮವಾಗಿ ಇಲ್ಲಿ ಮರಾಠಿಭಾಷೆ ಹಾಗೂ ಮೋಡಿಲಿಪಿ ಪ್ರಮುಖಸ್ಥಾನ ಪಡೆದು ಕೊಂಡವು. ಮುಂದೆ ಬಹಮನಿ ಅರಸರ ಕಾಲಕ್ಕೆ ಸ್ಥಳೀಯ ಆಡಳಿತದಲ್ಲಿ ಮರಾಠಿ ಹೆಚ್ಚಿನ ಆದ್ಯತೆ ಪಡೆಯಿತು. ಅನೇಕ ಊರುಗಳು ಗಾಂವಗಳಾಗಿ ಪರಿವರ್ತನೆ ಗೊಂಡವು. ಶಿಕ್ಷಣದಲ್ಲಿ ಗಣಿತಕ್ಕೆ ಆದ್ಯತೆ ದೊರೆಯಿತು. ಅದಕ್ಕೆ ಕಾರಣವೆಂದರೆ ದೇವಗಿರಿಯ ಯಾದವರ ಸೈನ್ಯದ ಅನೇಕ ಮುಖಂಡರು ತಮ್ಮ ಬಿಡುವಿನ ಸಮಯದಲ್ಲಿ ಗಣಿತದ ಸಮಸ್ಯೆಗಳನ್ನು ಬಿಡಿಸುವುದನ್ನು ತಮ್ಮ ಹವ್ಯಾಸವನ್ನಾಗಿಸಿ ಕೊಂಡಿದ್ದರು. ಪಂಡಿತರ ಬೆಂಬಲ ಕೂಡ ಅವರಿಗೆ ಇದ್ದಿತು. ಭಾಸ್ಕರಾಚಾರ್ಯ ಎನ್ನುವ ಓರ್ವ ಪಂಡಿತನ ಹೆಸರು ಬೀದರ್‌ನೊಂದಿಗೆ ಜೋಡಿಸಲ್ಪಡುತ್ತದೆ.

ಓರಂಗಲ್ಲಿನ ಕಾಕತೀಯರ ಆಳ್ವಿಕೆಯ ಕಾಲದಲ್ಲಿ ಸ್ಥಳೀಯ ಆಡಳಿತದಲ್ಲಿ ಪರಿವರ್ತನೆ ಏರ್ಪಟ್ಟು ಸ್ಥಿರ ವ್ಯವಸ್ಥೆಯಾಗಿ ಬೆಳೆದು ಬಂದಿತು. ಅದರಲ್ಲಿ ಗ್ರಾಮದ ಎಲ್ಲ ಆಯಕಾರರಿಗೆ ಮಹತ್ವದ ಸ್ಥಾನ ಒದಗಿಸಲಾಯಿತು.

೯. ರಂಜೇರುವಿನ ಸಿಂದರು

ಚರಿತ್ರೆಯಲ್ಲಿ ಬೀದರಿಗೆ ಎರಡು ಕಾರಣಕ್ಕಾಗಿ ಮಹತ್ವವಿದೆ. ಒಂದು ಅನೇಕ ಪ್ರಮುಖ ಅರಸರ ಆಳ್ವಿಕೆಗೆ ಒಳಪಟ್ಟ ಪ್ರಮುಖ ಪಟ್ಟಣವಾಗಿದ್ದುದು. ಇನ್ನೊಂದು ಕೆಲ ಅರಸರು, ಸಾಮಂತರು ಬೀದರನ್ನೇ ಮುಖ್ಯಕೇಂದ್ರವನ್ನಾಗಿಟ್ಟು ಆಳ್ವಿಕೆ ಮಾಡಿದುದು. ಬೀದರಿನಲ್ಲಿ ದೊರೆತಿರುವ ಹಲವಾರು ಶಾಸನಗಳು, ಈ ಮೇಲಿನ ಅಂಶಗಳಿಗೆ ಸಮರ್ಥನೆಯನ್ನು ನೀಡುತ್ತವೆ. ಇಲ್ಲಿ ದೊರೆತಿರುವ ಹಲವಾರು ಶಾಸನಗಳು, ಬೀದರ ಮುಖ್ಯ ಆಳ್ವಿಕೆಯ ಭಾಗವಾಗಿರುವುದನ್ನು ಸಾಬೀತುಪಡಿಸುವುದರೊಂದಿಗೆ, ಈ ಶಾಸನಗಳು ಈ ಭಾಗದ ಮಹೋನ್ನತ ಚರಿತ್ರೆಯ ಎಳೆಗಳನ್ನು ಬಿಂಬಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿವೆ. ದೊಡ್ಡ ಸಾಮ್ರಾಜ್ಯವನ್ನು ಕಟ್ಟದೆ ಇದ್ದರೂ ಚಿಕ್ಕಪುಟ್ಟ ಸಾಮಂತರಾಗಿ ಅಥವಾ ಮಾಂಡಲಿಕರಾಗಿ ವೈಭವದ ಆಳ್ವಿಕೆ ನಡೆಸಿ ಇತಿಹಾಸದ ಪುಟಗಳಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಅಂತಹ ಸಣ್ಣಪುಟ್ಟ ಸಾಮಂತರ ಸಾಲಿನಲ್ಲಿ ಬರುವ ಮತ್ತು ಸಾಮ್ರಾಟನಿಗೆ ಸ್ವಾಮಿನಿಷ್ಠೆಯನ್ನು ತೋರಿ ತಮ್ಮ ಕಾರ್ಯ ವೈಖರಿಯನ್ನು ತೋರಿಸಿ ಆಳರಸರ ಮೆಚ್ಚುಗೆಗೆ ಪಾತ್ರರಾದವರೆಂದರೆ ರಂಜೇರುವಿನ ಸಿಂದರು.

ಇದುವರೆಗೆ ಇತಿಹಾಸಕಾರರು ಸಿಂದ ಮನೆತನದವರು ರಂಜೇರುವಿನಲ್ಲಿ (ಇಂದಿನ ಖೇಣಿ ರಂಜೋಳ) ಆಳ್ವಿಕೆ ನಡೆಸಿದರೆಂಬುದು ತೋರಿಸಿಕೊಡದೆ ಇದ್ದದ್ದು ಚಾರಿತ್ರಿಕ ಪ್ರಜ್ಞೆಯ ದುರಂತ ಮತ್ತು ಈ ಭಾಗದ ದುರ್ದೈವವೆಂದು ಹೇಳಬಹುದು. ಖ್ಯಾತ ಇತಿಹಾಸಕಾರರಾದ ಬಾ.ರಾ. ಗೋಪಾಲರು ಮತ್ತು ರು.ಮ. ಷಡಕ್ಷರಯ್ಯ ಅಲ್ಲದೆ ಶ್ರೀಯುತ ನಾಗಯ್ಯ ಮೊದಲಾದವರು ಇಲ್ಲಿನ ವಿವಿಧ ವಿಷಯಗಳ ಕುರಿತು ಸಂಶೋಧನೆ ನಡೆಸಿ ಗತಕಾಲದ ವೈಭವಯುತವಾದ ಚರಿತ್ರೆಯನ್ನು ಬೆಳಕಿಗೆ ತರುವ ಪ್ರಯತ್ನ ಮಾಡಿದ್ದಾರೆ. ಅವರಿಗೆ ದೊರೆತ ಐತಿಹಾಸಿಕ ದಾಖಲೆಗಳ ಆಧಾರದ ಮೇಲೆ ಇಲ್ಲಿನ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಚೆಲ್ಲಿ, ಅದರ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ.

ರಂಜೇರು ಈ ಭಾಗದ ಅತಿ ಪ್ರಾಚೀನ ಗ್ರಾಮಗಳಲ್ಲಿ ಒಂದು. ಕಾರಂಜಾ ನದಿ ತೀರದಲ್ಲಿ ಇರುವ ಈ ಊರು ಪೂನಾ ಹಾಗೂ ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿ (ಎನ್.ಎಚ್.) ೯ರ ಪಕ್ಕದಲ್ಲಿ ಹುಮನಾಬಾದ ತಾಲೂಕಿನ ಮನ್ನಾಖೆಳ್ಳಿ ಸಮೀಪ

ಇದೆ. ಈ ಊರಿಗೆ ''ಖೇಣಿ ರಂಜೋಲ'' ಎಂಬ ಹೆಸರು ಬರಲು ಕಾರಣವೆಂದರೆ ಇದು ಪ್ರಾಚೀನ ಕಾಲದಲ್ಲಿ ವ್ಯಾಪಾರಿಗಳ ನೆಲೆಯಾಗಿದ್ದು ''ಕೇಣಿ'' ಎಂದರೆ ಕ್ರಯ ವಿಕ್ರಯದ ನೆಲೆಯೆಂದು ಕನ್ನಡ ನಿಘಂಟುವಿನಲ್ಲಿ ವಿವರಿಸಲಾಗಿದೆ. ಹೀಗೆ ಖೇಣಿ ರಂಜೋಳ ಆ ಕಾಲಕ್ಕೆ ಒಂದು ವ್ಯಾಪಾರ ಕೇಂದ್ರವಾಗಿತ್ತು. ಹಿಂದಿನ ಕಾಲದಲ್ಲಿ ಹಿರಿಯ ವ್ಯಾಪಾರಿಗಳಿಗೆ ನಗರರೆಂದು ಮತ್ತು ಶೆಟ್ಟಿಗಳಿಗೆ ನಗರ್ತಕರೆಂದು ಕರೆಯುತ್ತಿದ್ದರು. ನಗರ್ತಕರ ಮುಖ್ಯ ಉದ್ಯೋಗ ವ್ಯಾಪಾರವಾಗಿದ್ದು, ಶೆಟ್ಟಿಗಳನ್ನೇ ಶ್ರೇಷ್ಠಿ ಅಥವಾ ಪಟ್ಟಣಶೆಟ್ಟಿಗಳೆಂದು ಕರೆಯುವ ವಾಡಿಕೆ ಇತ್ತು. ಹೀಗಾಗಿ ಈ ಊರಿನಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಪಾರಿಗಳಿದ್ದು ಇದೊಂದು ವ್ಯಾಪಾರ ಕೇಂದ್ರವಾಗಿತ್ತೆಂಬುವುದರಲ್ಲಿ ಅನುಮಾನವಿಲ್ಲ, ಅದಕ್ಕಾಗಿಯೇ ಈ ಊರಿಗೆ ಖೇಣಿ ಎಂಬ ಹೆಸರು ಬಂದಿರಬೇಕು ಎಂದು ಊಹಿಸಬಹುದು.

ಊರ ಹೊರವಲಯದಲ್ಲಿ ಒಂದು ಹನುಮಂತನ ದೇವಾಲಯವಿದೆ. ಆ ದೇವಾಲಯದ ಪ್ರವೇಶ ಬದಿಯಲ್ಲಿ ನಾಗಶಿಲ್ಪ ಮತ್ತು ಸಪ್ತಮಾತೃಕೆಯರ ಶಿಲ್ಪಗಳನ್ನು ಗೋಡೆಯಲ್ಲಿ ಕಾಣುತ್ತೇವೆ. ಈ ಹನುಮಂತ ದೇವಾಲಯದ ಸಮೀಪದಲ್ಲಿಯೇ ಒಂದು ಶಿವಲಿಂಗವಿದೆ. ಇದು ಪ್ರಾಚೀನ ಶಿವದೇವಾಲಯವಾಗಿದ್ದು ಇತ್ತೀಚಿಗೆ ಹನುಮಂತ ದೇವಾಲಯವಾಗಿ ಮಾರ್ಪಡಿಸಲಾಗಿದೆ ಎಂದು ಇಲ್ಲಿನ ಸ್ಥಳೀಯರ ಹೇಳಿಕೆಯಾಗಿದೆ. ಊರಿನ ಸುತ್ತಲೂ ಹಲವಾರು ಪ್ರಾಚೀನ ಅವಶೇಷಗಳ ಕುರುಹುಗಳಿದ್ದು ಈ ಪ್ರದೇಶ ಆದಿ ಶಿಲಾಯುಗದ ಜನರ ವಾಸಸ್ಥಳವಾಗಿತ್ತೆಂಬುವುದು ಬಹುಜನ ಇತಿಹಾಸಕಾರರ ಅಭಿಮತವಾಗಿದೆ. ಹಾಳುನೆಲದ ದಿನ್ನೆಗಳು, ಒರಟಾದ ಕಲ್ಲಿನ ಆಯುಧಗಳು, ಕಲ್ಲು ಗುಂಡುಗಳು, ಮಡಕೆ ಚೂರುಗಳು, ಬೆಣಚುಕಲ್ಲುಗಳು, ಸ್ಫಟಿಕದ ಹರಳು ಕಲ್ಲುಗಳು, ಇಲ್ಲಿ ಸಾಕಷ್ಟು ಸಿಗುವುದರಿಂದ ಇದು ಶಿಲಾಯುಗದ ನೆಲೆ ಎಂದು ನಂಬಲಾಗಿದೆ. ಈ ರೀತಿಯ ಭವ್ಯತೆಯನ್ನು ಹೊಂದಿರುವ ಖೇಣಿ ರಂಜೋಳ ಬೀದರ್‌ನ ಇತಿಹಾಸ ಪುಟಗಳಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಈ ಊರಿನ ಹನುಮಂತ ದೇವಾಲಯದ ಹಿಂಬದಿಯಲ್ಲಿ ದೊರೆತ ಶಾಸನದ ಆಧಾರದ ಮೇಲೆ ಈ ನಾಡನ್ನು ಅಟ್ಟಳೆ ನಾಡು ಎಂದು ಮತ್ತು ರಂಜೇರು, ಚಾಳುಕ್ಯರ ಚಕ್ರವರ್ತಿಯಾದ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಸಿಂದವಂಶದ ಮಹಾಮಾಂಡಲಿಕನಾದ ಹಜ್ಜಮಹೀಶನೆಂಬುವವನು ಈ ಶಾಸನ ಬರೆಸಿದನೆಂಬುದಾಗಿ ತಿಳಿದುಬಂದಿದೆ. ಈ ಶಾಸನ ಹಳೆಗನ್ನಡದ ಚಂಪೂ ಶೈಲಿಯಲ್ಲಿದೆ.

ರಂಜೇರು ಅಟ್ಟಳೆ ನಾಡಿನ ರಾಜಧಾನಿಯಾಗಿದ್ದಿತು. ನಾಗವಂಶದ ಸಿಂದ ಮನೆತನದ ಅರಸರು ಇಲ್ಲಿಂದ ಮಾಂಡಲಿಕರಾಗಿ ಆಳಿದರು ಎನ್ನುವ ವಿಷಯ ಆ ಗ್ರಾಮದ ಹೊರವಲಯದಲ್ಲಿ ದೊರಕುವ ಶಾಸನಗಳು ತಿಳಿಸುತ್ತವೆ. ಆ ಶಾಸನಗಳ

ಬಗೆಗೆ ಮೊದಲಿಗೆ ಹೆಚ್ಚಿನ ಬೆಳಕು ಚೆಲ್ಲಿದವರು ಡಾ|| ಬಾ. ರಾ. ಗೋಪಾಲ್‌ರವರು. ಅಲ್ಲಿ ದೊರೆತ ಶಿಲಾಶಾಸನಗಳು ಸಿಂದ ಮನೆತನದ ಬಗೆಗೆ, ಅದರ ಉಗಮದ ಬಗೆಗೆ ವಿಸ್ತೃತ ಮಾಹಿತಿ ನೀಡುತ್ತವೆ. ಬೀದರ ಕೋಟೆಯೊಳಗೆ ಇರುವ ಕನ್ನಡ ಶಾಸನಗಳು ಸಿಂದ ಮನೆತನದ ಕುರಿತಾದ ವಿವರಣೆ ನೀಡುತ್ತದೆ. ಇಲ್ಲಿ ದೊರೆತ ಶಾಸನದಲ್ಲಿ ವಿವರಿಸಿರುವಂತೆ ಹಜ್ಜ ಮಹಿಪನ ವಂಶಾವಳಿ ಮತ್ತು ಮನೆತನದ ಕಥೆಯ ಸ್ಥೂಲವಿವರ ಈ ರೀತಿಯಾಗಿದೆ.

ಉರಗರಾಜ ಧರಣೇಂದ್ರ ತನ್ನ ಮುಖ್ಯರಾಣಿ ಪದ್ಮಾವತಿಯೊಂದಿಗೆ ಭೋಗಾವತಿಪುರವೆಂಬ ರಾಜಧಾನಿಯನ್ನು ಆಳುತ್ತಿದ್ದನು. ಸಿಂಧು ನದಿತೀರದಲ್ಲಿ ವಿಹಾರಕ್ಕೆಂದು ಬಂದಿದ್ದ ರಾಣಿ ಸುಂದರ ಹಾಗೂ ಶೂರಮಗನಿಗಾಗಿ ಸೂರ್ಯ ದೇವನನ್ನು ಪ್ರಾರ್ಥಿಸಿದಳು. ಅವಳ ಪ್ರಾರ್ಥನೆಯ ಫಲವಾಗಿ ರಾಣಿ ಪದ್ಮಾವತಿಗೆ ಆ ದೇವನು ಸುಂದರ ಮಗುವೊಂದನ್ನು ದಯಪಾಲಿಸಿದನು. ಆ ಮಗುವನ್ನು ಪಾಲನೆ ಪೋಷಣೆಗಾಗಿ ಹುಲಿಗೆ ಒಪ್ಪಿಸಿದಳು. ಹುಲಿಯ ಹಾಲುಂಡು ಮಗು ಬೆಳೆಯಿತು. ಇದನ್ನು ಕಂಡ ಒಬ್ಬ ತಳಾರನು ಅಹಿಚ್ಛತ್ರದ ಬ್ರಾಹ್ಮಣನಿಗೆ ವಿಷಯವನ್ನು ಅರುಹಿದನು. ಬ್ರಾಹ್ಮಣರು ಮಗುವನ್ನು ದೈವೀಪುರುಷನೆಂದು ಬಗೆದು, ಆ ಮಗುವನ್ನು ಸಿಂದನೆಂದು ಹೆಸರಿಸಿ, ಸಕಲ ವಿದ್ಯೆಗಳನ್ನು ಹೇಳಿಕೊಟ್ಟರು. ಶಾಸ್ತ್ರಪಾರಂಗತ ಆ ಮಗು ಯುವಕನಾಗಿ ಬೆಳೆದಾಗ ಉತ್ತಮ ಕನ್ಯೆಯೊಂದಿಗೆ ಲಗ್ನ ಮಾಡಲು ಆ ವಿಪ್ರರು ಬಗೆದರು. ಅಹಿಚ್ಛತ್ರದಿಂದ ಯುವಕನ ಸಮೇತ ಬನವಾಸಿಗೆ ಆಗಮಿಸಿದರು. ಬನವಾಸಿಗೆ ಬಂದು ಅಲ್ಲಿ ಆಳ್ವಿಕೆ ನಡೆಸುತ್ತಿದ್ದ ಕದಂಬ ಅರಸ ಮಯೂರವರ್ಮನಿಗೆ ಆತನ ಮಗಳನ್ನು ಕೊಟ್ಟು ವಿವಾಹ ಮಾಡಲು ತಿಳಿಸಿದರು. ಮೊದಲಿಗೆ ಮಯೂರ ವರ್ಮ ಸಿಟ್ಟಿಗೆದ್ದ. ಆಗ ಸಿಂದ ತನ್ನ ಪರಾಕ್ರಮ ತೋರಿ ನಿಡುದೋಳಸಿಂದನೆಂಬ ಬಿರುದು ಪಡೆದ.

ಸಿಂದನ ಪರಾಕ್ರಮವನ್ನು ಕಂಡ ಕದಂಬ ಮಯೂರವರ್ಮ ಅಹಿಚ್ಛತ್ರಪುರದ ಯುವರಾಜ ಸಿಂದನೊಂದಿಗೆ ತನ್ನ ಮಗಳಾಗಿದ್ದ ಲಕ್ಷ್ಮಿಮತಿಯ ವಿವಾಹವನ್ನು ವಿಜೃಂಭಣೆಯಿಂದ ಜರುಗಿಸಿದ. ಅವರಿಂದ ಮುಂದೆ ನಾಲ್ಕು ಗಂಡುಮಕ್ಕಳು ಹುಟ್ಟಿದವು. ಅವರುಗಳೆಂದರೆ - ಪ್ರಭುಸೇವ್ಯ, ಸತ್ಯಸೇವ್ಯ, ಜಗತ್‌ಸೇವ್ಯ ಮತ್ತು ಬುದ್ಧಸೇವ್ಯ. ಈ ನಾಲ್ಕು ಜನ ಕುವರರು ಶೂರರಾಗಿ ಬೆಳೆದು ಅವರು ಮುಂದೆ ಕ್ರಮವಾಗಿ ಬಾಗಡಗೇದೇಶ, ಪಳಿಯಂಡ್‌ಮಂಡಲ್, ಅಟ್ಟಳೆ ನಾಡು ಮತ್ತು ಬಳ್ಳರೆ ನಾಡಿಗೆ ಒಡೆಯರಾದರು.

ಅವರಲ್ಲಿ ಜಗತ್‌ಸೇವ್ಯ ರಂಜೇರುವನ್ನು ರಾಜಧಾನಿಯನ್ನಾಗಿಸಿಕೊಂಡು ಆಳಲಾರಂಭಿಸಿದನು. ಆ ಮನೆತನದ ಹಜ್ಜಮಹಿಪನು ಚಾಳುಕ್ಯ ಅರಸ ಆರನೇ

ವಿಕ್ರಮಾದಿತ್ಯನ ಮಾಂಡಲೀಕನಾಗಿದ್ದನು. ಆತನ ಆಳ್ವಿಕೆ ಕಾಲದಲ್ಲಿ ಕ್ರಿ.ಶ. ೧೦೭೬-೧೧೨೬ರ ನಡುವೆ ರಂಜೇರುವಿನ ಶಾಸನಗಳು ಬರೆಯಿಸಲ್ಪಟ್ಟವು ಎನ್ನುವುದು ಬಾ. ರಾ. ಗೋಪಾಲ್‌ರವರ ಅಭಿಪ್ರಾಯವಾಗಿದೆ.

ಜಗತ್‌ಸೇವ್ಯನ ಕುಟುಂಬದಲ್ಲಿ ಕುನ್ನುಲ ಮತ್ತು ಬೊಪ್ಪಲರು ಹುಟ್ಟಿದರು. ಅವರ ನಂತರ ಅನೇಕರು ಆಳಿದರು. ಮುಂದೆ ದುಗ್ಗತಿ ಮತ್ತು ಹರಕತೆ ಎಂಬುವವರು ಆಳಿದರು. ಆನಂತರ ಹಜ್ಜರಸನಿಗಿಂತ ಮುನ್ನ ಅಲ್ಲಮ, ಬದ್ದೆಗ, ಗೊಣ್ಣ, ಗೊಂಕ ಇವರು ಆಳಿದಂತೆ ಕಂಡುಬರುತ್ತದೆ.

ಹಮ್ಮಲದೇವಿ ಹಜ್ಜರಸನ ಸತಿಯಾಗಿದ್ದಳು. ಅವರಿಂದ ಹುಟ್ಟಿದವನು ಪೇರ್ಮಡಿ. ಪೇರ್ಮಡಿಯ ಮಗ ಭೈರವ. ಭೈರವನ ಮಗ ಹೆಮ್ಮ. ಹೆಮ್ಮನ ಮಕ್ಕಳು ಬಾಚಿದೇವ ಹಾಗೂ ಬರ್ಮದೇವ. ಬರ್ಮದೇವ ಕಳಚೂರು ಅರಸರಿಗೆ ಮಾಂಡಲೀಕನಾಗಿದ್ದ. ನಂತರ ಆತನಿಗೆ ಆದ್ಯರಸನೆಂಬ ಹೆಸರು ಬರುತ್ತದೆ. ಆತನು ಸೇವುಣರಸ ಎರಡನೇ ಸಿಂಘಣನ ಮಹಾಮಾಂಡಲೇಶ್ವರನಾಗಿದ್ದ. ಮುಂದೆ ಈ ಮನೆತನದ ಅರಸರು ಓರಂಗಲ್ಲಿನಲ್ಲಿ ಕಾಕತೀಯರ ಪರವಹಿಸಿ ದೇವಗಿರಿಯ ಯಾದವರೊಂದಿಗೆ ಹೋರಾಟ ನಡೆಸಿದರು. ಹಿರಿಯ ಭೈರವನ ಹೆಸರು ಬೀದರ ಕೋಟೆಯಲ್ಲಿರುವ ಶಾಸನದಲ್ಲಿ ಉಲ್ಲೇಖಿತಗೊಂಡಿದೆ. ಈ ಶಾಸನದ ಆಧಾರದ ಮೇಲೆ ವಿವಿಧ ಮಾಹಿತಿಗಳನ್ನು ನಾವು ಪಡೆಯಬಹುದಾದರೂ ಸಿಂದ ವಂಶಸ್ಥರು ಕಾಕತೀಯರ ಪರವಹಿಸಿ ದೇವಗಿರಿಯ ಯಾದವರೊಡನೆ ನಡೆಸಿದ ಹೋರಾಟದ ನಂತರ ಸಿಂದ ಅರಸ ಭೈರವನೆಂಬ ಹೆಸರು ಮಾತ್ರ ನಮಗೆ ಕಾಣಸಿಗುತ್ತದೆ. ಆದರೆ ಭೈರವನ ನಂತರ ಇವರ ವಂಶಾವಳಿಗಳ ಬಗ್ಗೆ ನಿಖರವಾದ ಮಾಹಿತಿ ದೊರೆಯುವುದಿಲ್ಲ. ಅದಕ್ಕಾಗಿ ಹಿರಿಯ ಭೈರವನ ನಂತರ ಈ ಮನೆತನ ಹೇಗೆ ಮುಂದುವರೆಯಿತು ಎನ್ನುವ ಬಗೆಗೆ ಯಾವುದೇ ಖಚಿತ ಆಧಾರಗಳಿಲ್ಲ.

ರಂಜೇರು, ಹಾಲಹಳ್ಳಿ, ಬೀದರಕೋಟೆ, ಆಣದೂರ, ಭಾಲ್ಕಿ, ಇಂಚೂರು ಮುಂತಾದೆಡೆ ದೊರೆತ ಶಾಸನಗಳು ರಂಜೇರುವಿನ ಸಿಂದ ಮನೆತನದ ಬಗೆಗೆ ವಿವರಣೆಗಳನ್ನು ಒದಗಿಸುತ್ತವೆ. ಅಲ್ಲಲ್ಲಿ ಮಾಹಿತಿಯ ಕೊರತೆ ಕಂಡುಬಂದರೂ ಸಹ ಆ ಮನೆತನದ ಆಳ್ವಿಕೆಯ ಸಾಕಷ್ಟು ವಿವರಗಳು ದೊರಕುತ್ತವೆ. ಈ ಭಾಗದ ಸಂಬಂಧ ಉತ್ತರದಲ್ಲಿ ಅಹಿಚ್ಛತ್ರದಿಂದ ದಕ್ಷಿಣದ ಬನವಾಸಿಯವರೆಗೆ ಸಾಗುತ್ತದೆ. ರಾಜಧಾನಿ ರಂಜೇರುವಿನ ಜೊತೆಗೆ ಭಲ್ಲುಂಕೆ (ಭಾಲ್ಕಿ) ಕೂಡ ಬೆಳೆಯಲಾರಂಭಿಸಿತು. ಹಜ್ಜರಸ ಎಂಬುವವನ ಹೆಸರಿನ ಮೇಲೆ ಇಂದಿನ ಹಜ್ಜರಿಗೆ ಎಂಬ ಊರಾಯಿತು ಎಂಬುದು ಇತಿಹಾಸತಜ್ಞರ ಅಭಿಪ್ರಾಯವಾಗಿದೆ. ಅಲ್ಲದೆ ಅಂದಿನ ಅರಸ ಭೈರವನು ಹೆಮ್ಮೇಶ್ವರ ಮತ್ತು ಮೈಲಳೇಶ್ವರ ಮಂದಿರಗಳನ್ನು ಸ್ಥಾಪಿಸಿದನೆಂದು ಶಾಸನಗಳು ತಿಳಿಸುತ್ತವೆ.

ಈತನು ರಂಜೇರುವಿನಲ್ಲಿ ಹಜ್ಜೇಶ್ವರ ದೇವಾಲಯ ನಿರ್ಮಿಸಿದನು, ಜೊತೆಗೆ ಇತರೆ ಅನೇಕ ಕಡೆಗಳಲ್ಲಿ ದೇವಾಲಯಗಳಿದ್ದವು. ಆದರೆ ಇಂದು ಅವುಗಳೆಲ್ಲವು ಕಾಲಗರ್ಭ ದಲ್ಲಿ ಹುದುಗಿ ಹೋಗಿವೆ. ಇಂದು ಕೇವಲ ಅವುಗಳ ಅವಶೇಷಗಳನ್ನು ಮಾತ್ರ ನಾವು ಕಾಣಬಹುದಾಗಿದೆ.

ಶಾಸನಗಳಲ್ಲಿ ಅಟ್ಟಳೆನಾಡಿನ ಸುಂದರ ವರ್ಣನೆಯನ್ನು ಈ ರೀತಿಯಾಗಿ ವಿವರಿಸಲಾಗಿದೆ. ''ಅವರೊಳಗೆ ಜಗತ್ಸೇಬ್ಯಂ ಭುವನ ಜನಾಶ್ಚರ್ಯ ಸೌರ್ಯನುಂ ಸಿಂದಕುಳಾರ್ಣ್ಣವ ಮೃಗಲಕ್ಷನುಮೆನಿಪುತ್ತವದಿಂದ ಸೇರಿದನೊಪ್ಪುವ ಅಟ್ಟಳೆ ನಾಡೊಳು ಭುವನೋತ್ತಮರೆನಿಸಿದ ಸಿಂದವಂಶಭವರೊಡನೆ ಬಂದಹಿಛತ್ರದ ಭೂದಿವಿಜರ್ಗೆ ನಮಶ್ಯಮನಯ್ಯವೊಳಿಯೂಮಂ ಕೊಟ್ಟರೊಸೆದು ಭಲುಂಕೆಯಮ..''

ಬೀದರ ಒಂದು ದೇಶವಾಗಿ : ಶಾಸನದ ಪಾಠ

ಬೀದರ ಪ್ರದೇಶವನ್ನು ಅಟ್ಟಳೆ ನಾಡೆಂದು ಮತ್ತು ವಿವಿಧ ಹೆಸರಿನಿಂದಲೂ ಕರೆಯುವುದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಆದಾಗ್ಯೂ ಈ ಕೆಳಗಿನ ಶಾಸನ ಈ ಪ್ರದೇಶದ ಮಹತ್ವದ ಬಗ್ಗೆ ವಿವರಣೆ ನೀಡುತ್ತದೆ.

''ತದ್ದಕ್ಷಿಣಭಾಗದೋಳ್ವಿಷಯಲಕ್ಷ್ಮೀಕುಂತಳಂ ಅಂತು ದೆಸೆದೆಸೆಗೆ ಸೊಗಯಿಸುತ ಮೆರೆವುದು ನಿಶ್ಚಲ ಸಂತಂ ದೇಶಂಗಳರಸನಟ್ಟಳೆದೇಶಂ'' - ಅಲ್ಲಿಗಲ್ಲಿಗೆ ಶಿವಭವನಂಮವಲ್ಲಲ್ಲಿಗೆ ದಿಬ್ಯತೀರ್ಥನಂದನವನಮತಲ್ಲಲ್ಲಿಗೆ ಪುರ ಶೋಭೆಗಳೆಲ್ಲಾ ಗುಣದಿಂದನಧಿಕ...''

ಈ ಶಾಸನಗಳಲ್ಲಿ ಆ ಕಾಲಕ್ಕೆ ಪ್ರಸಿದ್ಧವಾಗಿದ್ದ ಇಂಚೂರು, ಭಾಲ್ಕಿ, ಧನಶ್ರೀ, ಕಂಬಿತಾಣ, ಮಂಗಳಿಗೆ, ಶಿರಶಿಗೆ, ಹಾಲಹಳ್ಳಿ, ಮೇರೆಕಲ್ಲು, ಗಿಣಿಗೇರೆ, ಹಳುಖೇಡ, ಅಣದೂರ, ಮೈಲಾರ, ಪುಲಿಚೆರ, ನಾಗಾಪೆ, ಹಜ್ಜವರಿಗೆ ಮುಂತಾದ ಊರುಗಳ ಹೆಸರುಗಳು ಉಲ್ಲೇಖಿತಗೊಂಡಿವೆ.

ಬೀದರ ಪ್ರದೇಶವನ್ನು ತಮ್ಮ ಕೇಂದ್ರವಾಗಿಸಿ, ಅನೇಕ ಅರಸು ಮನೆತನಗಳು ತಮ್ಮ ಆಳ್ವಿಕೆಯನ್ನು ನಡೆಸಿ ಮೆರೆದಿವೆ. ಆದರೆ ಸಿಂದರಿಗೂ ಮತ್ತು ಇತರೆ ಅರಸು ಮನೆತನಗಳಿಗೂ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದು. ಅದೇನೆಂದರೆ ಬೇರೆ ಕಡೆ ರಾಜಧಾನಿಯನ್ನು ಹೊಂದಿದ್ದು ಬೀದರ ಪ್ರದೇಶ, ತಮ್ಮ ಅಧೀನ ಪ್ರದೇಶವೆಂದು ಪರಿಗಣಿಸುತ್ತಿದ್ದರು. ಆದರೆ ರಂಜೇರುವಿನ ಸಿಂದರು ಬೀದರನ್ನು ರಾಜಧಾನಿಯಾಗಿ ತಮ್ಮ ಆಳ್ವಿಕೆ ಆರಂಭಿಸಿದ್ದು ವಿಶೇಷವಾಗಿದೆ. ಅದಕ್ಕಾಗಿ ಬೀದರ ಜಿಲ್ಲೆಯಿಂದ ಆಳಿದ ಮನೆತನಗಳಲ್ಲಿ ರಂಜೇರುವಿನ ಸಿಂದರ ಮನೆತನ ಮೊದಲಿನದು. ಕ್ರಿ.ಶ.ಸು.

೩೬೦ ರಿಂದ ಹದಿಮೂರನೇ ಶತಮಾನದ ಉತ್ತರಾರ್ಧದವರೆಗೆ ಸತತವಾಗಿ ಮಾಂಡಲೀಕರಾಗಿ ಆಳಿದವರು ಇವರು. ಕದಂಬರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಳುಕ್ಯರು, ಕಳಚೂರಿ, ದೇವಗಿರಿ ಯಾದವರು ಮತ್ತು ಓರಂಗಲ್ಲಿನ ಕಾಕತೀಯರಿಗೆ ರಂಜೇರುವಿನ ಸಿಂದರು ಅಧೀನರಾಗಿ ಆಳಿದರು. ಕಲ್ಯಾಣಿ ಚಾಳುಕ್ಯರಿಗೆ ಆಪತ್ಕಾಲದಲ್ಲಿ ವಿಶೇಷ ಸಹಾಯ ಒದಗಿಸಿದವರು ಇವರು. ಶೈವಧರ್ಮಕ್ಕೆ ಹೆಚ್ಚು ಒತ್ತು ನೀಡಿ ರಾಜಧರ್ಮವನ್ನು ಈ ನಾಡಿನಲ್ಲಿ ಮೆರೆಸಿದರು ಎಂದರೂ ತಪ್ಪಾಗಲಿಕ್ಕಿಲ್ಲ. ರಂಜೇರುವಿನ, ಅಲ್ಲದೆ ಅಟ್ಟಳೆನಾಡಿನ ಸಾಂಸ್ಕೃತಿಕ ಅಧ್ಯಯನದ ಸಂಶೋಧನೆ ನಡೆದಲ್ಲಿ ಹೆಚ್ಚಿನ ಅಂಶಗಳು ಹೊರಬೀಳುವ ಸಾಧ್ಯತೆಗಳಿವೆ.

ಭಲ್ಲುಂಕೆ (ಇಂದಿನ ಭಾಲ್ಕಿ), ಬಗದಾಳ (ಇಂದಿನ ಬಗದಲ್) ಈ ಊರುಗಳು ತಮ್ಮದೇ ಆದ ರೀತಿಯಲ್ಲಿ ಪ್ರಸಿದ್ಧಿ ತಳೆದಿದ್ದವು. ಭಲ್ಲುಂಕೆ ಅಂದು ಪ್ರಸಿದ್ಧ ಅಗ್ರಹಾರವಾಗಿದ್ದಿತು. ಅಟ್ಟಳೆ ನಾಡಿನ ಪ್ರಮುಖ ಉಪವಿಭಾಗ ಇದಾಗಿದ್ದಿತ್ತು. ಕೆಲಕಾಲ ರಾಜಧಾನಿಯೂ ಆಗಿದ್ದಿತ್ತು. ಇಲ್ಲಿ ಶ್ರೀಮೈತ್ರೈಪುರುಷ, ಕಪಿಲೇಶ್ವರ, ಉತ್ತರೇಶ್ವರ, ಭಲುಂಕೇಶ್ವರ ಮುಂತಾದ ದೇವಾಲಯಗಳು ಮತ್ತು ಬ್ರಹ್ಮ ಜಿನಾಲಯಗಳು ಪ್ರಸಿದ್ಧಿ ತಳೆದಿದ್ದವು.

ಬಗದಾಳ(ವಗದಾಳ >ಬಗದಲ್) ದಲ್ಲಿ ಚಾಳುಕ್ಯ ಅರಸ ಆರನೇ ವಿಕ್ರಮಾದಿತ್ಯನ ರಾಣಿಯರಲ್ಲಿ ಓರ್ವಳಾಗಿದ್ದ ಸಿರಿಯಾದೇವಿ ಈ ಊರಿನಲ್ಲಿ ಇರುತ್ತಿದ್ದಳು. ಸಿರಿಯಾದೇವಿಗೆ ಅರಸ ವಿಕ್ರಮಾದಿತ್ಯ ಸಂಪೂರ್ಣವಾದ ಸ್ವಾತಂತ್ರ್ಯವನ್ನು ನೀಡಿದನು. ರಾಣಿ ತನ್ನ ಇಚ್ಛೆಯಂತೆ ದೇವಾಲಯಗಳ ನಿರ್ಮಾಣಗಳನ್ನಾಗಲಿ ಅಥವಾ ದಾನದತ್ತಿಗಳನ್ನು ನೀಡುವುದಕ್ಕಾಗಲಿ ಅರಸನ ಅಪ್ಪಣೆ ಅವಶ್ಯಕವಿರಲಿಲ್ಲ. ತನಗೆ ಸರಿಕಂಡುದನ್ನು ಅವಳಿಚ್ಛೆಯಂತೆ ಉದಾರವಾಗಿ ದಾನ, ದತ್ತಿ, ಜಹಗೀರುಗಳನ್ನು ನೀಡುತ್ತಿದ್ದಳು. ಇವಳ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಆಗಿನ ಕಾಲದಲ್ಲಿ ಅಣದೂರಿನ ನಾರಾಯಣೇಶ್ವರ ದೇವಾಲಯ ಮೈಲಾರ, ಮಹಾಭೈರವ, ಹಾಲಹಳ್ಳಿ ಸೋಮೇಶ್ವರ ದೇವಾಲಯಗಳು ಪ್ರಸಿದ್ಧವಾಗಿದ್ದವು.

೧೦. ಬಾದಾಮಿ ಚಾಳುಕ್ಯರು (ಕ್ರಿ. ಶ. ೫೦೦-೫೫೭)

ಬೀದರ ಪ್ರದೇಶವು ಬನವಾಸಿ ಕದಂಬರ (ಕ್ರಿ.ಶ. ೩೪೫-೫೩೦) ಆಳ್ವಿಕೆಯ ಕಾಲದಲ್ಲಿ ರಂಜೇರುವಿನ ಸಿಂದರ ಮಾಂಡಲೀಕತ್ವದಲ್ಲಿ ರಾಜಕೀಯ ವ್ಯವಸ್ಥೆ ರೂಪು ಪಡೆಯಿತು. ಕದಂಬರ ರಾಜಧಾನಿ ಬನವಾಸಿಯೊಂದಿಗೆ ಈ ಭಾಗ ಸಂಬಂಧ ತಳೆದಿದ್ದಿತು. ಕದಂಬ ಮಯೂರವರ್ಮನ ಮಗ ಕಂಗವರ್ಮನ ಆಳ್ವಿಕೆಯ ಕಾಲ ದಲ್ಲಿ ಮಧ್ಯ ಭಾರತದ ವಾಕಾಟಕ ಅರಸ ವಿಂಧ್ಯಸೇನನು ಕುಂತಳವನ್ನು ವಶಪಡಿಸಿ ಕೊಳ್ಳಲು ಯತ್ನಿಸಿ ಪರಾಭವಗೊಂಡ. ಅವರ ಕಾಲದಲ್ಲಿ ಪ್ರಸಿದ್ಧಿ ತಳೆದಿದ್ದ ಕಲ್ಲೇಶ್ವರ, ರಾಮೇಶ್ವರ ದೇವಾಲಯಗಳನ್ನು ಬೀದರ ಜಿಲ್ಲೆಯಲ್ಲಿಯೂ ಕಾಣಬಹುದಾಗಿದೆ.

ಕದಂಬರ ರಾಜ್ಯದಲ್ಲಿ ಒಂದು ಕಡೆ ಚಾಳುಕ್ಯರ ವಂಶದ ಜಯಸಿಂಹ ಅಧಿಕಾರಿ ಯಾಗಿದ್ದ. ಆ ವಂಶದ ಒಂದನೇ ಪುಲಿಕೇಶಿ ಕ್ರಿ.ಶ. ೫೩೫ರ ಸುಮಾರಿಗೆ ಸ್ವತಂತ್ರನಾಗಿ ರಾಜ್ಯಾಡಳಿತ ಆರಂಭಿಸಿದನು. ಬಾದಾಮಿ ಇವರ ರಾಜಧಾನಿಯಾಗಿತ್ತು. ಮಧ್ಯಪ್ರದೇಶದ ಕಲಚೂರಿಯರ ಮೇಲೆ ಬಾದಾಮಿ ಚಾಳುಕ್ಯರು ಯುದ್ಧ ನಡೆಸಿದರು. ಇಮ್ಮಡಿ ಪುಲಿಕೇಶಿ (ಕ್ರಿ.ಶ. ೬೦೯-೬೪೨)ಯ ಕಾಲ ಮಹತ್ವದ್ದು. ಏಕೆಂದರೆ ಕ್ರಿ.ಶ. ೬೧೦ರಲ್ಲಿ ರಾಜ್ಯದಲ್ಲಿ ಅರಾಜಕತೆಯ ಸಂದಿಗ್ಧ ಪರಿಸ್ಥಿತಿಯಲ್ಲಿ ಇಮ್ಮಡಿ ಪುಲಿಕೇಶಿ ಅಧಿಕಾರ ವಹಿಸಿಕೊಂಡಿದ್ದನು. ಅವನ ಅವಿರತ ಪರಿಶ್ರಮ ದಿಂದಾಗಿ ಬಾದಾಮಿ ಚಾಳುಕ್ಯರ ಕೀರ್ತಿ ಉತ್ತುಂಗಕ್ಕೇರಿತು. ಹೀಗಾಗಿ ಪ್ರಸಿದ್ಧ ಅರಸ ನೆಂದು ಮೆರೆದಿದ್ದಾನೆ. ಇವನ ಬಗೆಗೆ ಜೈನಕವಿ ರವಿಕೀರ್ತಿ ರಚಿಸಿದ ಐಹೊಳೆ ಶಾಸನದಲ್ಲಿ ಪುಲಿಕೇಶಿಯನ್ನು ಚಾಳುಕ್ಯ ಮನೆತನದ ಅಗ್ರಗಣ್ಯ ಅರಸನೆಂದು ವರ್ಣಿಸಲಾಗಿದೆ. ಅಲ್ಲದೆ ಇವನ ಸಾಧನೆಗಳ ಮತ್ತು ದಿಗ್ವಿಜಯಗಳ ಉಲ್ಲೇಖ ಈ ಶಾಸನದಲ್ಲಿ ನಿರೂಪಿತವಾಗಿದೆ. ಈ ಶಾಸನದ ಜೊತೆಗೆ ಚೀನಿ ಯಾತ್ರಿಕ ಹೂಯೆನ ತ್ಸಾಂಗ ಕೂಡ ಇಮ್ಮಡಿಪುಲಿಕೇಶಿಯ ಪರಾಕ್ರಮದ ಬಗ್ಗೆ ತನ್ನ ಪ್ರವಾಸ ಕಥನದಲ್ಲಿ ಉಲ್ಲೇಖಿಸಿದ್ದಾನೆ. ಉತ್ತರ ಭಾರತದ ದಿಗ್ವಿಜಯಗಳ ಬಗ್ಗೆ ನಿಖರವಾದ ಮಾಹಿತಿ ಈ ಚೀನಿ ಯಾತ್ರಿಕನಿಂದ ಪಡೆಯಬಹುದಾಗಿದೆ. ಆತ ಉತ್ತರದ ಹರ್ಷನೊಂದಿಗೆ ಘರ್ಷಣೆ ಮಾಡಿದ. ನರ್ಮದಾ ನದಿಯವರೆಗೆ ತನ್ನ ರಾಜ್ಯ ವಿಸ್ತರಿಸಿದ. ದಕ್ಷಿಣದಲ್ಲಿ ಈತನು ಪಲ್ಲವರನ್ನು ಸೋಲಿಸಿದನು. ಮುಂದೆ ಅವರಿಂದ ಸೋಲು ಅನುಭವಿಸ ಬೇಕಾಯಿತು. ಕ್ರಿ.ಶ. ೬೪೨ರಲ್ಲಿ ಇಮ್ಮಡಿ ಪುಲಿಕೇಶಿಯ ಕಾಲದ ನಂತರ ಚಾಳುಕ್ಯರ

ಆಡಳಿತಕ್ಕೆ ತಾತ್ಕಾಲಿಕ ಗ್ರಹಣ ಬಡಿದಿತ್ತೆಂದು ಹೇಳಬಹುದು. ಆದರೆ ಪುಲಿಕೇಶಿಯ ಮಕ್ಕಳಾದ ಚಂದ್ರಾದಿತ್ಯ, ಆದಿತ್ಯವರ್ಮ ಮತ್ತು ವಿಕ್ರಮಾದಿತ್ಯ ಎಂಬುವವರು ರಾಜ್ಯದಲ್ಲಿನ ಅರಾಜಕತೆ ಮನಗಂಡು ತಮ್ಮ ವಂಶವನ್ನು ಪುನಃ ಸ್ಥಾಪಿಸುವಲ್ಲಿ ಪ್ರಯತ್ನಿಸಿದರು. ಅವರಲ್ಲಿ ಮುಖ್ಯನಾದವನೆಂದರೆ ವಿಕ್ರಮಾದಿತ್ಯ. ಈತನು ಕಳೆದು ಹೋದ ಸಾಮ್ರಾಜ್ಯದ ಮೇರೆಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದನು. ಈತನ ತರುವಾಯ ಅವನ ಮಗನಾದ ವಿನಯಾದಿತ್ಯ ನಂತರ ವಿಜಯಾದಿತ್ಯರು ಉತ್ತರ ಭಾಗದ ಪ್ರದೇಶಗಳಲ್ಲಿ ದಿಗ್ವಿಜಯಗಳನ್ನು ಕೈಗೊಂಡು ಗಂಗಾನದಿಯ ವರೆಗೂ ಇವರ ರಾಜ್ಯ ವಿಸ್ತರಿಸಿದರು. ಇದೇ ಸಂದರ್ಭದಲ್ಲಿ ಬೀದರ ಪ್ರದೇಶ ಬಾದಾಮಿ ಚಾಲುಕ್ಯರ ಅಧೀನ ಪ್ರದೇಶವಾಗಿತ್ತೆಂದು ಊಹಿಸಿಕೊಳ್ಳಬಹುದು.

ವಿನಯಾದಿತ್ಯನ ನಂತರ ಪಟ್ಟವೇರಿದ ೨ನೇ ವಿಕ್ರಮಾದಿತ್ಯ ಲಾಟಮಂಡಲ ವನ್ನು ವಶಪಡಿಸಿಕೊಳ್ಳಬೇಕೆಂಬ ಹಂಬಲದಿಂದ ಬಂದಿದ್ದ ತಾಜಿಕ್ ಎಂಬ ಅರಬ್ಬರನ್ನು ಸೋಲಿಸಿ ಆ ಪ್ರದೇಶ ತನ್ನ ವಶಕ್ಕೆ ತೆಗೆದುಕೊಂಡನು. ಈಗಾಗಲೇ ಚಾಲುಕ್ಯರ ಆಳ್ವಿಕೆ ಅವನತಿ ಹಂತದಲ್ಲಿದ್ದು ಬಾದಾಮಿಯ ಚಾಲುಕ್ಯರ ಕೊನೆಯ ಅರಸನಾದ ೨ನೇ ಕೀರ್ತಿವರ್ಮನ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರಾಬಲ್ಯಕ್ಕೆ ಬರುತ್ತಿದ್ದ ರಾಷ್ಟ್ರಕೂಟರ ದಂತಿದುರ್ಗ ಎಂಬುವವನು ಕೀರ್ತಿವರ್ಮನನ್ನು ಸೋಲಿಸಿ ಮಾನ್ಯಖೇಟ ಪ್ರದೇಶದಲ್ಲಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡನು. ಆದಾಗ್ಯೂ ಕೀರ್ತಿವರ್ಮನು ಆತನನ್ನು ಸದೆಬಡಿಯಲು ಪ್ರಯತ್ನಿಸಿದನಾದರೂ ದಂತಿದುರ್ಗನ ನಂತರ ಬಂದ ೧ನೇ ಕೃಷ್ಣನ ಪರಾಕ್ರಮದ ಎದುರು ಕೀರ್ತಿವರ್ಮನು ಸೋಲನುಭವಿಸಬೇಕಾಯಿತು. ಈ ರೀತಿಯಾಗಿ ಕಣ್ಮರೆಯಾಗಿದ್ದ ಚಾಲುಕ್ಯ ರಾಜಮನೆತನವು ಪುನಃ ೧೦ನೇ ಶತಮಾನದಲ್ಲಿ ಬೀದರ ಪ್ರದೇಶದ ಕಲ್ಯಾಣದಲ್ಲಿ ಚಾಲುಕ್ಯ ಮನೆತನ ತಲೆ ಎತ್ತಿ ಹಿಂದಿನ ವೈಭವವನ್ನು ಪುನಃ ಸ್ಥಾಪಿಸಲಾಯಿತು. ಆ ಅರಸು ಮನೆತನವೇ ಕಲ್ಯಾಣ ಚಾಲುಕ್ಯ ಮನೆತನ. ಮುಂದೆ ಕ್ರಿ.ಶ. ೭೫೪ರ ಸುಮಾರಿಗೆ ರಾಷ್ಟ್ರಕೂಟರ ದೊರೆ ದಂತಿದುರ್ಗನು ಕೀರ್ತಿವರ್ಮನನ್ನು ಹಿಂದೆ ಸರಿಸಿ ಚಾಲುಕ್ಯ ಸಿಂಹಾಸನವನ್ನು ಏರಿದನು.

ಅಟ್ಟಳೆ ನಾಡು ಒಳಗೊಂಡಂತೆ ಇಡೀ ಬೀದರಿನ ಭಾಗ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದಿತ್ತು. ಆ ಕಾಲದಲ್ಲಿ ಅನೇಕ ದೇವಿಮಂದಿರಗಳು ಈ ಭಾಗದಲ್ಲಿ ನಿರ್ಮಾಣಗೊಂಡವು. ವಿಶೇಷವಾಗಿ ಲಕ್ಷ್ಮಿಗುಡಿಗಳು ನಿರ್ಮಾಣವಾದುವು. ಜೈನ ಧರ್ಮಕ್ಕೆ ಪ್ರೋತ್ಸಾಹ ದೊರಕಿತು. ವೈದಿಕ ಶೈವಧರ್ಮಗಳು ಈ ಕಾಲಕ್ಕೆ ಪ್ರಾಬಲ್ಯ ಪಡೆದಿದ್ದವು. ಒಟ್ಟಿನಲ್ಲಿ ಜೈನಧರ್ಮದ ಜೊತೆಗೆ ಅನ್ಯಧರ್ಮಗಳಿಗೂ ಇವರು ಪ್ರೋತ್ಸಾಹ ನೀಡುತ್ತಿದ್ದರು.

೧೧. ರಾಷ್ಟ್ರಕೂಟರು

ಮಾನ್ಯಖೇಟ/ಮಳಖೇಡ ರಾಷ್ಟ್ರಕೂಟರು (ಕ್ರಿ.ಶ. ೭೩೭-೯೭೩) ಪ್ರಥಮ ಬಾರಿಗೆ ಬೀದರಿಗೆ ಅತೀ ಸಮೀಪದಲ್ಲಿದ್ದ ಮಾನ್ಯಖೇಟದಲ್ಲಿ ಕಲ್ಯಾಣದ ಚಾಳುಕ್ಯರಿಗಿಂತ ಮೊದಲಿಗೆ ಮಹತ್ವದ ರಾಜಧಾನಿಯಾಗಿ ಸ್ಥಾಪಿಸಿದವರು. ಇದರಿಂದಾಗಿ ಕನ್ನಡ ಸಂಸ್ಕೃತಿ ಈ ಭಾಗದಲ್ಲಿ ಮತ್ತಷ್ಟು ಬಲಗೊಳ್ಳಲು ಅವಕಾಶ ದೊರಕಿತ್ತು. ಮಳಖೇಡ ರಾಷ್ಟ್ರಕೂಟರು ತಮ್ಮನ್ನು ಲಟಲೂರು ಪುರವರಾಧೀಶ್ವರ ರೆಂದು ಪರಿಗಣಿಸಿಕೊಳ್ಳುತ್ತಿದ್ದರು. ಬೀದರಿಗೆ ಪಕ್ಕದ ಲಾತೂರ ಅವರ ಮೂಲಸ್ಥಾನ. ಬೀದರ ನೆಲದಾಟಿ ಅವರ ಮುಂದೆ ಹಾದುಹೋದವರು. ರಾಷ್ಟ್ರಕೂಟರು ಉತ್ತರ ದಲ್ಲಿ ಎಲ್ಲೋರದ ಕೈಲಾಸ ದೇವಾಲಯವನ್ನು ಕಟ್ಟಿಸಿದವರು.

ಅಮೋಘವರ್ಷ ನೃಪತುಂಗ

ರಾಷ್ಟ್ರಕೂಟ ಮನೆತನ ದಂತಿದುರ್ಗ, ಒಂದನೆಯ ಕೃಷ್ಣ ಮತ್ತು ಮೂರನೆಯ ಗೋವಿಂದನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೇರಿತ್ತು. ಅದನ್ನು ಉತ್ತುಂಗ ಮಟ್ಟಕ್ಕೆ ಏರಿಸಿದ ಕೀರ್ತಿ ನೃಪತುಂಗ ಅಮೋಘವರ್ಷನಿಗೆ ಸಲ್ಲುತ್ತದೆ. ರಾಷ್ಟ್ರಕೂಟ ದೊರೆ ಗಳಲ್ಲಿಯೇ ಅತೀ ಹೆಚ್ಚುಕಾಲ ಅಂದರೆ ಸುಮಾರು ೬೪ ವರ್ಷಗಳ ಕಾಲ ರಾಜ್ಯವಾಳಿದ ಕೀರ್ತಿ ಈತನಿಗೆ ಸಲ್ಲುತ್ತದೆ. ರಾಷ್ಟ್ರಕೂಟರ ಶತ್ರುಗಳು ಮತ್ತು ಇತರರು ಸಿಂಹಾಸನದಲ್ಲಿ ಒಬ್ಬ ಅಪ್ರಾಪ್ತ ವಯಸ್ಸಿನ ಬಾಲಕ ಇರುವುದನ್ನು ಗಮನಿಸಿ ಇದರಿಂದ ಉತ್ತೇಜಿತರಾಗಿ ಅರಾಜಕತೆಯನ್ನು ಉಂಟುಮಾಡಲು ಪ್ರಯತ್ನಿಸಿದರು. ಬಹಳ ಕಷ್ಟ ದಿಂದ ಕರ್ಕನು ಅವರೆಲ್ಲರನ್ನು ಅಡಗಿಸಿದನು. ಅಲ್ಲಿಯವರೆಗೆ ಅವನು ಬಾಲಕ ಅಮೋಘವರ್ಷನನ್ನು ಯಾರಿಗೂ ತಿಳಿಯದ ಗುಟ್ಟಾದ ಸ್ಥಳದಲ್ಲಿ ಇರಿಸಿದ್ದನು. ೮೨೧ರಲ್ಲಿ ಕರ್ಕನು ಅವನಿಗೆ ರಾಜ್ಯವನ್ನು ವಹಿಸಿಕೊಟ್ಟನು. ನಂತರ ಅಮೋಘ ವರ್ಷನು ವೆಂಗಿ ಚಾಳುಕ್ಯ ದೊರೆ ಗುಣಗ ವಿಜಯಾದಿತ್ಯನ ಮೇಲೆ ಸೈನ್ಯವನ್ನು ಕಳುಹಿಸಿ ಅವನನ್ನು ಸೋಲಿಸಿ ಅವನ ರಾಜ್ಯವನ್ನು ಆಕ್ರಮಿಸಿಕೊಂಡನು. ಗುಣಗ ವಿಜಯಾದಿತ್ಯನ ಸಹಾಯದಿಂದ ನೊಳಂಬರಾಜ ವೆಂಗಿಯನ್ನು ಸೋಲಿಸಿದನು.

ನಂತರ ಗಂಗರಸ ನೀತಿಮಾರ್ಗನ ಮೇಲೆ ಯುದ್ಧ ಮಾಡಿದನು. ನೀತಿ ಮಾರ್ಗನು ರಾಷ್ಟ್ರಕೂಟ ಸೈನ್ಯವನ್ನು ಎದುರಿಸಲಾರದೆ ವೈವಾಹಿಕ ಸಂಬಂಧವನ್ನು ಬೆಳೆಸಿ ಸ್ನೇಹ ಮಾಡಿಕೊಂಡನು. ಈ ರೀತಿ ಅಮೋಘವರ್ಷನು ತನ್ನ ಶೌರ್ಯದಿಂದ

ರಾಜಕೀಯ ವಿಷಮಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸಮಯದಲ್ಲಿ ಕರ್ಕನು ತನ್ನ ರಾಜ್ಯವಾದ ಗುಜರಾತಿಗೆ ಹಿಂದಿರುಗಿದನು. ಪಲ್ಲವ ದೊರೆ ನಂದಿವರ್ಮನು ಅಮೋಘವರ್ಷನೊಂದಿಗೆ ಸ್ನೇಹದಿಂದ ಇದ್ದುದು ಮಾತ್ರವಲ್ಲದೆ, ಅವನ ಮಗಳನ್ನೂ ಮದುವೆಯಾಗಿದ್ದನು. ಅಮೋಘವರ್ಷನು ಶಾಂತಿಪ್ರಿಯನು. ಕಲೆ, ಧರ್ಮ, ಸಂಸ್ಕೃತಿ ಮತ್ತು ಸಾಹಿತ್ಯಗಳಲ್ಲಿ ಆಸಕ್ತಿ ಹೊಂದಿದವನು ಆಗಿದ್ದನು. ಅವನ ಸಂಜಾನ್ ಶಾಸನವು ತನ್ನ ಪ್ರಜೆಗಳ ಒಳಿತಿಗಾಗಿ ಅವನು ಮಾಡಿದ ಮಹಾತ್ಯಾಗವನ್ನು ವಿವರಿಸುತ್ತದೆ. ತನ್ನ ಪ್ರಜೆಗಳಿಗೆ ಉಂಟಾಗುತ್ತಿದ್ದ ಆಪತ್ತನ್ನು ತಪ್ಪಿಸಲು ಅವನು ತನ್ನ ಕೈಬೆರಳನ್ನೇ ಕೊಲ್ಲಾಪುರದ ಮಹಾಲಕ್ಷ್ಮಿಗೆ ಅರ್ಪಿಸಿದವನು. ಇಂತಹ ಸಂಗತಿಗಳು ಇತಿಹಾಸದಲ್ಲಿ ಅಪರೂಪ. ನೃಪತುಂಗನು ಸ್ವತಃ ವಿದ್ವಾಂಸನು, ಬರಹಗಾರನೂ ಆಗಿದ್ದನು. ಕನ್ನಡದಲ್ಲಿ ಇಲ್ಲಿಯವರೆಗೆ ದೊರಕಿರುವ ಅತ್ಯಂತ ಪ್ರಾಚೀನ ಗ್ರಂಥ ಕವಿರಾಜಮಾರ್ಗವನ್ನು ಅವನಿಗೆ ಅರ್ಪಿಸಲಾಗಿದೆ. ಆದರೆ ಕೆಲವು ವಿದ್ವಾಂಸರು ಇದು ಅವನ ಆಸ್ಥಾನ ಕವಿಯಾದ ಶ್ರೀವಿಜಯನಿಂದ ರಚಿತವಾಯಿತೆಂದು ಅಭಿಪ್ರಾಯ ಪಟ್ಟಿದ್ದಾರೆ.

ಖ್ಯಾತ ಜೈನಮುನಿ ಮತ್ತು ಲೇಖಕ ಜಿನಸೇನನು ನೃಪತುಂಗನ ಗುರುವಾಗಿದ್ದನು. ಶಾಕಟಾಯನನು ಅಮೋಘವರ್ಷನ ಆಶ್ರಯದಲ್ಲಿ ಅಮೋಘವೃತ್ತಿ ಎಂಬ ವ್ಯಾಕರಣಗ್ರಂಥವನ್ನು ರಚಿಸಿದನು. ಶಬ್ದಾನುಶಾಸನ ಇವನ ಇನ್ನೊಂದು ಕೃತಿ. ಗಣಿತಸಾರ ಸಂಗ್ರಹದ ಕರ್ತೃವಾದ ಮಹಾವೀರಾಚಾರ್ಯನು ಇವನ ಆಶ್ರಯದಲ್ಲಿದ್ದನು. ಅಮೋಘವರ್ಷನು ಮಾನ್ಯಖೇಟವನ್ನು ಸುಂದರ ನಗರವನ್ನಾಗಿ ಮಾರ್ಪಡಿಸಿ, ತನ್ನ ರಾಜಧಾನಿಯನ್ನಾಗಿ ಮಾಡಿದನು. ಬೌದ್ಧಧರ್ಮವೂ ಸೇರಿದಂತೆ ಎಲ್ಲಾ ಧರ್ಮಗಳಿಗೂ ಉದಾರ ಪ್ರೋತ್ಸಾಹದಾಯಕ ಆಶ್ರಯ ನೀಡಿದನು. ೬೪ ವರ್ಷಗಳ ದೀರ್ಘಕಾಲ ರಾಜ್ಯವಾಳಿ ಕ್ರಿ.ಶ. ೮೭೮ರಲ್ಲಿ ಮರಣ ಹೊಂದಿದನು. ತರುವಾಯ ಇವನ ಮಗನಾದ ಇಮ್ಮಡಿ ಕೃಷ್ಣನು ಉತ್ತರಾಧಿಕಾರಿಯಾದನು.

ರಾಷ್ಟ್ರಕೂಟರ ಕಾಲದ ಕೆಲ ಶಾಸನಗಳು ಬೀದರ ಜಿಲ್ಲೆಯಲ್ಲಿ ದೊರೆತಿವೆ. ಉದಾ : ಬೂದೇರಾ ಗ್ರಾಮದಲ್ಲಿ ದೊರೆತ ಶಾಸನ ರಾಷ್ಟ್ರಕೂಟರ ಕಾಲದ ಇತಿಹಾಸವನ್ನು ಮತ್ತು ಆಳರಸರ ಬಗೆಗಿನ ಮಾಹಿತಿಯನ್ನು ಒದಗಿಸುತ್ತದೆ. ಮಳಖೇಡ ಮತ್ತು ಅದರ ಸುತ್ತಮುತ್ತಲು ಇರುವ ಜೈನ ಬಸದಿಗಳ ಇರುವಿಕೆಯಿಂದ ರಾಷ್ಟ್ರಕೂಟ ದೊರೆಗಳು ಜೈನಧರ್ಮ ಪ್ರೋತ್ಸಾಹಕರಾಗಿದ್ದರೆಂಬುದು ತಿಳಿಯುತ್ತದೆ. ಅಂಥವುಗಳಲ್ಲಿ ಬಹುಶಃ ಬೀದರ ಜಿಲ್ಲೆಯ ಕಂಬಿತಾಣ (ಇಂದಿನ ಕಮಠಾಣ) ದ ಜೈನ್ ಬಸದಿ ಕೂಡಾ ಒಂದಾಗಿದೆ. ಶೈವ ಸನ್ಯಾಸಿಗಳು ಗೊರವಪುರಿಗಳಲ್ಲಿ ಇರುತ್ತಿದ್ದರು. ಬೀದರ ಜಿಲ್ಲೆಯಲ್ಲೂ ಅಂತಹ ಸಂಕೇತಗಳಿವೆ. ಬೀದರ ಪಟ್ಟಣದ ಸಮೀಪದಲ್ಲಿಯೇ

ಗೊರವನಹಳ್ಳಿ (ಗೊರನಹಳ್ಳಿ) ಇದೆ. ಅಲ್ಲಿ ಗುಹಾಂತರ ಸಮಾಧಿ ಕೂಡ ಇದೆ. ಬಸವಕಲ್ಯಾಣದ ಸಮೀಪ ಮೊರಖಂಡಿಯಲ್ಲೂ ಕೆಲ ಗುಹಾಂತರ ದೇವಾಲಯ ಗಳಿವೆ. ಇದು ಶೈವಧರ್ಮದ ಬಗೆಗಿನ ಗೌರವವನ್ನು ಸೂಚಿಸುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಗುಜರಾತ್ ಆಂಧ್ರಗಳೊಂದಿಗೆ ನೇರ ಸಂಪರ್ಕ ವೇರ್ಪಟ್ಟಿತ್ತು. ಆಂಧ್ರದ ವೇಮುಲವಾಡ ಕನ್ನಡನಾಡಿನ ಮಹತ್ವದ ಕೇಂದ್ರವಾಗಿ ದ್ದಿತು. ಬೀದರ ಪ್ರದೇಶದೊಂದಿಗೆ ಅದರ ನೇರ ಸಂಪರ್ಕ ಇದ್ದು ಬೀದರ ಹೈದ್ರಾಬಾದ್ ಮಾರ್ಗದಲ್ಲಿರುವ ಇಂದಿನ ಪಟಂಚೆರು (ಪಟ್ಟಣಚೆರವು) ರಾಷ್ಟ್ರಕೂಟರ ಕಾಲಕ್ಕೆ ಪೋಟ್ಟಳಕೆರೆ ಎಂದಾಗಿ ಕರೆಯಲ್ಪಡುತ್ತಿತ್ತು. ಅಲ್ಲದೆ ಆ ಊರು ಜೈನ ವಿಗ್ರಹಗಳನ್ನು ತಯಾರಿಸುವ ಮಹತ್ವದ ಕೇಂದ್ರವೂ ಆದಾಗಿತ್ತು.

ರಾಷ್ಟ್ರಕೂಟರು ಬೀದರ ಪ್ರದೇಶದಲ್ಲಿ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಂಡಿದ್ದಾ ರೆಂಬುದಕ್ಕೆ ಕೆಲವು ಊಹೆಗಳನ್ನು ಮಾಡಬಹುದು. ಅವುಗಳೆಂದರೆ ಅಂದಿನ ಆಳರಸ ರಾದ ಕರ್ಕ, ಖೊಟ್ಟಿಗ ಎಂಬುವವರ ಹೆಸರಿನಿಂದ ಕರೆಯುವ ಊರುಗಳು ಇಂದಿನ ಬೀದರ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಅವುಗಳೆಂದರೆ ರಾಜ ಕರ್ಕನ ಹೆಸರಿನಿಂದ ಕರ್ಕನಹಳ್ಳಿ ಮತ್ತು ಖೊಟ್ಟಿಗನ ಹೆಸರಿನಿಂದ ಖೊಟ್ಟಿಗೆಹಾಳ. ಆದಾಗ್ಯೂ ಈ ಹೆಸರಿನ ಮೇಲೆ ನಿಖರವಾಗಿ ಹೇಳಲು ಸಾಧ್ಯವಿಲ್ಲ.

ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಎಲ್ಲೆಡೆಯಿಂದ ಜನಗಳು ಇತ್ತ ಆಗಮಿಸಲು ಅವಕಾಶ ದೊರೆಯಿತು. ಜಬಲಪೂರ, ಗುಜರಾತ್, ಲಾಟ, ವೆಂಗಿ ಮುಂತಾದ ಕಡೆಗೆ ನೇರ ಸಂಪರ್ಕ ಏರ್ಪಟ್ಟಿತ್ತು ಎಂದು ಹೇಳಲು ಬೀದರನಲ್ಲಿರುವ ಲಾಡರ ಅಥವಾ ಲಾಟರ ಕೇರಿಗಳು ಜೊತೆಗೆ ಲಾಡರು ಒಂಟೆಗಳನ್ನು ಮಾರಲು ಉತ್ತರದಿಂದ ಬೀದರ ಪ್ರದೇಶಗಳಿಗೆ ತರುತ್ತಿದ್ದರು. ಅಲ್ಲದೆ ಲಾಟರು ಅನೇಕ ಭವಾನಿಗುಡಿಗಳನ್ನು ಕೂಡ ನಿರ್ಮಿಸುತ್ತಿದ್ದ ಉದಾಹರಣೆಗಳಿವೆ. ಬೀದರಿನ ಭಾಗ ಇದಕ್ಕೆ ಹೊರತಾಗಿರಲಿಲ್ಲ ಹೀಗಾಗಿ ಬೀದರ ಮತ್ತು ಉತ್ತರ ಭಾಗದ ಸಂಬಂಧವನ್ನು ಕಲ್ಪಿಸಬಹುದು.

ಬೀದರಿನ ವ್ಯಾಪ್ತಿ ಪ್ರದೇಶಕ್ಕೆ ಹೊಂದಿಕೊಂಡಿರುವ ನಾಡಿನ ವೇಮುಲ ವಾಡದ ಮಹಾಸಾಮಂತನಾಗಿದ್ದ ಅರಿಕೇಸರಿಯ ರಾಜಾಶ್ರಯದಲ್ಲಿದ್ದ ಪಂಪನಿಂದ ''ಆದಿಪುರಾಣ'', ''ವಿಕ್ರಮಾರ್ಜುನ ವಿಜಯ''ದಂತಹ ಮಹಾನ್ ಕೃತಿಗಳು ರಚಿತ ಗೊಂಡದ್ದು ಇದೇ ಕಾಲದಲ್ಲಿ. ಬೀದರಿಗೆ ಸಮೀಪದಲ್ಲಿರುವ (ಈಗ ಆಂಧ್ರದಲ್ಲಿ) ಅಲ್ಲದುರ್ಗ ಅಂದು ವರ್ಧಮಾನಪುರವಾಗಿತ್ತೆಂದು ಕೆಲವು ಆಧಾರಗಳಿಂದ ಹೇಳಲು ಸಾಧ್ಯವಾಗಿದೆ.

ವಿಶೇಷವೆಂದರೆ ''ವಡ್ಡಾರಾಧನೆ'' ಕೃತಿಯು ಇದೇ ಸುಮಾರಿಗೆ ರಚಿತ ಗೊಂಡಿತ್ತು. ಇದರ ಕರ್ತೃ ಶಿವಕೋಟಿ ಆಗಿರಬಹುದೆನ್ನುವುದು ಊಹೆ. ಆದರೆ

ಇತ್ತೀಚಿನ ಸಂಶೋಧನೆಗಳ ಅನ್ವಯ ಈ ಕೃತಿಯು ಬೀದರ ಸುತ್ತಣ ಪ್ರದೇಶದಲ್ಲಿ ರಚಿತಗೊಂಡಿರಬಹುದೆಂಬ ವಿಚಾರ ಬಲಗೊಳ್ಳುತ್ತಿದೆ. ಹಂಪನಾ ಅವರು ಇಂತಹದೆ ಇಂಗಿತ ವ್ಯಕ್ತಪಡಿಸಿರುತ್ತಾರೆ. ಈ ಕೃತಿಯಲ್ಲಿ ಪಳ್ಳಿಖೇಡ/ಹಳ್ಳಿಖೇಡ ಎಂದು ಹೆಸರು ಉಲ್ಲೇಖಿತಗೊಂಡಿದೆ. ಈ ಬಗೆಗೆ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯ. ಆ ಹಿಂದೆ ಈ ಭಾಗದಲ್ಲಿ ಇದ್ದ ಸರಳ ಸಾಮಾಜಿಕ-ಆರ್ಥಿಕ ಬದುಕಿನ ಮೇಲೆ ಕದಂಬರು, ಬಾದಾಮಿ ಚಾಳುಕ್ಯರು ಹಾಕಿಕೊಟ್ಟ ಬುನಾದಿ ಮೇಲೆ ಮಹತ್ವದ ಸಾಮಾಜಿಕ, ಸಾಂಸ್ಕೃತಿಕಕಾರ್ಯಗಳಾಗಿವೆ. ಸಾಹಿತ್ಯವು ಸಮೃದ್ಧವಾಗಿ ಸಂಬಂಧಿ ರಚನೆ ನಿರ್ಮಾಣ ಗೊಂಡದ್ದು ರಾಷ್ಟ್ರಕೂಟರ ಕಾಲದಲ್ಲಿಯೇ. ಹಾಗಾಗಿ ಮೊದಲ ಕೃತಿಗಳೆಲ್ಲ ರಾಷ್ಟ್ರಕೂಟರ ಕಾಲದಲ್ಲಿ ರಚನೆಯಾಗಿವೆ. ಸಾಹಿತ್ಯ ಕೃತಿಗಳು ಚಾರಿತ್ರಿಕ ನೆಲೆಗಳಲ್ಲಿ ಹೆಚ್ಚು ಉಪಯುಕ್ತವಾದ ಹಿನ್ನೆಲೆಯಲ್ಲಿ ರಾಷ್ಟ್ರಕೂಟರು ಸಾಹಿತ್ಯ ಮತ್ತು ಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿದ್ದಾರೆ.

೧೨. ಕಲ್ಯಾಣದ ಚಾಳುಕ್ಯರು

ಬೀದರ ಜಿಲ್ಲೆಯ ಪ್ರಸಿದ್ಧಿಗೆ ಕಲ್ಯಾಣ ಚಾಳುಕ್ಯರ ಕೊಡುಗೆ ಅಪಾರವಾಗಿದೆ. ಇತಿಹಾಸದ ಪುಟಗಳಲ್ಲಿ ಬೀದರ ಜಿಲ್ಲೆ ಪ್ರಜ್ವಲಿಸಬೇಕಾದರೆ ಕಲ್ಯಾಣ ನಾಡನ್ನು ಆಳಿದ ಅರಸರ ಪರಾಕ್ರಮ ಮತ್ತು ಪ್ರಜಾಹಿತ ರಕ್ಷಣೆ ಅಲ್ಲದೆ ಅವರ ಕಾಲದ ಸರ್ವಾಂಗೀಣ ಅಭಿವೃದ್ಧಿಯೇ ಕಾರಣ. ಕಲೆ, ಸಂಸ್ಕೃತಿ, ಸಾಹಿತ್ಯದಲ್ಲಿ ಉತ್ತುಂಗ ಮಟ್ಟವನ್ನೇರಿ ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ ಶರಣ ಸಂಸ್ಕೃತಿ ಈ ನಾಡಿನ ಕೀರ್ತಿ ಹೆಚ್ಚಿಸುವಲ್ಲಿ ಪ್ರಮುಖ ಅಂಶವಾಗಿದೆ.

ಕ್ರಿ.ಶ. ೯೭೩ ರಿಂದ ೧೨೦೦ರವರೆಗಿನ ಈ ಕಾಲವು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯದಲ್ಲಿ ಮೈಲಿಗಲ್ಲು ಸ್ಥಾಪಿಸಿತ್ತೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ರಾಷ್ಟ್ರಕೂಟರ ಸಾಮಂತರಾಗಿ ಸ್ವಾಮಿನಿಷ್ಠರಾಗಿ ಬಾಳಿದ ಕಲ್ಯಾಣ ಚಾಳುಕ್ಯ ವಂಶಸ್ಥರಲ್ಲಿ ಒಬ್ಬನಾದ ತೈಲಪನೆಂಬುವವನು ಬಾದಾಮಿ ಚಾಳುಕ್ಯರಾಜ ೨ನೇ ವಿಕ್ರಮಾದಿತ್ಯನ ತಮ್ಮನಾದ ಭೀಮ ಎಂಬುವವನ ವಂಶಜನಾದ ತೈಲಪನು ಕಳೆದು ಹೋದ ಚಾಳುಕ್ಯ ಮನೆತನವನ್ನು ಪುನಃ ವಶಪಡಿಸಿಕೊಂಡು ಸ್ಥಾಪಿಸಿದನೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಕನ್ನಡದ ಆದಿ ಕವಿ ಪಂಪನು ೧೦ನೇ ಶತಮಾನ ದಲ್ಲಿ ಚಾಳುಕ್ಯ ಸಾಮಂತರಸ ೨ನೇ ಅರಿಕೇಸರಿಯ ಆಸ್ಥಾನದಲ್ಲಿದ್ದು ಈತನು ಈ ಮನೆತನದ ವಂಶಾವಳಿಯನ್ನು ವಿವರಿಸುತ್ತ ೧ನೇ ಭೀಮ, ೩ನೇ ಕೀರ್ತಿವರ್ಮ, ೧ನೇ ತೈಲಪ, ೩ನೇ ವಿಕ್ರಮಾದಿತ್ಯ, ೨ನೇ ಭೀಮ, ಅಯ್ಯಣ್ಣ ೪ನೇ ವಿಕ್ರಮಾದಿತ್ಯ ಇವನ ಮಗನೇ ೨ನೇ ತೈಲ, ಈ ೨ನೇ ತೈಲಪನೇ ರಾಷ್ಟ್ರಕೂಟ ಅರಸ ಕರ್ಕನನ್ನು ಸೋಲಿಸಿ ಕಲ್ಯಾಣ ಚಾಳುಕ್ಯರ ರಾಜ್ಯ ಸ್ಥಾಪಿಸಿದನು. ಹೀಗೆ ಕ್ರಿ.ಶ. ೯೭೩ರಲ್ಲಿ ಅಧಿಕಾರ ಪಡೆದುಕೊಂಡು ಹಂತ ಹಂತವಾಗಿ ಆಡಳಿತವನ್ನು ಬಲಪಡಿಸಿದನು. ತನ್ನ ನೆರೆಹೊರೆಯ ಶತ್ರುಗಳನ್ನು ಸದೆಬಡಿದ. ಈತನ ಕಾಲದಲ್ಲಿ ಮಾನ್ಯಖೇಟವೇ ರಾಜಧಾನಿಯಾಗಿ ಮುಂದುವರೆಯಿತು. ಸತ್ಯಾಶ್ರಯನು ತೈಲಪನ ರಾಣಿ ರಾಷ್ಟ್ರಕೂಟ ರಾಜಕುಮಾರಿ ಜಾಕಬ್ಬೆಯ ಮಗ. ಈತನು ತೈಲಪನ ಮರಣದ ನಂತರ ಕ್ರಿ.ಶ. ೯೯೭ರಲ್ಲಿ ಪಟ್ಟಕ್ಕೆ ಬಂದನು. ಈತನ ನಂತರ ಸೋದರನ ಮಕ್ಕಳಾಗಿದ್ದ ಒಂದನೇ ವಿಕ್ರಮಾದಿತ್ಯ ಆಮೇಲೆ ಎರಡನೆಯ ಜಯಸಿಂಹ (ಜಗದೇಕಮಲ್ಲ) ಆಳಿದರು. ಜಗದೇಕಮಲ್ಲನು ‘‘ಪಟ್ಟಬಂಧೋತ್ಸವ ಮಾಡಿಸಿಕೊಂಡು ಪ್ರಪ್ರಥಮವಾಗಿ ರಾಜ್ಯ ದಲ್ಲಿ ಶ್ರೀಮನು

ಮಾಹಾಭೈರಂ ಮೈಲಾರ ದೇವರ ಪಾದಗಳಂ ದೇವರ ದೇವಾಲಯಕ್ಕೆ ಕಳಸಾರೋಹಣಂ ಮಾಡಿ ಆ ಬಗದಲ ಅಣಂದೂರ ಶ್ರೀ ನಾರಾಯಣೇಶ್ವರ ಅಂಗ ಭೋಗಕ್ಕಂ ರಂಗಭೋಗಕ್ಕಂ....'' ದಾನಗೈದ ವಿಷಯ ಆಣದೂರ ಶಾಸನದಲ್ಲಿ ದಾಖಲಿಸಲಾಗಿದೆ.

ಒಂದನೆಯ ಸೋಮೇಶ್ವರ

ಇಮ್ಮಡಿ ತೈಲಪನ ನಂತರ ಸತ್ಯಾಶ್ರಯ, ೫ನೇ ವಿಕ್ರಮಾದಿತ್ಯ ಮತ್ತು ೨ನೇ ಜೈಸಿಂಹ ಎಂಬುವವರು ಆಳ್ವಿಕೆ ನಡೆಸಿದ್ದರು. ೨ನೇ ಜೈಸಿಂಹನಿಗೆ ಸುಗ್ಗಲದೇವಿ, ದೇವಲದೇವಿ, ಲಕ್ಷ್ಮಿದೇವಿ ಎಂಬ ಮೂರು ಜನ ರಾಣಿಯರಿದ್ದರು. ಕ್ರಿ.ಶ. ೧೦೨೦ರಲ್ಲಿ ಮಸ್ಕಿಯುದ್ಧದಲ್ಲಿ ಚೋಳ ಅರಸ ರಾಜರಾಜ ಮತ್ತು ಚಾಳುಕ್ಯ ಅರಸ ಜೈಸಿಂಹನ ಮಧ್ಯದ ಕದನಗಳಿಂದಾಗಿ ಈ ಮನೆತನಕ್ಕೆ ತಾತ್ಕಾಲಿಕ ಮಂಕು ತಳೆದಂತಾಗಿತ್ತು. ಆದರೆ ೧೦೪೨ರಲ್ಲಿ ೨ನೇ ಜೈಸಿಂಹ ಉತ್ತರಾಧಿಕಾರಿಯಾಗಿ ಪಟ್ಟಕ್ಕೆ ಬಂದನು. ನಂತರ ಆತನ ಮಗ ಒಂದನೇ ಸೋಮೇಶ್ವರನು ಚಾಳುಕ್ಯ ಸಿಂಹಾಸನ ಏರಿದ. ಈತನ ಆಳ್ವಿಕೆಯ ಕಾಲವನ್ನು ಬೀದರ ಜಿಲ್ಲೆಯ ಅತ್ಯಂತ ಮಹತ್ವ ಕಾಲ ವೆಂದು ಹೇಳಬಹುದು. ಏಕೆಂದರೆ ೧ನೇ ಸೋಮೇಶ್ವರನು ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ಭವ್ಯವಾದ ಕೋಟೆಯನ್ನು ನಿರ್ಮಾಣ ಮಾಡಿದ್ದನು. ಮಹಾ ಪರಾಕ್ರಮಿಯಾಗಿದ್ದ ಸೋಮೇಶ್ವರನ ಕಾಲದಲ್ಲಿ ವಿವಿಧ ದಿಕ್ಕುಗಳಿಂದ ವಿರೋಧವನ್ನು ಎದುರಿಸಬೇಕಾಗಿತ್ತು. ಈತನು ಉತ್ತರದ ಮಾಳ್ವರ ಮೇಲೆ ದಾಳಿ ಮಾಡಿ ಮಾಳ್ವದ ಅರಸ ಪರಮಾರನನ್ನು ಸೋಲಿಸಿ ಧಾರಾನಗರವನ್ನು ವಶಪಡಿಸಿಕೊಂಡನು. ಅಲ್ಲದೆ ಕೊಂಕಣ ಪ್ರದೇಶದ ಮುಮ್ಮಣಿಯನ್ನು ಸೋಲಿಸಿ, ನಂತರ ಲಾಟ ಅರಸ ೧ನೇ ಭೀಮನನ್ನು ಪರಾಭವಗೊಳಿಸಿದನು. ಇದು ಅಲ್ಲದೆ ಗುರ್ಜರರಾಜ ವತ್ಸನನ್ನು ಆತನ ಉತ್ತರಾಧಿಕಾರಿಯಾದ ಲೋಚನದೇವನನ್ನು ಹತ್ತಿಕ್ಕಿದನು. ನಂತರ ಕೋಟೆ ರಾಜದ ಚಕ್ರಕೋಟೆಯನ್ನು ಕೂಡ ತನ್ನ ವಶಕ್ಕೆ ತೆಗೆದುಕೊಂಡನು. ಹೀಗೆ ಹತ್ತು ಹಲವಾರು ವಿಜಯಗಳನ್ನು ಸಾಧಿಸಿ ಕಲ್ಯಾಣದ ಕೀರ್ತಿಯನ್ನು ದಶದಿಕ್ಕುಗಳಲ್ಲಿ ಹರಡುವಂತೆ ಮಾಡಿದ್ದನು. ಇವನ ಕಾಲದಲ್ಲಿ ಚಾಳುಕ್ಯರ ಕಡುವೈರಿಗಳಾದ ಚೋಳರೊಡನೆ ಅನೇಕ ಯುದ್ಧಗಳನ್ನು ಮಾಡಿದ್ದನು. ಇವುಗಳಲ್ಲಿ ಮುಖ್ಯವಾದವುಗಳೆಂದರೆ, ವೆಂಗಿಯ ಸಿಂಹಾಸನಕ್ಕಾಗಿ ಅಂತಃಕಲಹದಲ್ಲಿ ನಿರತನಾಗಿದ್ದ ರಾಜರಾಜ ಚೋಳ ಮತ್ತು ಆತನ ಮಲ ಸಹೋದರ ವಿಜಯಾದಿತ್ಯನ ನಡುವೆ ನಡೆದ ಕದನದಲ್ಲಿ ಭಾಗಿಯಾಗಿ ವಿಜಯಾದಿತ್ಯನಿಗೆ ಗೆಲವು ತಂದು ಕೊಡುವಲ್ಲಿ ಯಶಸ್ವಿಯಾದನು. ತನ್ನ ಸಿಂಹಾಸನ ಉಳಿಸಿಕೊಳ್ಳಲು ಕಲ್ಯಾಣಕ್ಕೆ ಬಂದ

ವಿಜಯಾದಿತ್ಯನನ್ನು ಆದರಿಸಿ, ಆತನಿಗೆ ಸ್ನೇಹಹಸ್ತವನ್ನು ನೀಡಿ ಕಲ್ಯಾಣ ಅರಸರ ಮಹತ್ವವನ್ನು ಒಂದನೇ ಸೋಮೇಶ್ವರನು ತೋರಿಸಿಕೊಟ್ಟನು. ಆದರೆ ಅದೇ ಸೇಡಿನಿಂದವನು ೧೦೪೪ರಲ್ಲಿ ರಾಜೇಂದ್ರ ಚೋಳನ ಮರಣದ ನಂತರ ಆತನ ಮಗ ರಾಜಾಧಿರಾಜ ಚೋಳನು ಸಿಂಹಾಸನವನ್ನು ಅಲಂಕರಿಸಿದನು. ಹಿಂದೆ ತನ್ನ ತಂದೆ ಅನುಭವಿಸಿದ ಸೋಲಿನ ಕಹಿಯನ್ನು ಕಂಡ ರಾಜಾಧಿರಾಜನು ಧಾನ್ಯಕಟಕ ಎಂಬಲ್ಲಿ ಚಾಳುಕ್ಯರ ಮೇಲೆ ದಂಡೆತ್ತಿ ಬಂದನು. ಈ ಯುದ್ಧದಲ್ಲಿ ಸೋಮೇಶ್ವರನ ಮಗ ವಿಕ್ರಮಾದಿತ್ಯ ವೆಂಗಿಯ ವಿಜಯಾದಿತ್ಯರು ಸೋತರು. ಚೋಳ ಅರಸ ರಾಜಾಧಿ ರಾಜನು ತನ್ನ ವಿಜಯ ಉತ್ಸಾಹದಿಂದ ಕಲ್ಯಾಣನಗರ ಲೂಟಿ ಮಾಡಿದನೆಂಬ ಐತಿಹ್ಯವು ನಮಗೆ ಶಾಸನದಿಂದ ತಿಳಿದುಬರುತ್ತದೆ.

ತದನಂತರ ಕೊಪ್ಪಂ ಯುದ್ಧದಲ್ಲಿ ಪುನಃ ಚೋಳರೊಡನೆ ಸಂಘರ್ಷಕ್ಕೆ ಇಳಿದನು. ಆದರೆ ಯಶಸ್ಸು ಕಾಣದೆ ಕೂಡಲಸಂಗಮದ ಬಳಿ ಚಾಳುಕ್ಯ ಮತ್ತು ಚೋಳರ ನಡುವಿನ ಯುದ್ಧದಲ್ಲಿ ೧ನೇ ಸೋಮೇಶ್ವರನಿಗೆ ತೀವ್ರ ಆಘಾತ ಉಂಟಾಯಿತು. ಹೀಗಾಗಿ ತೀವ್ರಸ್ವರೂಪದ ಕಾಯಿಲೆಪೀಡಿತನಾದ ಸೋಮೇಶ್ವರನು ೧೦೬೮ರಲ್ಲಿ ತುಂಗಭದ್ರೆಯಲ್ಲಿ ಮುಳುಗಿ ಸಾವನ್ನಪ್ಪಿದನು. ಈತನ ಆಡಳಿತದ ಅವಧಿಯ ೨೫ ವರ್ಷಗಳಲ್ಲಿ ಅನೇಕ ರೀತಿಯ ಯುದ್ಧಗಳು ನಡೆದಿದ್ದು ಹಲವಾರು ಸೋಲುಗೆಲವುಗಳನ್ನು ಕಂಡು, ಪ್ರಜಾಹಿತ ರಕ್ಷಕನಾಗಿ, ರಾಜನೀತಿ ಚತುರನಾಗಿ ಮತ್ತು ದಕ್ಷ ಆಡಳಿತಗಾರನಾಗಿ ಬೀದರ ನಾಡಿನ ಚಾಳುಕ್ಯ ವಂಶದ ಅತ್ಯಂತ ಪ್ರಮುಖ ಅರಸರಲ್ಲಿ ಒಬ್ಬನಾಗಿದ್ದಾನೆ. ಈತನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಸೋಮೇಶ್ವರನು ಸಹ ಚೋಳರೊಡನೆ ತನ್ನ ತಂದೆಯ ಸೋಲನ್ನು ಮನಗಂಡು ಅನೇಕ ಯುದ್ಧಗಳನ್ನು ಸಹ ಮಾಡಿದನು. ಆದರೆ ೧ನೆಯ ಸೋಮೇಶ್ವರನ ಪರಾಕ್ರಮ ಈತನಲ್ಲಿರಲಿಲ್ಲ.

ಕ್ರಿ.ಶ. ೧೦೬೮-೧೦೭೬ರ ಅವಧಿಯಲ್ಲಿ ಇಮ್ಮಡಿ ಸೋಮೇಶ್ವರನು ಆಳ್ವಿಕೆ ನಡೆಸಿದ. ಸಹೋದರ ವಿಕ್ರಮಾದಿತ್ಯನು ಆತಂಕ ತಳೆದಿದ್ದ ಚೋಳರೊಂದಿಗೆ ಯುದ್ಧ ಮಾಡಬೇಕಾಯಿತು. ಪರಮಾರರೊಂದಿಗೆ ಸೆಣಸಾಡಬೇಕಾಗಿ ಬಂದಿತು. ಸ್ವತಃ ವಿಕ್ರಮಾದಿತ್ಯನು ದಂಗೆಯೆದ್ದ ಸಹೋದರ ಇಮ್ಮಡಿ ಸೋಮೇಶ್ವರನ ಸೈನ್ಯವನ್ನು ಸೋಲಿಸಿದ. ಆದರೆ ಕ್ಷಮಾದಾನ ಮಾಡಿದ. ಸುತ್ತಣ ಅರಸರನ್ನು ಹತೋಟಿಗೆ ತಂದ. ಇದೇ ಸಮಯದಲ್ಲಿ ಕಾಕತೀಯರು ಚಾಳುಕ್ಯರಿಂದ ಸಬ್ಬಿನಾಡನ್ನು ಪಡೆದರು.

ಆರನೆಯ ವಿಕ್ರಮಾದಿತ್ಯ

ಆರನೇ ವಿಕ್ರಮಾದಿತ್ಯನ ಆಳ್ವಿಕೆ (ಕ್ರಿ.ಶ. ೧೦೭೬-೧೧೨೬)ಯ ಕಾಲ ಸಕಲ

ರೀತಿಯಲ್ಲಿ ಅತ್ಯುತ್ತಮ. ಸಾಮ್ರಾಜ್ಯದೆಲ್ಲೆಡೆ ಶಾಂತಿ ನೆಲೆಸುವಂತೆ ಮಾಡಿದ. ಕಲ್ಯಾಣದ ಕೀರ್ತಿ ಎಲ್ಲೆಡೆಯಲ್ಲಿ ಹರಡುವಂತೆ ಆಯಿತು. ಕಾಶ್ಮೀರದಿಂದ ಬಂದ ಬಿಲ್ಹಣನು ಆರನೇ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದನು. ಆತನಿಂದ ''ವಿಕ್ರಮಾಂಕ ದೇವಚರಿತಂ'' ಎಂಬ ಸಂಸ್ಕೃತ ಗ್ರಂಥ ರಚಿತಗೊಂಡಿತ್ತು. ಸಾಂಸ್ಕೃತಿಕ ಕಲೆ, ಸಾಹಿತ್ಯ, ಧರ್ಮ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಗಣನೀಯ ಅಭಿವೃದ್ಧಿಯಾಯಿತು. ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಈತನ ಕಾಲದಲ್ಲಿ ಕೆರೆ ಮತ್ತು ವಿದ್ಯಾಕೇಂದ್ರಗಳ ಸ್ಥಾಪನೆಗಾಗಿ ವಿವಿಧೆಡೆಯಲ್ಲಿ ಧಾರಾಳವಾಗಿ ದಾನ-ದತ್ತಿಗಳನ್ನು ಕೊಡಮಾಡಿದನು. ಉದಾಹರಣೆಗೆ ಮಲಗಾಣ ಎಂಬುವಲ್ಲಿ ವಿಸ್ತಾರವಾದ ಭೂಮಿ ದತ್ತಿ ನೀಡಿದ್ದು ಶಾಸನಗಳಿಂದ ತಿಳಿದು ಬರುತ್ತದೆ.

''ಮಿತಾಕ್ಷರ''ವೆಂಬ ಈ ಹಿಂದೂ ನ್ಯಾಯಗ್ರಂಥದ ಕರ್ತೃ ವಿಜ್ಞಾನೇಶ್ವರರು ಆರನೇ ವಿಕ್ರಮಾದಿತ್ಯನ ಆಸ್ಥಾನ ಅಲಂಕರಿಸಿದ್ದರು. ಮಿತಾಕ್ಷರ ಸಂಹಿತೆ ಭಾರತದ ಮೊದಲ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಅಪೂರ್ವ ಕೃತಿಯಾಗಿದೆ. ವಿಜ್ಞಾನೇಶ್ವರರು ಹುಟ್ಟಿದ್ದು ಭಾಲ್ಕಿ ಸಮೀಪದ ಮಾಸಿಮಡುವಿನಲ್ಲಿ. ಮಾಸಿಮಡು ಅಂದು ಅಗ್ರಹಾರ ವಾಗಿದ್ದಿತ್ತು. ಇದು ಈ ನೆಲದವರಿಗೆ ಹೆಮ್ಮೆಯ ವಿಷಯವಾಗಿದೆ.

ಆರನೇ ವಿಕ್ರಮಾದಿತ್ಯನ ಸಾಮ್ರಾಜ್ಯ ಆಡಳಿತದ ದೃಷ್ಟಿಯಿಂದ ಸುವ್ಯವಸ್ಥಿತ ಗೊಳಿಸಲ್ಪಟ್ಟಿತ್ತು. ಬೀದರ್‌ನ ಭಾಗದಲ್ಲಿ ಅಟ್ಟಳೆ ನಾಡು ೩೦೦, ಪಕ್ಕದಲ್ಲಿ ಆಳಂದೆ ಸಾಸಿರ, ಕಾಳಗಿಯ ಸುತ್ತ ಮನ್ನೆದಡಿ ಸಾಸಿರ, ಹೀಗೆ ಆಡಳಿತ ವಿಭಾಗಗಳು ಇದ್ದವು. ಅಟ್ಟಳೆ ನಾಡಿನ ರಾಜಧಾನಿ ರಂಜೇರುವಿನಲ್ಲಿದ್ದ ಹಜ್ಜರಸ ಈತನ ಮಾಂಡಲೀಕ ನಾಗಿದ್ದು ರಾಜ್ಯ ಮತ್ತು ರಾಜನ ಬಗೆಗೆ ಶಾಸನಗಳನ್ನು ಬರೆಸಿದನು. ಹುಮನಾಬಾದ ಸಮೀಪದಲ್ಲಿರುವ ಜಲಸಂಗಿಯಲ್ಲಿ ಅರಳಿ ನಿಂತಿರುವ ಶಿಲಾ ದೇವಾಲಯ ಇದೇ ಕಾಲದ್ದು. ಇದು ಶಿಲ್ಪಕಲೆಯ ಅತ್ಯುತ್ತಮ ಮಾದರಿಯಾಗಿದೆ. ಶಿಲಾಬಾಲಕಿ ಯೋರ್ವಳು ಆರನೇ ವಿಕ್ರಮಾದಿತ್ಯನ ಆಹ್ವಾನಪತ್ರವನ್ನು ಬರೆಯುತ್ತಿರುವ ದೃಷ್ಟಿ ಕಣ್ಮನ ಸೆಳೆಯುತ್ತದೆ. ಈ ದೇವಾಲಯ ವಿಕ್ರಮಾದಿತ್ಯನ ಶಿಲ್ಪಕಲೆಗೆ ತೋರುವ ಗೌರವಸೂಚಕವೆಂದೇ ಹೇಳಬಹುದು. ಅಥವಾ ಆತನನ್ನು ಕಲಾರಾಧಕ, ಕಲಾ ಪೋಷಕ ಎಂತಲೂ ವರ್ಣಿಸಬಹುದು.

ಆರನೇ ವಿಕ್ರಮಾದಿತ್ಯನ ರಾಣಿಯರು, ಸೇನಾಪತಿಗಳು ಹಲವಾರು ಕಡೆಗಳಲ್ಲಿ ಮಂದಿರಗಳನ್ನು ನಿರ್ಮಿಸಿದರು ಮತ್ತು ಅನೇಕ ದಾನದತ್ತಿಗಳನ್ನು ನೀಡಿದ್ದಾರೆ.

ಆರನೆಯ ವಿಕ್ರಮಾದಿತ್ಯನ ಆಳ್ವಿಕೆ ಕಾಲದಲ್ಲಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಗಳ ಪ್ರಮುಖ ಭಾಗಗಳು ಒಂದಾಗಿದ್ದವು. ಇದು ಈ ಚಕ್ರವರ್ತಿಯ ಪರಾಕ್ರಮ ಹಾಗೂ ರಾಜನೀತಿ ಪರಿಣತಿಗೆ ನಿದರ್ಶನವಾಗಿದೆ. ಆರನೇ ವಿಕ್ರಮಾದಿತ್ಯನ ಐವತ್ತು

ವರ್ಷಗಳ ರಾಜ್ಯಭಾರದ ಕಾಲದಲ್ಲಿ ಆದ ಸಾಂಸ್ಕೃತಿಕ ಸಾಧನೆ ಅಪಾರ. ಅದಕ್ಕೆ ಕೇಂದ್ರಸ್ಥಾನ ಕಲ್ಯಾಣಪುರವಾಗಿತ್ತು. ದೇಶದ ಎಲ್ಲೆಡೆಯಲ್ಲಿ ಜನ ಕಲ್ಯಾಣದೆಡೆಗೆ ನೋಡುವಂತಾಯಿತು. ಜನಜೀವನ ಪರಿಪಕ್ವತೆ ತಳೆಯಿತು. ಶಾಂತಿ, ಸುಭಿಕ್ಷೆ ಎಲ್ಲೆಡೆ ನೆಲೆಸುವಂತಾಯಿತು.

ಕ್ರಿ.ಶ. ೧೧೨೭ರಲ್ಲಿ ಆರನೆಯ ವಿಕ್ರಮಾದಿತ್ಯನ ನಂತರ ಮೂರನೇ ಸೋಮೇಶ್ವರನು ಪಟ್ಟಕ್ಕೆ ಬಂದನು. ಈತನು ವಿದ್ವಾಂಸನೂ ಹೌದು. ''ಅಭಿಲಾಷಿತಾರ್ಥ ಚಿಂತಾಮಣಿ'' ಅಥವಾ ''ಮಾನಸೋಲ್ಲಾಸ'' ಎಂಬ ಸಂಸ್ಕೃತ ಕೃತಿಯನ್ನು ರಚಿಸಿದ. ಈತನ ಆಳ್ವಿಕೆಯ ಕಾಲದಲ್ಲಿ ವೆಂಗಿಯನ್ನು ಚೋಳರು ವಶಪಡಿಸಿಕೊಂಡರು. ಇವನ ನಂತರ ಅಧಿಕಾರ ವಹಿಸಿಕೊಂಡ ಎರಡನೆಯ ಜಗದೇಕಮಲ್ಲನು ೧೧೩೯ರಿಂದ ೧೧೪೯ರವರೆಗೆ ರಾಜ್ಯವಾಳಿದನು. ಈತನ ಆಳ್ವಿಕೆಯ ಕಾಲದಲ್ಲಿ ಚಾಳುಕ್ಯ ಸಾಮ್ರಾಜ್ಯವು ಪತನದ ಹಾದಿ ಹಿಡಿಯಿತು. ಅಲ್ಲಲ್ಲಿ ದಂಗೆಗಳು ನಡೆದವು. ಹೊಯ್ಸಳರು, ಕಾಕತೀಯರು, ತಮ್ಮ ಪ್ರಭಾವ ಹೆಚ್ಚಿಸಿಕೊಂಡರು. ಈ ನಡುವೆ ಚಾಳುಕ್ಯರ ಸಂಬಂಧಿಯಾಗಿದ್ದ ಕಳಚೂರಿ ವಂಶದ ಬಿಜ್ಜಳನು ಪ್ರಾಬಲ್ಯಕ್ಕೆ ಬರಲಾರಂಭಿಸಿದ.

ಎರಡನೆಯ ಜಗದೇಕ ಮಲ್ಲನ ನಂತರ ಆತನ ಕಿರಿಯ ಸಹೋದರ ಮುಮ್ಮಡಿ ತೈಲಪ(೧೧೪೯-೧೧೫೮)ನು ಅಧಿಕಾರಕ್ಕೆ ಬಂದನು. ಬಂಡೆದ್ದ ಕಾಕತೀಯ ಪ್ರೋಲನ ದಂಗೆ ಅಡಗಿಸಲು ಹೋದ ತೈಲಪ ಸೋಲನ್ನು ಅನುಭವಿಸಿದ. ಇದೇ ಸಮಯ ಸಾಧಿಸಿ ಕಳಚೂರಿ ಬಿಜ್ಜಳ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದ. ಹತಾಶೆಗೊಂಡ ತೈಲನು ೧೧೫೮ರಲ್ಲಿ ಅಧಿಕಾರವನ್ನು ತನ್ನ ಮಗ ನಾಲ್ಕನೆಯ ಸೋಮೇಶ್ವರನಿಗೆ ವಹಿಸಿಕೊಟ್ಟ. ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಉತ್ತುಂಗಸ್ಥಿತಿಯಲ್ಲಿದ್ದ ಕಲ್ಯಾಣ ನಾಡಿನ ಚರಿತ್ರೆಯ ೪ನೇ ಸೋಮೇಶ್ವರನ ಕಾಲಕ್ಕೆ ತನ್ನೆಲ್ಲ ಅಸ್ತಿತ್ವವನ್ನು ಕಳೆದುಕೊಂಡಿತು. ಮುಮ್ಮಡಿ ತೈಲಪನ ನಂತರ ಅಧಿಕಾರಕ್ಕೆ ಬಂದ ೪ನೇ ಸೋಮೇಶ್ವರ ತನ್ನ ಸಿಂಹಾಸನವನ್ನು ಉಳಿಸಿಕೊಳ್ಳಲು ಸತತ ಪ್ರಯತ್ನ ಮಾಡಿದರೂ, ವಿವಿಧ ದಿಕ್ಕುಗಳಿಂದ ಬರುತ್ತಿರುವ ಒತ್ತಡಕ್ಕೆ ಮಣಿಯಲೇಬೇಕಾಯಿತು. ಈ ವೇಳೆಗಾಗಲೇ ಕಳಚೂರಿ ವಂಶವು ತನ್ನ ಏಳಿಗೆಯತ್ತ ಸಾಗುತ್ತಿದ್ದು, ಚಾಳುಕ್ಯ ಅರಸನನ್ನು ಸಿಂಹಾಸನದಿಂದ ಕೆಳಗಿಳಿಸಲು ಪ್ರಯತ್ನಿಸುತ್ತಿತ್ತು. ಏತನ್ಮಧ್ಯೆ ಇಪ್ಪತ್ತು ವರ್ಷಗಳ ಕಾಲ ಚಾಳುಕ್ಯ ಸಾಮಂತನಾಗಿದ್ದ ನಿಡುಗಲ್ಲ ಚೋಳನ ಆಶ್ರಯದಲ್ಲಿದ್ದು ತನ್ನ ರಾಜಧಾನಿಯಲ್ಲಿ ಅವ್ಯವಸ್ಥೆಯನ್ನು ದೂರದಿಂದಲೇ ವೀಕ್ಷಿಸಬೇಕಾಯಿತು. ತನ್ನ ಅಶಕ್ತತೆಯಿಂದಾಗಿ ರಾಜಧಾನಿಯ ದಕ್ಷಿಣದ ಕೆಲವು ಭಾಗಗಳಿಗೆ ಮಾತ್ರ ಆತನ ರಾಜ್ಯ ಸೀಮಿತಗೊಳಿಸಬೇಕಾಗಿತ್ತು. ಉತ್ತರದಲ್ಲಿ ಸೇವುಣರು ದಕ್ಷಿಣದಲ್ಲಿ ಹೊಯ್ಸಳರು ತಮ್ಮ ಮೇರೆ

ವಿಸ್ತಾರದಲ್ಲಿ ತೊಡಗಿದ್ದರಿಂದ ಚಾಳುಕ್ಯ ಮನೆತನ ಕ್ಷೀಣಿಸುತ್ತಾ ಬಂದಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಲಾಗದೆ ಕ್ರಿ.ಶ. ೧೧೯೮ರಲ್ಲಿ ಇಮ್ಮಡಿ ಬಲ್ಲಾಳನಿಂದ ಸೋತು ಶರಣಾಗಿ ಸಂಪೂರ್ಣ ಕಲ್ಯಾಣರಾಜ್ಯ ಕಳಚೂರಿಗಳ ವಶವಾಯಿತು. ಹೀಗೆ ಹಲವು ವರ್ಷಗಳಿಂದ ಕಲ್ಯಾಣನಾಡಿನ ಕೀರ್ತಿ ದಶದಿಕ್ಕುಗಳಿಗೆ ಹರಡಿಸಿ ಬೀದರ ಜಿಲ್ಲೆಯಲ್ಲಿಯೇ ಪ್ರಮುಖ ರಾಜಮನೆತನ ಎನಿಸಿಕೊಂಡ ಕಲ್ಯಾಣದ ಚಾಲುಕ್ಯ ಮನೆತನ ಅಸ್ತಂಗತವಾಯಿತು.

೧೩. ಕಳಚೂರಿಗಳು

ಬೀದರ ಪ್ರಾಂತದ ಬಸವಕಲ್ಯಾಣದ ಇತಿಹಾಸ ಕಳಚೂರಿವಂಶದವರಿಂದ ಬಹು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಏಕೆಂದರೆ ೧೨ನೇ ಶತಮಾನದಲ್ಲಿ ಉಂಟಾದ ಬಸವೇಶ್ವರರ ಸಾಮಾಜಿಕ ಕ್ರಾಂತಿ ಇಡೀ ಕರ್ನಾಟಕದ ಇತಿಹಾಸ ದಲ್ಲಿಯೇ ಅತಿ ಮಹತ್ವದ ಘಟ್ಟವೆಂದು ಪರಿಗಣಿಸಬಹುದು. ಕಲ್ಯಾಣದ ಚಾಳುಕ್ಯರ ಪ್ರಾಬಲ್ಯ ಕಡಿಮೆಯಾದಂತೆ ಕಳಚೂರಿಗಳ ಏಳಿಗೆ ಆರಂಭವಾಯಿತು. ಚಾಳುಕ್ಯ ರೊಂದಿಗೆ ಸಂಬಂಧಿಕನಾದ ಕಳಚೂರಿ ದೊರೆ ಬಿಜ್ಜಳನು ಚಾಳುಕ್ಯರನ್ನು ಮೂಲೆ ಗುಂಪು ಮಾಡುವಲ್ಲಿ ಯಶಸ್ವಿಯಾದನು.

ಕಳಚೂರಿಗಳು ಅಥವಾ ಕಟ್ಟಚೂರಿಗಳೆಂದು ಕರೆದುಕೊಳ್ಳುವ ಈ ಮನೆತನದ ಮೂಲದ ಬಗ್ಗೆ ಹಲವಾರು ಕಟ್ಟುಕತೆಗಳಿವೆ. ಮೂಲತಃ ಉತ್ತರದ ಬುಂದೇಲ ಖಂಡದ ಕಲಿಂಜರ ಪ್ರದೇಶ ಆಳುತ್ತಿದ್ದ ಕಳಚೂರಿಗಳು ತಮ್ಮನ್ನು ಕಲಂಜಪುರ ವರಾಧೀಶ್ವರರು ಎಂದು ಕರೆದುಕೊಂಡಿದ್ದಾರೆ. ಶಾಸನಗಳಲ್ಲಿ ಇವರನ್ನು ಕಲಚೂರ್ಯ, ಕಲಸೂತ್ರಿ, ಕಲಟ್ಟೂರಿ ಎಂದು ಮುಂತಾಗಿ ಉಲ್ಲೇಖಿಸಲಾಗಿದೆ.

ಕ್ರಿ.ಶ. ೧೧೭೪ರ ಶಾಸನದ ಪ್ರಕಾರ ಅಶ್ವತ್ಥಾಮನ ಶಿಷ್ಯ ಸೋಮ ಎಂಬು ವವರು ಈ ಮನೆತನದ ಮೂಲಪುರುಷ. ಗುರುಗಳ ಆಜ್ಞೆಯಂತೆ ತನ್ನನ್ನು ಪರಶು ರಾಮನ ಕೋಪದಿಂದ ರಕ್ಷಿಸಿಕೊಳ್ಳಲು ಗಡ್ಡ ಮತ್ತು ಮೀಸೆಯನ್ನು ಬೆಳೆಸಿಕೊಂಡನು. ಅದಕ್ಕಾಗಿ ಈ ಮನೆತನಕ್ಕೆ ಕಲಚೂರಿ ಎಂಬ ಹೆಸರು ಬಂದಿತೆಂದು ಹೇಳಲಾಗಿದೆ. ಕಲ ಎಂದರೆ ಮೀಸೆ, ಚೂರಿ ಎಂದರೆ ಚಾಕು ಎಂದರ್ಥ. ಆದರೆ ಬಹಳಷ್ಟು ಶಾಸನಗಳು ಇವರು ಶಿವನ ವಂಶಸ್ಥರು, ಶಿವನಿಂದ ಇವರ ಮನೆತನ ಆರಂಭವಾಯಿತೆಂದು ಉಲ್ಲೇಖಿಸುತ್ತವೆ. ಅದಕ್ಕಾಗಿ ಇವರು ಶಿವನ ಅನುಯಾಯಿಗಳೆಂದೂ ನಂಬಲಾಗಿದೆ.

ಇವರ ಮೂಲಸ್ಥಾನದ ಬಗ್ಗೆ ೧೦ನೇ ಶತಮಾನದ ಶಾಸನದ ಪ್ರಕಾರ ಕಳಚೂರಿ ವಂಶಸ್ಥರು ಮಧ್ಯಪ್ರದೇಶದಲ್ಲಿ ವಾಸಿಸುತ್ತಿದ್ದು ಕಾಲಕ್ರಮೇಣದಲ್ಲಿ ಕರ್ನಾಟಕಕ್ಕೆ ವಲಸೆ ಬಂದು ಇಲ್ಲಿ ತಮ್ಮ ಒಂದು ಶಾಖೆಯ ಏಳ್ಗೆಯನ್ನು ಸಾಧಿಸಿದರು ಎನ್ನುವ ಬಗ್ಗೆ ಉಲ್ಲೇಖವಿದೆ. ಅಲ್ಲದೆ ಇವರು ಹೈಹಯ ಕುಲದವರು, ನರ್ಮದಾ ನದಿತೀರದ ಮಹಿಷತಿ ಇವರ ಮೂಲನಿವಾಸವಾಗಿತ್ತೆಂಬುವುದು ಇತಿಹಾಸಕಾರರ ಅಭಿಮತವಾಗಿದೆ.

ಚಾಳುಕ್ಯ ಅರಸ ಮಂಗಲೇಶನ ಶಾಸನದ ಪ್ರಕಾರ ಕಳಚೂರಿಗಳು ಮಾಳವ, ಗುಜರಾತ ಮತ್ತು ಮಹಾರಾಷ್ಟ್ರದ ಉತ್ತರ ಭಾಗದಲ್ಲಿ ತಮ್ಮ ಪ್ರಭುತ್ವ ಹೊಂದಿದ್ದ ರೆಂದು ತಿಳಿದುಬರುತ್ತದೆ. ಅಲ್ಲದೆ ಪುಲಿಕೇಶಿಯ ಐಹೊಳೆ ಶಾಸನದಲ್ಲಿ ಉಲ್ಲೇಖಿಸಿರು ವಂತೆ ಆತನು ಕಟಚೂರಿ ವಂಶದ ಬುದ್ಧರಾಜನನ್ನು ಸೋಲಿಸಿದ್ದು ಮತ್ತು ಚಾಳುಕ್ಯ ಅರಸ ವಿನಯಾದಿತ್ಯ ಕಲಚೂರಿ ರಾಜಕುಮಾರಿ ಲೋಕಮಹಾದೇವಿಯನ್ನು ವಿವಾಹ ವಾದ ಉಲ್ಲೇಖದ ಆಧಾರಗಳ ಮೇಲೆ ಕಳಚೂರಿಗಳು ಉತ್ತರ ಭಾರತದಿಂದ ಬಂದು ಚಾಳುಕ್ಯರ ರಕ್ತಸಂಬಂಧ ಬೆಳೆಸಿದ್ದಲ್ಲದೆ ಅವರ ಸಾಮಂತರಾಗಿ ಆಳ್ವಿಕೆ ನಡೆಸಿ ಮುಂದೆ ಸ್ವಾತಂತ್ರ್ಯವನ್ನು ಘೋಷಿಸಿಕೊಂಡರೆಂಬುವುದರಲ್ಲಿ ಸಂಶಯವಿಲ್ಲ.

ಕಲಚೂರಿಗಳ ರಾಜಕೀಯ ಇತಿಹಾಸವನ್ನು ಅವಲೋಕಿಸಿದಾಗ ಕಲ್ಯಾಣದ ಚಾಳುಕ್ಯರ ಸಾಮಂತ ದೊರೆಯಾಗಿದ್ದ ಜೋಗಮನು ಈ ರಾಜಮನೆತನದ ಮೂಲ ಪುರುಷ ಎಂದು ಮತ್ತು ಇತರರ ಅಭಿಪ್ರಾಯದಂತೆ ಉಚಿತ ಎಂಬುವವನು ಇದಕ್ಕೂ ಮುಂಚೆ ತಲಕಾಡಿನ ಮಂಗಳವೇಡದಲ್ಲಿ ಸಾಮಂತರಾಗಿದ್ದರು ಎಂದೂ ತಿಳಿಸಿದ್ದಾರೆ. ದೊರೆ ಜೋಗಮನವರೆಗಿನ ಮತ್ತು ಆತನ ಹಿಂದಿನ ಸಾಮಂತರ ಬಗ್ಗೆ ನಿಖರ ಮಾಹಿತಿಯ ಕೊರತೆ ಇರುವದರಿಂದ ಜೋಗಮನು ಚಾಳುಕ್ಯರ ಸಾಮಂತನಾಗಿದ್ದು ತನ್ನ ಮಗಳಾದ ಸಾವಳದೇವಿಗೆ ೬ನೇ ವಿಕ್ರಮಾದಿತ್ಯನೊಂದಿಗೆ ಮದುವೆ ಮಾಡಿ ಕೊಟ್ಟನೆಂಬುದು ಜೊತೆಗೆ ಆತನ ಸಾಮಂತನಾಗಿದ್ದನೆಂಬುದು ಸತ್ಯ. ಈತನ ಮಗ ಪೇರ್ಮಾಡಿಗೆ ಚಾಳುಕ್ಯವಿಕ್ರಮಾದಿತ್ಯನು ತನ್ನ ೨ನೆಯ ರಾಣಿ ಚಂದ್ರಲಾ ದೇವಿಯ ಮಗಳಾದ ನಾಗಲಾದೇವಿಯನ್ನು ಕೊಟ್ಟು ವಿವಾಹಸಂಬಂಧವನ್ನು ಏರ್ಪಡಿಸಿದ ನೆಂಬ ಉಲ್ಲೇಖವಿದೆ.

ಈ ಪೇರ್ಮಾಡಿಯ ಮಗನೇ ಕಲಚೂರಿ ವಂಶದ ಪ್ರಮುಖ ಅರಸ ಬಿಜ್ಜಳ.

ಬಿಜ್ಜಳನು ಕಳಚೂರಿ ವಂಶದಲ್ಲಿ ಅತಿ ಪ್ರಬಲ ಮತ್ತು ಉತ್ತಮ ಅರಸನೆಂದು ಖ್ಯಾತಿ ಪಡೆದುಕೊಂಡಿದ್ದಾನೆ. ಈತನ ತಂದೆಯ ಕಾಲದಲ್ಲಿ ಚಾಳುಕ್ಯ ಅರಸ ೩ನೇ ಸೋಮೇಶ್ವರನ ಅಶಕ್ತತೆಯನ್ನು ಮನಗಂಡು ಕಲಚೂರಿ ಪೇರ್ಮಾಡಿ ಚಾಳುಕ್ಯರನ್ನು ಸದೆಬಡೆದು ಕಲಚೂರಿ ಪ್ರಾಬಲ್ಯವನ್ನು ಹೆಚ್ಚಿಸುವಲ್ಲಿ ಪ್ರಯತ್ನಿಸಿದನಾದರೂ ಆತನ ಕಾರ್ಯ ಕೈಗೂಡಲಿಲ್ಲ. ಅದನ್ನೇ ಮುಂದುವರೆಸಿದ ಬಿಜ್ಜಳ, ಚಾಳುಕ್ಯ ಸೋಮೇಶ್ವರ ನನ್ನು ಸದೆಬಡೆದು ಸ್ವತಂತ್ರ ಅರಸನೆಂದು ಘೋಷಿಸಿಕೊಂಡನು. ಚಾಳುಕ್ಯ ತೈಲಪನ ಮಹಾಮಾಂಡಲೇಶ್ವರನಾಗಿ ಕಾರ್ಯನಿರ್ವಹಿಸುತ್ತಿದ್ದ ಬಿಜ್ಜಳ ಕಾಲಕ್ರಮೇಣದಲ್ಲಿ ತನ್ನ ರಾಜಕೀಯ ಚಾಣಾಕ್ಷತನದಿಂದ ರಾಜ್ಯದ ಸಂಪೂರ್ಣ ಅಧಿಕಾರವನ್ನು ತನ್ನ ಹತೋಟಿಗೆ ತೆಗೆದುಕೊಂಡು ತನಗೆ ಆಪ್ತರಾದವರನ್ನು ಸಾಮಂತ ಮತ್ತು ಮಂಡಲೇಶ್ವರರನ್ನಾಗಿ ನೇಮಿಸಿಕೊಂಡನು. ಹೀಗಾಗಿ ತನ್ನ ಆಪ್ತರ ಸಹಾಯದಿಂದ ಕಲ್ಯಾಣದ ಆಡಳಿತ ಸಂಪೂರ್ಣವಾಗಿ ಬಿಜ್ಜಳನ ವಶವಾಯಿತು.

ತೈಲಪನು ಉತ್ತರದ ಕಾಕತೀಯರ ಮೇಲೆ ದಂಡೆತ್ತಿ ಹೋದಾಗ ಆತನಿಗೆ ಸಹಾಯ ಮಾಡುವ ಬದಲಾಗಿ ತನ್ನ ಆಪ್ತಸಾಮಂತರೊಂದಿಗೆ ಕಲ್ಯಾಣದ ಕೋಟೆ ಯನ್ನು ಬಿಜ್ಜಳ ಪ್ರವೇಶಿಸಿದನು. ತದನಂತರದಲ್ಲಿ ಹಾನಗಲ್ಲಿನ ಕದಂಬರನ್ನು ಮತ್ತು ಚಾಳುಕ್ಯ ಸಾಮಂತ ಗಂಡಾರಾದ್ಯರನ್ನು ಸೋಲಿಸಿ ಆತನನ್ನು ತನ್ನ ಅಧೀನತೆಯನ್ನು ಒಪ್ಪಿಕೊಳ್ಳುವಂತೆ ಮಾಡಿದನು.

ಕಳಚೂರಿ ರಾಜಮನೆತನದ ಬಗ್ಗೆ ವಿವರಿಸುವಾಗ, ಬಿಜ್ಜಳನ ಸಾಮರ್ಥ್ಯ ಹಾಗೂ ವ್ಯಕ್ತಿತ್ವದ ಜೊತೆಗೆ ಅವನ ಮಂತ್ರಿಯಾಗಿದ್ದ ಬಸವಣ್ಣನ ಹೆಸರು ಪ್ರಸ್ತಾಪಿಸಲೇಬೇಕು. ಇಲ್ಲದಿದ್ದರೆ ಚಾರಿತ್ರಿಕ ಸನ್ನಿವೇಶದ ವಿವರಣೆ ಅಪೂರ್ಣ ವಾಗುತ್ತದೆ.

ಬಿಜ್ಜಳನ ಆಸ್ಥಾನದಲ್ಲಿ ಕರಣಿಕ ಸ್ಥಾನದಿಂದ ಮಹಾಮಂತ್ರಿ ಸ್ಥಾನಕ್ಕೇರಿದ ಬಸವಣ್ಣ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನುಂಟು ಮಾಡಿ ಚರಿತ್ರೆಯ ಪುನರ್‌ನಿರ್ಮಿತಿಗೆ ಕಾರಣವಾಗಿದ್ದು ಐತಿಹಾಸಿಕವಾಗಿ ಮಹತ್ವದ್ದಾಗಿದೆ.

ಜಡವಾದ ಸ್ಥಾಪಿತಸಾಂಪ್ರದಾಯಗಳ ಸಂಕೋಲೆಗಳನ್ನು ಮುರಿದ ಬಸವಣ್ಣ ಸತ್ಯಶುದ್ಧವಾದ, ಸ್ವಾತಂತ್ರ್ಯ ಸಮಾನತೆ ಹಾಗೂ ಭ್ರಾತೃತ್ವದ ನೆಲೆಯಲ್ಲಿ ಜಾತಿ, ಲಿಂಗ, ವರ್ಣ, ವರ್ಗರಹಿತವಾದ ಪರ್ಯಾಯ ಸಮಾಜವನ್ನು ಕಟ್ಟಿದನು.

ಭೂಮಿ ಆಳಲು ಹುಟ್ಟಿ(ಜಾತಿ)ಗಿಂತ ಯೋಗ್ಯತೆ (ಅರ್ಹತೆ) ಮುಖ್ಯವೆಂಬ ನಿಲುವನ್ನು ತಳೆದ ಬಸವಣ್ಣನ ಮಾತುಗಳು ಬಿಜ್ಜಳನು ಚಕ್ರವರ್ತಿಯಾಗಲು ನೆರ ವಾದವು. ಇದರಿಂದ ಅರಸನೊಂದಿಗೆ ಬಸವಣ್ಣನಿಗೆ ಅನನ್ಯ ಸಂಬಂಧವೇರ್ಪಡು ವುದರೊಂದಿಗೆ, ಬಸವಣ್ಣನ ಸಮಾಜ ಸುಧಾರಣೆಗೆ ಪರೋಕ್ಷವಾಗಿ ಪ್ರಭುತ್ವದ ಸಹಕಾರವೂ ಲಭಿಸಿತು.

ಬಸವಣ್ಣನ ಕಾಯಕ ಮತ್ತು ದಾಸೋಹ ಸಿದ್ಧಾಂತಗಳಿಂದ ಬಿಜ್ಜಳನ ಸಾಮ್ರಾಜ್ಯ ದಲ್ಲಿ ಆರ್ಥಿಕ ಸುಧಾರಣೆ ಬಂದು, ಜನತೆ ಸಮೃದ್ಧವಾದ ಬದುಕನ್ನು ಬದುಕಲು ಸಾಧ್ಯವಾಯಿತು. ಅಂತೆಯೇ ''ಕೊಡುವವರುಂಟು ಬೇಡುವವರಿಲ್ಲ'' ಎಂಬ ಬಸವಣ್ಣನ ಮಾತಿನಿಂದ ಆ ಕಾಲದ ಜನತೆಯ ಆರ್ಥಿಕ ಸಮೃದ್ಧಿಯನ್ನು ಅರಿಯ ಬಹುದು.

ಬಸವಣ್ಣ ನಡೆಸಿದ ಸಮಾಜ ಸುಧಾರಣೆಯೊಂದಿಗೆ, ಧಾರ್ಮಿಕ ಸುಧಾರಣೆ ಯಲ್ಲೂ ಸಹ ಆಧ್ಯಾತ್ಮಿಕ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದರು. ಕೇವಲ ಮೇಲ್ವರ್ಗದವರ ಸ್ವತ್ತಾಗಿದ್ದ ಸ್ಥಗಿತವಾದ ಧರ್ಮವನ್ನು ನಿರಾಕರಿಸಿದ ಬಸವಣ್ಣ ಜನಸಾಮಾನ್ಯರಿಗೂ ಅದನ್ನು ದಕ್ಕುವಂತೆ ಮಾಡಿದನು. ದೇವರು-ಭಕ್ತರ ನಡುವೆ ಇದ್ದ ಪೂಜಾರಿಯನ್ನು ನಿರಾಕರಿಸಿದನು. ಯಾವ ದೇವಾಲಯಗಳಿಗೆ ಜನಸಾಮಾನ್ಯ

ರಿಗೆ ಅಸ್ಪೃಶ್ಯರಿಗೆ ಪ್ರವೇಶ ನಿರಾಕರಿಸಲಾಗಿತ್ತೋ ಅಂಥ ದೇವಾಲಯಗಳ ಹಂಗು ಹರಿದು, ''ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ'' ಎಂದು ಸಾರಿ, ಜನಸಾಮಾನ್ಯರ ಕೈಗೆ ದೇವರನ್ನು ತಂದುಕೊಟ್ಟು ಸಮಾನತೆ ಮೆರೆದ.

ಇಂತಹ ಬದಲಾವಣೆ ಪ್ರಭಾವದಿಂದಾಗಿ ರಾಷ್ಟ್ರದ-ರಾಷ್ಟ್ರದಾಚೆಗಿನ ಜನ ಕಲ್ಯಾಣಕ್ಕೆ ಬರಲಾರಂಭಿಸಿದರು. ಇದರಿಂದ ಕಲ್ಯಾಣ ಸಾಂಸ್ಕೃತಿಕವಾಗಿ ಕೂಡ ಮಹತ್ವದ ಕೇಂದ್ರವಾಗಿ ಬಿಜ್ಜಳನ ಆಳ್ವಿಕೆಗೆ ಕಳಸವೇರಿಸಿದಂತಾಯಿತು.

ಭಾಷಿಕವಾಗಿ, ಮೇಲ್ವರ್ಗದವರ ಭಾಷೆಯಾದ ಸಂಸ್ಕೃತವು ದೇವರ ಭಾಷೆ ಎಂದು ಗುರುತಿಸಲ್ಪಟ್ಟಿತ್ತು. ಆದರೆ ಜನಭಾಷೆಯಾದ ದೇಶಿ ಕನ್ನಡವು ಆಡಳಿತ ಭಾಷೆಯಾಗಿ ಕಾವ್ಯಕ್ಕೆ ವಾಹಕವಾಗಿ ಕೂಡ ಬೆಳೆಸಿದ್ದು ಈ ಕಾಲದಲ್ಲೇ.

ಇಂಥ ಸಮಾಜೋಧಾರ್ಮಿಕ ಹಾಗೂ ಸಾಂಸ್ಕೃತಿಕ ಸುಧಾರಣೆಯ ಬದಲಾವಣೆಗಳು ಮೇಲ್ವರ್ಗದವರ ನಂಬಿಕೆಗಳನ್ನೇ ಅಲ್ಲಾಡಿಸಿದವು. ಬಸವಣ್ಣನ ಈ ಸುಧಾರಣೆಗಳು ಮೇಲ್ವರ್ಗದವರಿಗೆ ಸಹಿಸದಾಯಿತು. ಹಾಗಾಗಿ ಬಸವಣ್ಣನ ವಿರುದ್ಧ ಅನೇಕ ಅಪವಾದಗಳು ಬರಲಾರಂಭಿಸಿದವು. ಇದಾವುದಕ್ಕೂ ಬಸವಣ್ಣ ಜಗ್ಗಲಿಲ್ಲ, ಮಿಥ್ಯಾರೋಪಗಳನ್ನು ಬಸವಣ್ಣ ಸಾಬೀತು ಪಡಿಸಿದ್ದು ಕೂಡ ಆರೋಪಿಗಳಿಗೆ ಅವಮಾನವಾಯಿತು.

ಇಂಥ ಸಂದರ್ಭದಲ್ಲಿ ''ನ್ಯಾಯ, ನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ, ಲೋಕ ವಿರೋಧಿ ಶರಣನಾರಿಗೂ ಅಂಜುವವನಲ್ಲ''ವೆಂದು ಬಸವಣ್ಣ ಮುಂದುವರೆಯುತ್ತಿದ್ದರೆ ಮೇಲ್ವರ್ಗದ ಪಿತೂರಿಕಾರರು ಮತ್ತು ಮಂತ್ರಿಮಂಡಳದ ಅತೃಪ್ತ ಜನರು ಸೇರಿಕೊಂಡು ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಂಡರು. ಬಿಜ್ಜಳನ ಮೇಲೆ ಎಲ್ಲಿಲ್ಲದ ಒತ್ತಡ ತಂದರು. ಬಿಜ್ಜಳ ಇಕ್ಕಟ್ಟಿನಲ್ಲಿ ಸಿಲುಕುವುದರೊಂದಿಗೆ ಒಲ್ಲದ ಮನಸಿನಿಂದಲೇ ಬಸವಣ್ಣನನ್ನು ಸಮಜಾಯಿಷಿ ಕೇಳಲು ಬಂದಾಗ ''ಅರಸು ಮುನಿದರೆ ಊರೊಳಗಿರಬಾರದು'' ಎಂದು ಬಸವಣ್ಣ ಕೂಡಲ (ಕಪ್ಪಡಿ) ಸಂಗಮಕ್ಕೆ ತೆರಳಿದ. ತಾನು ನಂಬಿದ ತತ್ವದೊಂದಿಗೆ ಬದುಕಬೇಕೆನ್ನುವ ಬಸವಣ್ಣ ರಾಜಕೀಯವಾಗಿ ಅರಸೊತ್ತಿಗೆಯನ್ನು ತ್ಯಜಿಸಿದ.

ಹೀಗೆ ಬಿಜ್ಜಳನ ಕಾಲ ಕೇವಲ ರಾಜಕೀಯವಾಗಿ ಮಾತ್ರ ಪ್ರಾಬಲ್ಯತೆ ಪಡೆಯದೇ ಸಮಾಜೋಧಾರ್ಮಿಕ, ಸಾಂಸ್ಕೃತಿಕವಾಗಿ ಕೂಡ ಮಹತ್ವದ ಕಾಲವಾಗಿದೆ. ಇದು ಕೇವಲ ಕರ್ನಾಟಕದ ಇತಿಹಾಸದಲ್ಲೇ ಅಲ್ಲ, ಮನುಕುಲದ ಚರಿತ್ರೆಯಲ್ಲೇ ಬುದ್ಧ, ಮಹಾವೀರರ ನಂತರದ ಮಹತ್ವದ ಕಾಲವಾಗಿದೆ. ಬಿಜ್ಜಳನಿಗೆ ನಾಲ್ಕು ಜನ ಗಂಡುಮಕ್ಕಳು. ಬಿಜ್ಜಳ ಬದುಕಿರುವಾಗಲೇ ಮಗ ಸೋಮೇಶ್ವರ ಅಥವಾ ಸೋಯಿದೇವನಿಗೆ ಪಟ್ಟಕಟ್ಟಿದ. ಸೋಮಶ್ವೇರನಿಗೆ ರಾಯಮುರಾರಿ ಎಂಬ ಬಿರುದು

ಇದ್ದಿತು. ಈತನು ತನ್ನ ರಾಜ್ಯವಿಸ್ತಾರಕ್ಕಾಗಿ ಅನೇಕ ಯುದ್ಧಗಳನ್ನು ಕೈಗೊಂಡು ಚೋಳರನ್ನು, ಗೂರ್ಜರರನ್ನು, ಲಾಟರನ್ನು ಗೆದ್ದ ಎಂದು ತಿಳಿದುಬರುತ್ತದೆ. ಇವುಗಳಲ್ಲದೆ ಕಾಸಾ, ಕಳಿಂಗ, ಕಮ್ಮಿರ, ತರುಷ್ಕ, ಚೇರ ಮತ್ತು ಸೌರಾಷ್ಟ್ರಗಳನ್ನು ಗೆದ್ದಿದ್ದ. ಸೋಮೇಶ್ವರನು ಕ್ರಿ.ಶ.೧೧೭೭ರಲ್ಲಿ ನಿಧನನಾದ. ನಂತರ ಸಿಂಹಾಸನ ಏರಿದ ಇವನ ತಮ್ಮ ಸಂಕಮ ಕೇವಲ ಮೂರು ವರ್ಷ ರಾಜ್ಯವಾಳಿದ. ನಂತರದ ದೊರೆ ಆಹವಮಲ್ಲ, ಎರಡನೆಯ ಹೊಯ್ಸಳ ಬಲ್ಲಾಳನನ್ನು ಎರಡನೆಯ ಶಿಲಹಾರ ಅಪರಾದಿತ್ಯನನ್ನು ಮತ್ತು ಪರಮಾರ ವಿಂಧ್ಯವರ್ಮನನ್ನು ಸೋಲಿಸಿದ ನಾಲ್ಕನೆಯ ಸೋಮೇಶ್ವರನ ದಖ್ಖನ ದಿಗ್ವಿಜಯವನ್ನು ಇವರು ತಡೆದು ಸೋಮೇಶ್ವರನ ಕಲ್ಯಾಣ ಸೇರಿದಂತೆ ದಕ್ಷಿಣದ ಬಹುಪಾಲನ್ನು ವಶಪಡಿಸಿಕೊಂಡ. ಬನವಾಸಿಯ ಆಡಳಿತಾಧಿಕಾರಿ ಇವನ ಸಹಾಯಕನಾಗಿದ್ದ. ಆಹವಮಲ್ಲನ ಸೋಲಿನ ನಂತರ ಸುಮಾರು ಎರಡು ವರ್ಷಗಳವರೆಗೆ ಅವನ ಆಳ್ವಿಕೆ ಬೆಳ್ವಲ ಮತ್ತು ಬನವಾಸಿ ಪ್ರದೇಶಗಳಲ್ಲಿ ನೆಲೆಸಿತು. ಕ್ರಿ.ಶ. ೧೧೮೪ರಲ್ಲಿ ಕಲಚೂರಿ ದೊರೆ ಸಿಂಘಣ ಪ್ರದೇಶ ಗಳನ್ನು ಸೋಮೇಶ್ವರನಿಗೆ ಒಪ್ಪಿಸಿ ಅವನ ಸಾಮಂತನಾದ. ನಂತರ ಈ ಕಲಚೂರಿಗಳ ಬಗ್ಗೆ ಯಾವುದೇ ಖಚಿತ ಆಧಾರಿತ ಮಾಹಿತಿಗಳು ಇಲ್ಲ.

ಕಲಚೂರಿಗಳು ಆಳಿದ್ದು ಕೇವಲ ಸುಮಾರು ೨೬ ವರ್ಷಗಳು ಮಾತ್ರ. ಆದರೂ ಅವರ ಆಳ್ವಿಕೆ ದಕ್ಷಿಣ ಭಾರತದ ಇತಿಹಾಸದಲ್ಲಿ ವಿಶೇಷ ಸ್ಥಾನ ಪಡೆದಿದೆ. ಕಲ್ಯಾಣದ ಚಾಳುಕ್ಯರ ಅವನತಿ ಕಲಚೂರಿಗಳ ಉನ್ನತಿಗೆ ನೆರವಾಯಿತು. ದೇವಗಿರಿಯ ಸೇವುಣರು ಮತ್ತು ದೋರಸಮುದ್ರದ ಹೊಯ್ಸಳರ ರಾಜ್ಯ ಸ್ಥಾಪನೆಗೆ ಕಲಚೂರಿಗಳು ಕಾರಣರಾದರು. ಇವರ ಕಾಲದಲ್ಲಿ ವೀರಶೈವಧರ್ಮದ ಸ್ಥಾಪನೆ ಮತ್ತು ಪ್ರಚಾರಗಳಿಗೆ ಅವಕಾಶ ದೊರೆಯಿತು. ಈ ಕಾಲದಲ್ಲಿ ಜೈನ ಮತ್ತು ಬೌದ್ಧ ಧರ್ಮಗಳು ಅವನತಿಗೀಡಾದವು. ಒಟ್ಟಾರೆ ಹೇಳುವುದಾದರೆ ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಕಲಚೂರಿಗಳ ಸ್ಥಾನ ವೈಶಿಷ್ಟ್ಯಪೂರ್ಣವಾಗಿದೆ.

೧೪. ದೇವಗಿರಿಯ ಯಾದವರು ಮತ್ತು ಓರಂಗಲ್ಲಿನ ಕಾಕತೀಯರು

ಕಲ್ಯಾಣಿ ಚಾಳುಕ್ಯರ ಸಾಮ್ರಾಜ್ಯದ ಅವಸಾನ ಬೀದರ್‌ನ ಭಾಗದಲ್ಲಿ ಹೊಸ ಇತಿಹಾಸಕ್ಕೆ ನಾಂದಿ ಹಾಡಿತ್ತು. ಕಲ್ಯಾಣಿ ಚಾಳುಕ್ಯರ ಸಾಮಂತರಾಗಿದ್ದ ದೇವಗಿರಿಯ ಯಾದವರು ಹಾಗೂ ಓರಂಗಲ್ಲಿನ ಕಾಕತೀಯರು ಸ್ವತಂತ್ರಗೊಂಡರು. ಕಲ್ಯಾಣ ಹಾಗೂ ಬೀದರ ಯಾದವರ ವಶಕ್ಕೆ ಹೋದವು. ಯಾದವ ಭಿಲ್ಲಮನ ಮಗ ಜೈತುಗಿ (ಒಂದನೇ ಜೈತ್ರಪಾಲನು) ಕಾಕತೀಯ ಅರಸ ರುದ್ರದೇವನನ್ನು ಮತ್ತು ನಂತರ ಮಹಾದೇವನನ್ನು ಯುದ್ಧದಲ್ಲಿ ಕೊಂದು, ಇನ್ನೊರ್ವ ಅರಸ ಗಣಪತಿ ಎನ್ನುವಾತನನ್ನು ಸೆರೆಹಿಡಿದನು. ಹೀಗೆ ಕಾಕತೀಯರ ದಂಡನಾಯಕ ತನ್ನ ಪರಾಕ್ರಮದಿಂದ ರಾಜ್ಯವನ್ನು ಉಳಿಸಿದ. ಆದರೆ ೧೧೯೯ರಲ್ಲಿ ಬಿಡುಗಡೆ ಹೊಂದಿದ ಗಣಪತಿ ರಾಜ್ಯವನ್ನು ಪುನಃ ಸುಭದ್ರಗೊಳಿಸಿದನು.

ಕಾಕತೀಯ ರುದ್ರಾಂಬ/ರುದ್ರಮದೇವಿ (೧೨೬೧-೧೨೯೫)

ಕಾಕತೀಯ ಅರಸ ಗಣಪತಿಗೆ ಗಂಡುಮಕ್ಕಳು ಇದ್ದಿಲ್ಲವಾದ್ದರಿಂದ ತನ್ನ ಹಿರಿಯ ಪುತ್ರಿ ರುದ್ರಾಂಬಳನ್ನೇ ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ. ಆಕೆ ರುದ್ರದೇವಿ ಎಂದೇ ಪ್ರಸಿದ್ಧಿ ತಳೆದಳು. ಈಕೆಯ ಆಳ್ವಿಕೆಯ ಕಾಲದಲ್ಲಿ ಬೀದರ ಪ್ರದೇಶದಲ್ಲಿ ಮಹತ್ವದ ಘಟನೆಗಳು ಜರುಗಿದವು. ದೇವಗಿರಿಯಲ್ಲಿ ಯಾದವ ಸಿಂಘಣ ಜೈತುಗಿಯ ನಂತರ ಜೈತುಗಿಯ ಮೊಮ್ಮಗ ಕೃಷ್ಣ ಕ್ರಿ.ಶ. ೧೨೬೬ರಲ್ಲಿ ಅಧಿಕಾರಕ್ಕೆ ಬಂದ. ಕೃಷ್ಣನ ನಂತರ ಅವನ ತಮ್ಮ ಮಹಾದೇವ ಅಧಿಕಾರ ವಹಿಸಿಕೊಂಡನು.

ದೇವಗಿರಿಯ ಯಾದವರು ಮತ್ತು ಓರಂಗಲ್ಲಿನ ಕಾಕತೀಯರ ನಡುವೆ ಯುದ್ಧಗಳು ಜರುಗುತ್ತಿದ್ದವು. ಹೀಗಾಗಿ ಯಾದವರು ತಮ್ಮ ಸೇನೆಯನ್ನು ಬೀದರ್‌ನಲ್ಲಿ ಇಡಲಾರಂಭಿಸಿದರು. ಇದರಿಂದ ಸೇನೆಯ ನೆಲೆಯಾಗಿ ಬೆಳೆದ ಬೀದರ ಪಟ್ಟಣ ಮಹತ್ವದ ಸ್ಥಳವಾಗಿ ಪರಿಣಮಿಸಿತ್ತಲ್ಲದೆ ಅದೊಂದು ಹೊಸ ನಗರವಾಗಿ ಬೆಳೆಯಲಾರಂಭಿಸಿತು. ಯಾದವರು ಹಾಗೂ ಕಾಕತೀಯರ ನಡುವಣ ಕದನಗಳಿಗೆ ಬೀದರ ನಗರವು ಯುದ್ಧಕೇಂದ್ರವೂ ಆಯಿತು.

ರಂಜೇರುವಿನ ಸಿಂದರು ಮೊದಲು ಯಾದವರ (ಸೇವುಣರ) ಪರವಾಗಿಯೇ ಇದ್ದರು. ಆದರೆ ತದನಂತರ ಕಾಕತೀಯರ ಪರ ವಹಿಸಿದರು. ಅಷ್ಟೇ ಅಲ್ಲ ಅವರಿಗಾಗಿ

ನಿಷ್ಠೆಯಿಂದ ಯುದ್ಧಗಳಲ್ಲಿ ಕಾದಿದರು. ರುದ್ರಾಂಬ ಮತ್ತು ಯಾದವ ಮಹದೇವ ಇವರುಗಳ ಮಧ್ಯೆ ನಡೆದ ಕದನದಲ್ಲಿ ಸಿಂದ ಬೈರವನ ಸಾಹಸದಿಂದ ಕಾಕತೀಯರ ಪರ ಹೋರಾಟ ನಡೆಸಿ ಯಾದವರನ್ನು ಬೀದರ ಕೋಟೆಯ ಹೊರಗೆ ತಳ್ಳಿದ. ಬೀದರ ಅಂದು ಬೆಡಡ/ಬೆಡಣದ ಕೋಟೆ ಎಂದು ಕರೆಯಲ್ಪಡುತ್ತಿತ್ತು. ಆ ಕೋಟೆ ಕಾಕತೀಯರ ರಾಜ್ಯದೊಂದಿಗೆ ಸೇರಿಸಲ್ಪಟ್ಟಿತ್ತು. ಈ ವಿವರಣೆಯನ್ನು ಕೋಟೆಯ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿರುವ ಶಾಸನದಲ್ಲಿ ನಮೂದಿಸಲ್ಪಟ್ಟಿದೆ.

ಹೀಗಾಗಿ ಬೀದರ ಕಾಕತೀಯ ರಾಜ್ಯದ ಪಶ್ಚಿಮದ ಯಾದವರೊಂದಿಗಿನ ಸೀಮಾಕ್ಷೇತ್ರದ ಪ್ರಸಿದ್ಧ ರಕ್ಷಣಾಕೋಟೆಯಾಯಿತು. ಅನೇಕ ಭವನಗಳು, ಮಂದಿರ ಗಳು ನಿರ್ಮಾಣಗೊಂಡವು. ಕೋಟೆಯ ಪುನರ್‌ರಚನೆ ಕೂಡ ಆಯಿತು. ಸ್ಥಳೀಯ ಜನರು ಹೇಳುವಂತೆ ಈಗಿರುವ ಕೋಟೆ ಜಾಗದಲ್ಲಿ ಭವ್ಯ ಮಹಾದೇವ ಮಂದಿರ ವಿತ್ತು. ಸುತ್ತಲು ಜನವಸತಿಗಳು ಬೆಳೆದು ಬಂದವು. ಆಡಳಿತ ವ್ಯವಸ್ಥೆಯಲ್ಲಿ ಮಾರ್ಪಾಡುಗಳಾದವು. ರಂಜೇರು ಹಾಗೂ ಕಲ್ಯಾಣ ಇವುಗಳ ಮಹತ್ವ ಕಡಿಮೆ ಆಗಿ ಕಾಲಕ್ರಮೇಣದಲ್ಲಿ ಬೀದರ ಪ್ರಾಧಾನ್ಯತೆ ತಳೆಯಲಾರಂಭಿಸಿತು.

೧೨೮೦ರಲ್ಲಿ ರುದ್ರಮದೇವಿಯು ತನ್ನ ಮೊಮ್ಮಗ ಪ್ರತಾಪರುದ್ರದೇವನನ್ನು ಯುವರಾಜನೆಂದಾಗಿ ಘೋಷಿಸಿದಳು. ಮುಂದೆ ೧೨೯೫ರಲ್ಲಿ ಪ್ರತಾಪರುದ್ರನು ಪಟ್ಟಕ್ಕೆ ಬಂದು ಕ್ರಿ.ಶ. ೧೩೨೩ರವರೆಗೆ ಆಳಿದನು. ಮುಂದೆ ಕಾಕತೀಯ ರಾಜ್ಯ ದೆಹಲಿಯ ತೊಘಲಕ ಸಾಮ್ರಾಜ್ಯದ ಭಾಗವಾಯಿತು.

೧೩ನೇ ಶತಮಾನದ ಕೊನೆಯ ಘಟ್ಟದಲ್ಲಿ ಅಲ್ಲಾವುದ್ದೀನ್ ಖಿಲ್ಜಿ ದೇವಗಿರಿಯ ಮೇಲೆ ದಾಳಿ ಮಾಡಿದ. ಅಪಾರ ಸಂಪತ್ತನ್ನೂ ಕೊಳ್ಳೆ ಹೊಡೆದ. ಆಗ ರಾಜ್ಯ ಉಳಿಯಿತಾದರೂ ಸಂಪತ್ತು ಹೋಯಿತು, ಸ್ವಾತಂತ್ರ್ಯವೂ ಇಲ್ಲದಾಯಿತು.

ಅಲ್ಲಾವುದ್ದೀನ್ ಓರಂಗಲ್ಲಿನ ಮೇಲಣ ಮೊದಲನೇ ದಾಳಿ (೧೩೦೩) ವಿಫಲ ವಾಯಿತು. ೧೩೦೯ರ ದಾಳಿ ಓರಂಗಲ್ಲಿನ ಪ್ರತಾಪರುದ್ರನ ಸೋಲಿಗೆ ದಾರಿ ಮಾಡಿ ಕೊಟ್ಟಿತು. ೧೩೧೨ರಲ್ಲಿ ದೇವಗಿರಿ ಖಿಲ್ಜಿಗಳ ಪೂರ್ಣವಶದಲ್ಲಿ ಹೋಯಿತಲ್ಲದೆ ೧೩೧೮ರಲ್ಲಿ ಮುಬಾರಕ್ ಖಾನನ ಪರವಾಗಿ ಖುಶ್ರೋಖಾನನು ಬೀದರ ಹಾಗೂ ಇತರ ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಪ್ರತಾಪ ರುದ್ರನು ೧೩೨೦ರಲ್ಲಿ ಬೀದರ ಕೋಟೆಯನ್ನು ಪುನಃ ತನ್ನ ವಶಕ್ಕೆ ಹಿಂತಿರುಗಿ ಪಡೆದನು. ಆದರೆ ಅದು ಬಹುಕಾಲ ಮುಂದುವರೆಯಲಿಲ್ಲ.

೧೫. ತೊಘಲಕ ಆಳ್ವಿಕೆ

ದೆಹಲಿಯಲ್ಲಿ ಖಿಲ್ಜಿಗಳ ಆಳ್ವಿಕೆ ಅಂತ್ಯಗೊಂಡು ಘಿಯಾಸುದ್ದಿನ್ ತೊಘಲಕ ಅಧಿಕಾರಕ್ಕೆ ಬಂದು ತನ್ನ ಮಗ ಉಲುಗ್ ಖಾನ (ಮುಂದೆ ಮೊಹಮದ್ ಬಿನ್ ತೊಘಲಕ) ನೇತೃತ್ವದಲ್ಲಿ ದಕ್ಷಿಣದೆಡೆಗೆ ದಂಡಯಾತ್ರೆ ಹೊರಡಿಸಿದ. ಪ್ರತಾಪ ರುದ್ರನ ಸೋಲು ಕಾಕತೀಯ ಮನೆತನದ ಆಳ್ವಿಕೆಯ ಕೊನೆಗೆ ಕಾರಣವಾಯಿತು.

ಓರಂಗಲ್ಲಿಗೆ ಹೋಗುವ ದಾರಿಯಲ್ಲಿ ಉಲುಗ್ ಖಾನನು ೧೩೨೨ರಲ್ಲಿ ಬೀದರ ಹಾಗೂ ಕಲ್ಯಾಣದ ಕೋಟೆಗಳನ್ನು ವಶಪಡಿಸಿಕೊಂಡನಲ್ಲದೆ ಅಲ್ಲಿ ಸೈನ್ಯಾಧಿಕಾರಿಯನ್ನು ಸೈನ್ಯ ಸಮೇತ ಇರುವ ವ್ಯವಸ್ಥೆ ಮಾಡಿದ.

ಪ್ರಾಂತೀಯ ಆಡಳಿತ ಕೇಂದ್ರವಾಗಿ ಬೀದರ

ಬೀದರ ಕ್ರಮೇಣ ದೇವಗಿರಿ ಹಾಗೂ ಓರಂಗಲ್ಲ ಇವುಗಳ ಮಧ್ಯೆ ಪ್ರಮುಖ ಪಟ್ಟಣವಾಗಿ ಬೆಳೆಯಲಾರಂಭಿಸಿತು. ಕ್ರಿ.ಶ.ಸು. ೧೩೪೧ರಲ್ಲಿ ಮೊಹಮ್ಮದ ಬಿನ್ ತೊಘಲಕನು ಬೀದರನ್ನು ತನ್ನ ಸಾಮ್ರಾಜ್ಯದ ಒಂದು ಪ್ರಾಂತವನ್ನಾಗಿಸಿ ಬೀದರನ್ನು ಅದರ ಮುಖ್ಯ ಕೇಂದ್ರವನ್ನಾಗಿಸಿದನಲ್ಲದೆ, ಮುಲ್ತಾನಿಯ ಶಿಹಾಬುದ್ದಿನ ಎನ್ನುವಾತನನ್ನು ನುಸರತ್ ಖಾನ ಎನ್ನುವ ಬಿರುದಿನೊಂದಿಗೆ ಬೀದರ ಪ್ರಾಂತದ ಸರಕಾರದ ಆಡಳಿತವನ್ನು ವಹಿಸಿಕೊಟ್ಟನು. ಹಾಗೆ ಮಾಡುವಾಗ ಪ್ರತಿವರ್ಷ ಸಾಮ್ರಾಟನ ಖಜಾನೆಗೆ ವಾರ್ಷಿಕ ಒಂದು ಕೋಟಿ ರೂಪಾಯಿ ಸಂದಾಯ ಮಾಡಬೇಕೆನ್ನುವ ಕರಾರನ್ನು ವಿಧಿಸಲಾಯಿತು. ನುಸರತ್ ಖಾನ ಅದರಂತೆ ನಡೆದುಕೊಳ್ಳಲಿಲ್ಲವಾದ್ದರಿಂದ ದೌಲತಾಬಾದಿನಲ್ಲಿ ರಾಜ್ಯಪಾಲನಾಗಿದ್ದ ಕುತುಲುಘ ಖಾನನು ಅಧಿಕಾರದಿಂದ ತೆಗೆದು ಹಾಕಲು ಬೀದರಿನತ್ತ ದೌಡಾಯಿಸಿದ. ನುಸರತ್ ಖಾನನನ್ನು ಅಧಿಕಾರದಿಂದ ತೆಗೆದುಹಾಕಲಾಯಿತು. ಆ ವೇಳೆಗಾಗಲೇ ದಖನಿನಲ್ಲಿ ರಾಜಕೀಯ ಅವ್ಯವಸ್ಥೆ ಉಂಟಾಗಿತ್ತು. ಹೀಗಾಗಿ ದಕ್ಷಿಣದಲ್ಲಿನ ಅರಾಜಕತೆಯನ್ನು ಸದೆಬಡೆಯಲು ತುಘಲಕ್ ಪ್ರಯತ್ನಿಸಿದನು.

ದೌಲತಾಬಾದಿನಿಂದ ಕಂದಾಯವಸೂಲಿಗಾಗಿ ಗುಲಬರ್ಗಾಕ್ಕೆ ನಿಯೋಜಿಸಲ್ಪಟ್ಟಿದ್ದ ಅಮೀರ ಅಲಿ ಎನ್ನುವ ಅಧಿಕಾರಿಯು ಪರಿಸ್ಥಿತಿಯ ಲಾಭ ಪಡೆದು ಗುಲಬರ್ಗಾ ಹಾಗೂ ಬೀದರ ಇವುಗಳನ್ನು ತನ್ನ ವಶಕ್ಕೆ ತೆಗೆದುಕೊಂಡ.

ದಂಗೆ ಅಡಗಿಸಲು ತೊಘಲಕನು ಮತ್ತೆ ಕುತುಲುಘ ಖಾನನನ್ನು ಕಳುಹಿಸಿದ.

ಬೀದರ್‌ನಲ್ಲಿ ದೊಡ್ಡ ಹೋರಾಟ ಜರುಗಿತು. ಸೆರೆ ಹಿಡಿಯಲ್ಪಟ್ಟಿದ್ದ ಅಮೀರ ಅಲಿಯನ್ನು ಬಂದಿಯಾಗಿಸಿ ಕುತುಲುಘ ಖಾನನು ಅವನನ್ನು ದೆಹಲಿಗೆ ರವಾನಿಸಿದ.

ತೊಘಲಕನ ಆಳ್ವಿಕೆಯ ಕಾಲದಲ್ಲಿ ಅವನ ಸಾಮ್ರಾಜ್ಯದ ೨೩ ಅಕಲಿಮ (ಪ್ರಾಂತ)ಗಳಲ್ಲಿ ಬೀದರ (ಬೆದರ...) ಒಂದಾಗಿತ್ತು. ಪ್ರತಿ ಪ್ರಾಂತವೂ ಶಿಖ್ (ಗ್ರಾಮೀಣ ಜಿಲ್ಲೆ) ಹಾಗೂ ಮದಿನಾ (ನಗರ ಜಿಲ್ಲೆ) ಗಳಲ್ಲಿ ವಿಭಾಗಿಸಲ್ಪಟ್ಟಿತ್ತು. ಪ್ರಾಂತದ ಮುಖ್ಯಸ್ಥರಿಗೆ ವಲಿ ಹಾಗೂ ಶಿಕಗಳ ಮುಖ್ಯಸ್ಥರಿಗೆ ಶಿಕದಾರ ಮುಂತಾಗಿ ಕರೆಯುತ್ತಿದ್ದರು. ಗ್ರಾಮೀಣ ಜಿಲ್ಲೆ (ಶಿಕ) ಪ್ರತಿ ಸಾವಿರ ಹಳ್ಳಿಗಳಿಗೆ ಓರ್ವ ಅಮೀರ-ಎ-ಹಜಾರಿ ಮತ್ತು ನೂರು ಗ್ರಾಮಗಳಿಗೆ ಓರ್ವ ಅಮೀರ-ಎ-ಸದಿ ಎಂಬ ಅಧಿಕಾರಿಗಳನ್ನು ನೇಮಕ ಮಾಡಲಾಗಿತ್ತು. ಹಜಾರಿ (ಸಾವಿರ) ಸದಿ (ನೂರು)ಗಳು ಆಡಳಿತದ ಪ್ರಮುಖ ಘಟಕಗಳಾಗಿದ್ದವು. ಸದಾಹ ಅಮೀರರು ಕಂದಾಯದ ಸಂಗ್ರಹಣೆಯೊಂದಿಗೆ ಮಿಲಿಟರಿ (ಸೈನಿಕ) ಕಾರ್ಯವನ್ನು ನಿರ್ವಹಿಸುತ್ತಿದ್ದರು.

ಮೊಹಮದ್ ಬಿನ್ ತೊಘಲಕನು ತನ್ನ ಅಳಿಯ ಇಮಾನತಉಲ್ಲ ಮುಲ್ಕನನ್ನು ಐನುಲ ಮುಲ್ಕನ ನಂತರ ದಖನಿನ ವೈಸರಾಯನಾಗಿ ನೇಮಿಸಿದ್ದನು. ದೌಲತಾಬಾದಿನ ರಾಜ್ಯಪಾಲ ಮತ್ತು ಸದ (ಹ) ಅಮೀರರ ನಡುವೆ ವೈಮನಸ್ಸು ಏರ್ಪಟ್ಟಿತ್ತು. ಅಮೀರರು ದಂಗೆಯೆದ್ದರು. ದಂಗೆ ಅಡಗಿಸಲು ತೊಘಲಕ ದಕ್ಷಿಣದೆಡೆಗೆ ಬಂದ. ಆ ಸಂದರ್ಭದಲ್ಲಿ ದಂಗೆ ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅಮೀರರೆಲ್ಲ ಒಂದಾಗಿ ಮೇಲುಗೈ ಸಾಧಿಸಿ ದೌಲತಾಬಾದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಅವರುಗಳು ತಮ್ಮೊಳಗೆ ಓರ್ವ ಅಮೀರನಾಗಿದ್ದ ಇಸ್ಮಾಲಿ ಮುಖ್(ಅಫಘಾನಿ)ನನ್ನು ದಖ್ಖನ್ನಿನ ಸುಲ್ತಾನನ್ನಾಗಿ ಆರಿಸಿಕೊಟ್ಟರು. ನಾಸಿರುದ್ದಿನ್ ಅಲಿಶಾಹ ಎಂಬ ಬಿರುದನ್ನು ಇತ್ತರು. ಇಸ್ಮಾಯಿಲ್‌ಮುಖ್‌ನು ತನ್ನ ಸಹಾಯಕರ ನಡುವೆ ಜಾಗಿರುಗಳನ್ನು ಮತ್ತು ಬಿರುದುಗಳನ್ನು ಹಂಚಿದನು. ನಸಿರುದ್ದೀನನಿಗೆ ಖಾನ್-ಜಾ-ಎ-ಜಹಾನ ಮತ್ತು ಹಸನ್ ಗಂಗು ಎನ್ನುವಾತನಿಗೆ ಜಫಾರಖಾನ ಎಂಬ ಬಿರುದುಗಳಿಂದ ಗೌರವಿಸಿದನು.

ಕ್ರಿ.ಶ. ೧೩೪೭ರಲ್ಲಿ ದೌಲತಾಬಾದಿನಲ್ಲಿ ಜರುಗಿದ ಈ ಘಟನೆಗಳು ದಖನ್ನಿನ ಇತಿಹಾಸಕ್ಕೆ ಹೊಸ ತಿರುವು ನೀಡುವುದರಲ್ಲಿದ್ದವು. ಒಂದೆಡೆ ತೊಘಲಕನ ಸೈನಿಕ ತುಕಡಿಗಳು ದೌಲತಾಬಾದಿನಲ್ಲಿ ಇಸ್ಮಾಯಿಲ್‌ಮುಖನನ್ನು ಸುತ್ತುವರಿದಿದ್ದವು. ಮತ್ತೊಂದೆಡೆ ಮುಂದಿನ ತಯ್ಯಾರಿಗಾಗಿ ಜಫಾರಖಾನ(ಹಸನಗಂಗೂ) ಕೆಲ ಅಮೀರರೊಂದಿಗೆ ಗುಲಬರ್ಗಾದೆಡೆಗೆ ಸಾಗಿದ. ಮುಂದಿನ ಮೂರು ತಿಂಗಳು ಅವಧಿಯಲ್ಲಿ ಸೈನ್ಯವನ್ನು ಬಲಪಡಿಸಿಕೊಂಡ. ಓರಂಗಲ್ಲಿನ ಕಾಪ್ಯ ನಾಯಕನ ಸಹಾಯವನ್ನು ಪಡೆದುಕೊಂಡ. ಏತನ್ಮಧ್ಯೆ ತೊಘಲಕನಿಗೆ ಗುಜರಾತಿನಲ್ಲಿ ದಂಗೆ ಅಡಗಿಸಲು ಧಾವಿಸಬೇಕಾದ ಅನಿವಾರ್ಯತೆ ಉಂಟಾಯಿತು.

೨೦ ಸಾವಿರ ಕುದುರೆ ಸವಾರರೊಂದಿಗೆ ಜಾಫರಖಾನ (ಹಸನಗಂಗೂ) ಇಮಾನತ-ಉಲ್ಲ-ಮುಲ್ಕನ ವಶದಲ್ಲಿದ್ದು ಬೀದರ ಕೋಟೆಗೆ ಮುತ್ತಿಗೆ ಹಾಕಿದ. ಸೈನ್ಯ ಬಲಪಡಿಸಿಕೊಂಡು ಬೀದರ ಕೋಟೆಯ ಮೇಲೆ ದಾಳಿ ಇಟ್ಟ. ಬೆಳಗಿನಿಂದ ಸಾಯಂಕಾಲದ ವೇಳೆಗೆ ನಿರ್ಣಯ ಆಗಿ ಹೋಯಿತು. ಇಮಾನತ-ಉಲ್ಲ-ಮುಲ್ಕ ಹತನಾದ. ಅವನ ಸೈನಿಕರು ಚೆಲ್ಲಾಪಿಲ್ಲಿಯಾಗಿ ಓಡಿದರು.

ಸೈಫ್ರದಿನ ಘೋರಿಯನ್ನು ಬೀದರದಲ್ಲಿ ಬಿಟ್ಟ ಹಸನಗಂಗೂ ದವಲತಾಬಾದಿಗೆ ತೆರಳಿದ. ಅಲ್ಲಿ ಹಸನಿಗೆ ಮಹತ್ವ ದೊರಕಿತು. ಪರಿಸ್ಥಿತಿಯನ್ನು ಗಮನಿಸಿದ ನಸಿರುದ್ದಿನ ತನಗೆ ವಯಸ್ಸಾಗಿದ್ದು ಬೇರೆಯವರನ್ನು ಅರಸನನ್ನಾಗಿ ಆರಿಸಿಕೊಳ್ಳಲು ಅಲ್ಲಿ ನೆರೆದಿದ್ದ ಅಧಿಕಾರಿಗಳಿಗೆ ಪ್ರಸ್ತಾಪಿಸಿದ್ದಲ್ಲದೆ ಜಫರಖಾನ (ಹಸನ)ನ ಹೆಸರನ್ನು ತನ್ನ ಪರವಾಗಿ ಸೂಚಿಸಿದ. ಅಲ್ಲಿ ನೆರೆದಿದ್ದ ಅಮೀರರು ಅಧಿಕಾರಿಗಳು ಪ್ರಸ್ತಾವನೆಗೆ ಒಮ್ಮತದಿಂದ ಸಮ್ಮತಿ ಇತ್ತರು. ಇತಿಹಾಸಕಾರ ಫೆರಿಸ್ತಾರ ಪ್ರಕಾರ ''ಶುಕ್ರವಾರ ಆಗಸ್ಟ್ ೧೨, ೧೩೪೭ರಂದು ಜಫರಖಾನ(ಹಸನ)ನ ಶಿರದ ಮೇಲೆ ಕಿರೀಟ ಇಡಲಾಯಿತು'' ಹಸನ ಅಲ್ಲಾಉದ್ದಿನ-ಹಸನ ಆದ. ಕಲಬುರ್ಗಿಯ ಹೆಸರು ಹಸನಾಬಾದ ಎಂದಾಗಿಸಿ ರಾಜಧಾನಿಯನ್ನಾಗಿ ಮಾಡಲಾಯಿತು. ಹೀಗೆ ಬಹಮನಿ ಮನೆತನದ ಆಳ್ವಿಕೆ ಆರಂಭಗೊಂಡಿತು.

ಯಾರು ಈ ಹಸನ ? ಗಂಗೂ ಬಹಮನಿ ?

ಇತಿಹಾಸಕಾರರಾದ ಮಹಮದ್ ಕಾಸಿಮ ಫೇರಿಸ್ತಾ ಬರೆದಿರುವಂತೆ, ಗಂಗೂ ಬ್ರಾಹ್ಮಣ ಜ್ಯೋತಿಷಿ. ದೆಹಲಿಯಲ್ಲಿದ್ದ ಯುವರಾಜ ಮಹಮದ ತೊಘಲಕನೊಂದಿಗೆ ಹೆಚ್ಚಿನ ಪರಿಚಯ ಗಂಗು ಮನೆತನಕ್ಕಿತ್ತು. ಸ್ವಲ್ಪ ಜಮೀನಿನಲ್ಲಿ ಉಳುಮೆ ಮಾಡಲು ಜೋಡಿಎತ್ತು ಕೊಡಿಸಿ ಹಸನ ಎಂಬಾತನಿಗೆ ಕೆಲಸಕ್ಕೆ ನೇಮಿಸಿದ. ಹೊಲದಲ್ಲಿ ಉಳುವಾಗ ದೊರೆತ ಬಂಗಾರದ ನಾಣ್ಯಗಳನ್ನೊಳಗೊಂಡ ಕೊಡ ಒಂದನ್ನು ಪ್ರಾಮಾಣಿಕತೆಯಿಂದ ಒಡೆಯ ಗಂಗೂಗೆ ಒಪ್ಪಿಸಿದ. ವಿಷಯ ಯುವರಾಜ ತೊಘಲಕನ ಮೂಲಕ ರಾಜನಿಗೆ ತಲುಪಿತು. ಪ್ರಭಾವಿತನಾದ ಅರಸ ಹಸನನಿಗೆ ನೂರು ಕುದುರೆಗಳನ್ನು ದಯಪಾಲಿಸಿದ. ಗಂಗೂ ಬ್ರಾಹ್ಮಣನು ಹಸನನ ಬಗೆಗೆ ಮುಂದೆ ಆತ ರಾಜನಾಗುವನೆಂಬ ಭವಿಷ್ಯ ಕೂಡ ತಿಳಿಸಿದನಲ್ಲದೇ ಅಂತಹ ಸಂದರ್ಭದಲ್ಲಿ ತನ್ನನ್ನು ಮರೆಯದಿರಲು ತಿಳಿಸಿದ. ವಿಶೇಷವೆಂದರೆ, ಪ್ರಸಿದ್ಧ ಶೇಖ ನಿಜಾಮೊದ್ದಿನ ಔಲಿಯ ಅವರು ಇಂತಹುದೇ ಭವಿಷ್ಯ ನುಡಿದಿದ್ದರಂತೆ.

ಮುಂದೆ ತೊಘಲಕ ದಖನಿಗೆ ಬಂದಾಗ ಅವನೊಂದಿಗೆ ಬಂದವರಲ್ಲಿ ಹಸನ ಓರ್ವಾತ. ಹಸನನಿಗೆ ರಾಯಬಾಗದಲ್ಲಿ ಜಾಗೀರು ನೀಡಲಾಯಿತು.

ಮುಂದೆ ಕ್ರಿ.ಶ. ೧೩೪೭ರಲ್ಲಿ ಜರುಗಿದ ಘಟನೆಗಳು ಗಂಗೂ ಬ್ರಾಹ್ಮಣನ ಭವಿಷ್ಯವನ್ನು ನಿಜಗೊಳಿಸಿದ್ದವು. ಅರಸನಾದ ಮೇಲೆ ಹಸನ ಗಂಗೂ ಬ್ರಾಹ್ಮಣನಿಗೆ ಖಜಾನೆ ನಿರ್ವಹಣೆ ಕಾರ್ಯವನ್ನು ವಹಿಸಿಕೊಟ್ಟನಲ್ಲದೆ ತನ್ನ ಹೆಸರಿನೊಂದಿಗೆ ಗಂಗೂ ಬ್ರಾಹ್ಮಣ (ಬಹಮನಿ) ಜೋಡಿಸಿಕೊಂಡು ತನ್ನ ಗೌರವ ತೋರಿದ. ಇದಲ್ಲದೆ ತಾನು ಪಟ್ಟಕ್ಕೇರಿದ ಸಂದರ್ಭದಲ್ಲಿ ಅದೆಷ್ಟೋ ಬಂಗಾರ, ಬೆಳ್ಳಿಯನ್ನು ಶೇಖ್ ನಿಜಾಮೊದ್ದಿನ ಔಲಿಯಾ ಅವರ ಹೆಸರಿನಲ್ಲಿ ದಾನ ಮಾಡಿದ.

೧೬. ಬಹಮನಿ ಮನೆತನ

ಗುಲಬರ್ಗಾ (ಹಸನಾಬಾದ) ಬಹಮನಿ ರಾಜ್ಯದ ರಾಜಧಾನಿಯಾಯಿತು. ಅರಸನು ಬೀದರನ್ನು ಮರೆಯಲಿಲ್ಲ. ಏಕೆಂದರೆ ಹಸನನು ಅಂತಹ ಯಶಸ್ವಿನತ್ತ ಸಾಗಲು ಮೊದಲ ಹೆಜ್ಜೆ ಇಟ್ಟದ್ದೇ ಬೀದರ್‌ನಿಂದ. ಬೀದರ ನಗರಕ್ಕೆ ಪ್ರಾಂತೀಯ ರಾಜಧಾನಿಯ ದರ್ಜೆ ನೀಡಿದುದಲ್ಲದೆ ಎಲ್ಲಾ ಪ್ರಾಂತಗಳಿಗಿಂತಲೂ ಬೀದರಿಗೆ ಅಗ್ರಪ್ರಾಶಸ್ತ್ಯ ನೀಡಲಾಯಿತು. ಮುಂದೆ ಬೀದರ ವಿಶಾಲ ಬಹಮನಿ ರಾಜ್ಯದ ರಾಜಧಾನಿಯಾಗಿ ಮೆರೆಯಿತು.

ಅಲ್ಲಾಉದ್ದೀನ ಹಸನ್ ಬಹಮನ ಶಾಹನ ನಿಧನದ ನಂತರ ಕ್ರಿ.ಶ. ೧೩೫೮ ರಲ್ಲಿ ಆತನ ಹಿರಿಯ ಮಗ ಮಹಮ್ಮದಶಾಹನು ಪಟ್ಟಕ್ಕೆ ಬಂದನು. ತನಗೆ ಮಾವನಾಗಿದ್ದ ಮಲಿಕ ಸೈಫುದಿನ ಘೋರಿಯನ್ನು ತನ್ನ ಪ್ರಧಾನಮಂತ್ರಿಯಾಗಿ ಮುಂದುವರೆಸಿದನು.

ಬೀದರಿನ ಆಝುಮ-ಎ-ಹುಮಾಯುನನನ್ನು ಓರಂಗಲ್ಲಿನ ನಾಯಕನಾಗಿದ್ದ ಕಾಪ್ಯ ನಾಯಕನ ವಿರುದ್ಧ ನಿಯೋಜಿಸಲಾಯಿತು. ಸೋತ ನಾಯಕನು ಗೋವಳ ಗೊಂಡ(ಗೋಲಕೊಂಡ)ಭಾಗವನ್ನು ವಹಿಸಿಕೊಟ್ಟನಲ್ಲದೆ ಅಪಾರ ಸಂಪತ್ತನ್ನು ನೀಡಿದ. ಬೀದರಿನ ಆಝುಮೆ ಹುಮಾಯುನನು ಗೋಲಕೊಂಡದ ರಾಜ್ಯಪಾಲ ನಾಗಿ ನೇಮಕಗೊಂಡನು. ಈತನು ರಾಜ್ಯಪಾಲನಾದ ಮೇಲೆ ಬೀದರಿನ ಪ್ರಾಮುಖ್ಯತೆ ಹೆಚ್ಚಲಾರಂಭಿಸಿತು.

ಕೆಲಕಾಲ ಬೀದರದಲ್ಲಿ ತಂಗಿದ್ದ ಮಹಮದಶಾಹ ಬೀದರಿನ ಪರಿಸರ ಹಾಗೂ ಹವಾಗುಣಕ್ಕೆ ಮಾರುಹೋದ. ಹೀಗಾಗಿ ಬೀದರ ನಗರ ಕ್ರಮೇಣ ಬೆಳೆಯಲಾರಂಭಿಸಿತು.

ಇದೇ ಸಂದರ್ಭದಲ್ಲಿ ಗುಲಬರ್ಗಾದಲ್ಲಿ ಅರಸೊತ್ತಿಗೆಗಾಗಿ ಕಲಹ ಏರ್ಪಟ್ಟಿದ್ದವು. ಕೊಲೆಗಳು ಜರುಗಿದ್ದವು. ಕ್ರಿ.ಶ. ೧೩೭೮ರಲ್ಲಿ ೨ನೇ ಮಹಮ್ಮದನು ಅರಸನಾದ. ಆತನು ಬೀದರ್‌ನಲ್ಲಿ ಅನಾಥರಿಗಾಗಿ ಶಾಲೆಗಳನ್ನು ತೆರೆದ. ಕ್ರಿ.ಶ. ೧೩೯೬ರಲ್ಲಿ ದುರ್ಗಾದೇವಿಯ ಕ್ಷಾಮ ತಲೆದೋರಿತು. ಅದರ ಪ್ರಭಾವ ೧೨ ವರ್ಷಗಳ ಕಾಲ ಇದ್ದಿತ್ತು. ೧೩೯೭ರಲ್ಲಿ ಫಿರೋಜಶಾಹನು ಪಟ್ಟಕ್ಕೆ ಬಂದನು. ಮತ್ತೆ ಅಧಿಕಾರಕ್ಕಾಗಿ ಸ್ಪರ್ಧೆ ಏರ್ಪಟ್ಟು ಘರ್ಷಣೆಯ ನಂತರ ೧೪೨೨ರಲ್ಲಿ ಅಹಮ್ಮದ

ಶಾಹನು ಬಹಮನಿರಾಜ್ಯದ ಸುಲ್ತಾನನಾದನು. ಆತನಿಗೆ ಬೆಂಬಲವಿತ್ತ ಹಜರತ್ತ ಗೇಸುದರಾಜ ಅವರು ೧೪೨೨ರಲ್ಲಿ ಇಹಲೋಕ ತೊರೆದರು. ೧೪೨೩ರಲ್ಲಿ ಅಬ್ದುಲ್ ಲತೀಫ ಎನ್ನುವಾತ ಖಾನ ಆಜಮ ಬಿರುದಿನೊಂದಿಗೆ ಬೀದರಪ್ರಾಂತದ ರಾಜ್ಯಪಾಲ ನಾಗಿ ನೇಮಕಗೊಂಡ.

ಅಹಮ್ಮದ ಶಾಹನು ಮುಂದೆ ಕೆಲವೇ ತಿಂಗಳಲ್ಲಿ ಬೀದರಿಗೆ ತನ್ನ ರಾಜಧಾನಿ ವರ್ಗಾಯಿಸುವ ನಿರ್ಧಾರವನ್ನು ತೆಗೆದುಕೊಂಡನು. ಅದಕ್ಕೆ ಕಾರಣವೆಂದರೆ ಬೀದರಿನ ಹವಾಗುಣ ಮತ್ತು ಬೆಳೆದ ರಾಜ್ಯಕ್ಕೆ ಕೇಂದ್ರಸ್ಥಾನದಲ್ಲಿತ್ತು. ರಕ್ಷಣೆಯ ದೃಷ್ಟಿಯಿಂದಲೂ ಅದು ಮಹತ್ವದ ಕೇಂದ್ರವಾಗಿತ್ತು.

ಗುಲಬರ್ಗಾದಿಂದ ಬೀದರಿಗೆ ರಾಜಧಾನಿ ವರ್ಗಾವಣೆಯ ಪರಿಣಾಮವಾಗಿ ಹಳೆಯ ಕೋಟೆ ಹೊಸ ರೂಪ ತಳೆಯಲಾರಂಭಿಸಿತು. ಭವ್ಯ ಮಹಲುಗಳು ನಿರ್ಮಾಣಗೊಂಡವು. ಮುಖ್ಯಕೋಟೆಯ ಹೊರವಲಯದಲ್ಲಿ ಅಧಿಕಾರಿಗಳ ವಾಸಕ್ಕಾಗಿ ಮಹಲುಗಳನ್ನು ನಿರ್ಮಿಸಿಕೊಳ್ಳಲಾರಂಭಿಸಿದರು. ಬೀದರ ಮಹತ್ವದ ಪಟ್ಟಣವಾಗಿ, ಬೆಳೆಯಲಾರಂಭಿಸಿದ್ದು ಅಲ್ಲದೆ ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯಲಾರಂಭಿಸಿತು. ಅಹಮ್ಮದ ಶಾಹನ ಧಾರ್ಮಿಕ ಒಲವಿನಿಂದಾಗಿ ಕಿರಮಾನನಿಂದ ಸಂತರು ಬೀದರಿಗೆ ಬರುವಂತಾಯಿತು. ಕಿರಮಾನನಿಂದ ಬಂದ ಸಂತರಿಗಾಗಿ ತಃಖ್ತೆ ಒದಗಿಸಲಾಯಿತು. ಇಂದಿಗೂ ಅದು ತಃಖ್ತೆ ಕಿರಮಾನಿ ಎಂದಾಗಿ ಪ್ರಸಿದ್ಧವಾಗಿದೆ.

ಭವ್ಯಕೋಟೆ ಮಹಲುಗಳ ನಿರ್ಮಾಣದೊಂದಿಗೆ ಯುವರಾಜ ಅಲ್ಲಾವುದ್ದೀನ್‌ನ ವಿವಾಹವು ಅಸಿರನ ನಸೀರಖಾನ ಫಾರುಖಿಯ ಮಗಳೊಂದಿಗೆ ಜರುಗಿತು. ತಿಂಗಳುಗಟ್ಟಲೆ ಸಮಾರಂಭಗಳು ಜರುಗಿದವು ಎಂದು ಇತಿಹಾಸಕಾರರು ಬರೆದಿದ್ದಾರೆ.

ಮಧ್ಯಏಷ್ಯದ ವಿವಿಧ ರಾಜ್ಯಗಳಿಂದ ಇಂಜಿನಿಯರುಗಳು, ತಂತ್ರಜ್ಞರು, ಕಲೆಗಾರರು, ಆಡಳಿತಗಾರರು, ಸಾಹಸಿಗಳು, ವ್ಯಾಪಾರಿಗಳು, ಶಿಕ್ಷಣತಜ್ಞರು ಮುಂತಾದವರು ಬೀದರ್‌ನೆಡೆಗೆ ಧಾವಿಸಿ ಬರಲಾರಂಭಿಸಿದರು. ಬೀದರ, ಅಹಮದ ಬಾದ-ಬೀದರ ಎಂದಾಗಿ ಹೆಸರು ಪಡೆಯಿತು. ಅರಸ ಅಹಮ್ಮದಶಾಹನಿಂದ ಬೆಳೆದು ಬಂದ ನಗರವು ಆತನ ಹೆಸರಿನಿಂದಲೇ ಕರೆಯಲ್ಪಟ್ಟಿತು.

ಕ್ರಿ.ಶ. ೧೪೩೬ರಲ್ಲಿ ಅಹಮ್ಮದಶಾಹನು ನಿಧನ ಹೊಂದಿದ ನಂತರ ಆತನ ಮಗ ಅಲ್ಲಾವುದ್ದೀನ ಪಟ್ಟಕ್ಕೆ ಬಂದನು. ಸಮೀಪದ ಅಷ್ಟೂರ ಗ್ರಾಮದ ಬಳಿ ತನ್ನ ತಂದೆಯ ಗೋರಿಯ ಮೇಲೆ ಭವ್ಯವಾದ ಗುಮ್ಮಟ ಸಹಿತ ಕಟ್ಟಡ ನಿರ್ಮಿಸಿದ. ಅಲ್ಲಾವುದ್ದೀನನು ಸುಸಂಸ್ಕೃತ ಅರಸನಾಗಿದ್ದ. ಈತನ ಆಳ್ವಿಕೆ ಸುಗಮವಾಗಿತ್ತಾದರೂ ಕೆಲ ಅಹಿತಕರ ಘಟನೆಗಳು ಜರುಗಿದವು. ಅಲ್ಲಾವುದ್ದೀನನು ಕ್ರಿ.ಶ. ೧೪೫೮ರಲ್ಲಿ

ನಿಧನನಾದ. ಆ ಮುನ್ನವೇ ಆತನು ಮಹಮ್ಮದ ಗವಾನನನ್ನು ಪ್ರಧಾನಮಂತ್ರಿಯಾಗಿ ನೇಮಕ ಮಾಡಿದ್ದ.

ಅಲ್ಲಾವುದ್ದೀನನ ಮಗ ಹುಮಾಯೂನ ಪಟ್ಟವೇರಿದಂದಿನಿಂದ ಹಿಂಸಾ ಕಾರ್ಯದಲ್ಲಿ ತೊಡಗಿದ. ಇತಿಹಾಸದಲ್ಲಿ ಈತನಿಗೆ ಝಲಿಂ (ಕ್ರೂರ) ನೆಂತಲೇ ಬಗೆಯಲಾಗಿದೆ. ತನ್ನ ರಾಜಕೀಯ ಜೀವನದಲ್ಲಿ ಆತನಿಗೆ ನಿಷ್ಠೆ ತೋರದೆ ಕುಹಕಬುದ್ಧಿ ಉಪಯೋಗಿಸಿದ ಹಲವಾರು ಸಣ್ಣಪುಟ್ಟ ನಾಯಕರನ್ನು ನಿರ್ದಾಕ್ಷಿಣ್ಯವಾಗಿ ಕೊಲೆಗೈಯ್ಯಲು ಹಿಂಜರಿಯಲಿಲ್ಲ.

ತನ್ನ ವಿರೋಧಿಗಳ ಬರ್ಬರ ಹತ್ಯೆಗೈದ. ಈತನು ರಾಜ್ಯವಾಳಿದ್ದು ಕೇವಲ ಮೂರು ವರ್ಷಗಳಿಗೂ ಸ್ವಲ್ಪ ಹೆಚ್ಚಿನ ಅವಧಿಗೆ ಮಾತ್ರ. ತಾನು ಬದುಕಿರುವಾಗಲೇ ತನ್ನ ಎಂಟು ವರ್ಷದ ಮಗುವನ್ನು ಪಟ್ಟಕ್ಕೆ ವಾರಸುದಾರನನ್ನಾಗಿಸಿದ. ಇದು ಆತನ ರಾಜಕೀಯ ಮುತ್ಸದ್ದಿತನ ಮತ್ತು ಮುಂದಾಲೋಚನೆಯನ್ನು ಎತ್ತಿ ತೋರುತ್ತದೆ. ತನ್ನ ಜೀವಿತಾವಧಿಯಲ್ಲಿ ಆಡಳಿತದ ಹೊಣೆಯನ್ನು ಸಮಿತಿಯೊಂದಕ್ಕೆ ವಹಿಸಿಕೊಡಲಾಯಿತು. ಅದರಲ್ಲಿ ಖ್ವಾಜಾ ಮಹಮೂದ ಗವಾನ, ಖ್ವಾಜಾ ಜಹಾನ ತುರ್ಕ ಹಾಗೂ ಅರಸ ನೈಜಾಂನ ತಾಯಿ ಸದಸ್ಯರಾಗಿದ್ದರು. ರಾಣಿ ತಾಯಿ ಮಹಮ್ಮದ ಗವಾನನನ್ನು ಪ್ರಧಾನಮಂತ್ರಿಯಾಗಿ ಮುಂದುವರಿಸಿದಳು. ಮಾಳವಾದ ಸುಲ್ತಾನ ಮಹಮದ ಖಿಲ್ಜಿ ಈ ಮಧ್ಯ ಬೀದರ್‌ನ ಮೇಲೆ ದಾಳಿ ಇಟ್ಟ. ಒಂದು ಹಂತದಲ್ಲಿ ಆಡಳಿತ ಕೋರ್ಟನ್ನು ಫಿರೋಜಾಬಾದಿಗೆ ವರ್ಗಾಯಿಸಲಾಯಿತು. ಮಲ್ಲುಖಾನ ದಖನಿ ಎನ್ನುವಾತ ಬೀದರ ಕೋಟೆಯನ್ನು ರಕ್ಷಿಸಿದ. ಗುಜರಾತದಿಂದ ಸಹಾಯ ಒದಗಿ ಬಂದಿತು. ಆ ಸಂದರ್ಭದಲ್ಲಿ ಕೋಟೆಯೊಳಗಿನ ಅನೇಕ ಕಟ್ಟಡಗಳಿಗೆ ಧಕ್ಕೆ ಆಯಿತಾದರೂ ನಂತರ ಅವುಗಳ ರಿಪೇರಿ ಕೈಗೊಳ್ಳಲಾಯಿತು. ಕ್ರಿ.ಶ. ೧೪೬೩ರಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ನಿಜಾಂಶಾಹ ಅಸುನೀಗಿದ. ಮೂರನೇ ಮಹಮ್ಮದ ಶಾಹನನ್ನು (ಕೇವಲ ಒಂಭತ್ತು ವರ್ಷದವನಾಗಿದ್ದಾಗ) ಪಟ್ಟಕ್ಕೆ ಕೂರಿಸಲಾಯಿತು. ರಿಜೆನ್ಸಿ ಆಡಳಿತ ನೋಡಿಕೊಳ್ಳುವಿಕೆಯನ್ನು ಮುಂದುವರಿಸಿತು. ಅದರ ಓರ್ವ ಸದಸ್ಯನಾಗಿದ್ದ ಖಾನ ಜಹಾನ ತುರ್ಕ ಅಧಿಕಾರ ವಹಿಸಿಕೊಂಡು ತನ್ನ ಪ್ರಭಾವ ಬೀರಲಾರಂಭಿಸಿದ. ಒಂದು ರೀತಿಯಲ್ಲಿ ತಾನೇ ಆಳರಸನೆನ್ನುವ ರೀತಿಯಲ್ಲಿ ವರ್ತಿಸಲಾರಂಭಿಸಿದ. ರಾಣಿ ತಾಯಿಗೆ ಇದು ಸರಿ ಬರಲಿಲ್ಲ. ಹೀಗಾಗಿ ರಾಣಿ - ತಾಯಿ ಖಾನ್ ಜಹಾನನ್ನು ಕೊಲೆ ಮಾಡಿಸಿದಳು.

ಮೂರನೇ ಮಹಮ್ಮದಶಾಹನಿಗೆ ಒಳ್ಳೇ ಶಿಕ್ಷಣದ ವ್ಯವಸ್ಥೆ ಮಾಡಲಾಯಿತು. ಮಹಮ್ಮದ ಗವಾನನ ಮಾರ್ಗದರ್ಶನವು ದೊರೆಯಿತು. ಈ ಅವಧಿಯಲ್ಲಿ ಗೋವಾ ಬಹಮನಿ ರಾಜ್ಯದ ಭಾಗವಾಯಿತು. ಅದರಲ್ಲಿ ಮಹತ್ವದ ಪಾತ್ರವಹಿಸಿದ ಮಹಮ್ಮದ

ಗವಾನನ ಘನತೆ, ಕೀರ್ತಿ ಮತ್ತಷ್ಟು ಹೆಚ್ಚಿತು. ರಾಜ್ಯದ ಗಡಿ ಇನ್ನಷ್ಟು ವಿಸ್ತಾರವಾಗಿ ಬೆಳೆಯಲಾರಂಭಿಸಿತು. ನಾಲ್ಕು ಹೊಸಪ್ರಾಂತಗಳನ್ನು ರಚಿಸಲಾಯಿತು. ಮುಂದೆ ಈ ಪ್ರಾಂತಗಳ ಒಟ್ಟು ಸಂಖ್ಯೆ ಎಂಟಕ್ಕೆ ಏರಿತು.

ಶಿಕ್ಷಣಪ್ರೇಮಿಯಾಗಿದ್ದ ಪ್ರಧಾನಮಂತ್ರಿ ಮಹಮ್ಮದ ಗವಾನನು ಬೀದರ್‌ನಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ. ಇದು ಏಷ್ಯಾ ಖಂಡದಲ್ಲಿಯೇ ಶ್ರೇಷ್ಠ ವಿದ್ಯಾಕೇಂದ್ರವಾಗಿತ್ತು. ಜಗತ್ತಿನ ನಾನಾ ಕಡೆಗಳಿಂದ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು ಇಲ್ಲಿ ಆಗಮಿಸುತ್ತಿದ್ದರು. ಗವಾನ ಸ್ಥಾಪಿಸಿದ ಈ ಕೇಂದ್ರವು ಮದರಸಾ ವಿಶ್ವವಿದ್ಯಾಲಯವೆಂದೇ ಪ್ರಖ್ಯಾತಿ ಪಡೆಯಿತು. ಅದಕ್ಕಾಗಿ ಭವ್ಯಕಟ್ಟಡವೊಂದನ್ನು ನಿರ್ಮಿಸಿದ. ಅದರ ಎಲ್ಲ ಖರ್ಚನ್ನು ಗವಾನನೇ ಪೂರೈಸುತ್ತಿದ್ದ. ಆ ಉನ್ನತ ಶಿಕ್ಷಣ ಕೇಂದ್ರ(ಮದರಸಾ)ದ ಕಟ್ಟಡದ ಅವಶೇಷ ಇಂದಿಗೂ ತನ್ನ ಭವ್ಯತೆಯನ್ನು ಸಾರುತ್ತಿದೆ.

ಕ್ರಿ.ಶ. ೧೪೭೧-೭೪ರ ಅವಧಿಯಲ್ಲಿ ರಷ್ಯದ ಪ್ರವಾಸಿ ಅಫಾನಸಿ ನಿಕೆಟಿನ ಬಹಮನಿ ರಾಜ್ಯದಲ್ಲಿ ಪ್ರವಾಸ ಕೈಕೊಂಡಿದ್ದ. ಬಹಮನಿ ರಾಜಧಾನಿಯಾದ ಬೀದರ್ ನಲ್ಲೂ ಕೆಲಕಾಲ ಕಳೆದ. ಆಗ ಆತನು ತನ್ನ ಪ್ರವಾಸ ಕಥನವನ್ನು ಬರೆದಿಟ್ಟಿದ್ದಾನೆ. ಏಪ್ರಿಲ್ ೫,೧೪೮೧ ರಂದು ಅಹಿತಕರ ಘಟನೆಯೊಂದು ಜರುಗಿತು. ಸುಲ್ತಾನ ಮಹಮ್ಮದ ಕೊಂಡಂಪಲ್ಲಿಯಲ್ಲಿ ವಾಸ್ತವ್ಯ ಹೂಡಿದ್ದ. ಮಹಮ್ಮದ ಗವಾನನ ಕೀರ್ತಿ ಸಹಿಸದ ಕೆಲ ಸ್ವಾರ್ಥಿಗಳು ಆತನ ವಿರುದ್ಧ ಸಂಚು ಹೂಡಿದರು. ನಿರಪರಾಧಿ ಗವಾನ ಅದಕ್ಕೆ ಬಲಿಯಾದ. ಸುಳ್ಳುಪತ್ರವೊಂದನ್ನು ಅಮಲಿನಲ್ಲಿದ್ದ ರಾಜನ ಗಮನಕ್ಕೆ ತರಲಾಯಿತು. ಅದರ ಮೇಲೆ ಗವಾನನ ಮೊಹರು ಇದ್ದಿತು. ಅರಸ ಸಿಟ್ಟಿನ ಭರದಲ್ಲಿ ಗವಾನನ ಕತ್ತು ಹಾರಿಸಲು ಆಜ್ಞೆ ಇತ್ತ. ಕ್ಷಣಾರ್ಧದಲ್ಲಿ ಹತ್ಯೆ ಜರುಗಿಹೋಯಿತು. ನಂತರ ನಿಜಸ್ಥಿತಿ ಅರಿತ ಸುಲ್ತಾನ ಆತ್ಮಸ್ಥೈರ್ಯ ಕಳೆದುಕೊಂಡ. ಒಂದು ವರ್ಷದಲ್ಲಿ (೧೪೮೨ರಲ್ಲಿ) ಅಸುನೀಗಿದ. ಅಂದಿನಿಂದ ಬಹಮನಿ ಸಾಮ್ರಾಜ್ಯ ಪತನದ ಹಾದಿ ಹಿಡಿಯಿತು.

ಸುಲ್ತಾನ ಮಹಮ್ಮದನು ತನ್ನ ಕೇವಲ ೧೨ ವರ್ಷ ವಯಸ್ಸಿನ ಮಗ ಶಿಯಾಬುದ್ದೀನ ಮಹಮ್ಮದನನ್ನು ಅಧಿಕಾರಕ್ಕಾಗಿ ನೇಮಕಗೊಳಿಸಿದ್ದ. ಮತ್ತೆ ರೀಜೆನ್ಸಿ ಆಳ್ವಿಕೆ ಆರಂಭವಾಗಿ ರಾಜ್ಯದಲ್ಲಿ ಆಂತರಿಕ ಕಲಹ ಅಶಾಂತಿ ಏರ್ಪಟ್ಟಿತು. ಸುಲ್ತಾನನ ಕೊಲೆ ಪ್ರಯತ್ನ ಕೂಡ ಜರುಗಿತು. ಅಫಾಕಿಗಳ ನಾಯಕ ಮತ್ತು ರಾಜಧಾನಿಯ ರಕ್ಷಣಾ ಮುಖ್ಯಸ್ಥನೂ ಆಗಿದ್ದ ಕಾಸಿಂ ಬರೀದ ತುರ್ಕ ನಿಜಾಂ-ಉಲ್-ಮುಲ್ಕ ಬೈರಿಯ ನಂತರ ಪ್ರಧಾನ ಮಂತ್ರಿಯಾಗಿ ನೇಮಕಗೊಂಡ. ಈ ಅವಧಿಯಲ್ಲಿ ಅಂದರೆ ಕ್ರಿ.ಶ. ೧೫೧೦ರಲ್ಲಿ ಗೋವಾ ಬಹಮನಿಯರ ಕೈಬಿಟ್ಟು, ಪೋರ್ಚುಗೀಸ್‌ರ ವಶಕ್ಕೆ

ಹೋಯಿತು. ದಿನಂಪ್ರತಿ ಕಾಸಿಂ ಬರೀದ ತನ್ನ ಅಧಿಕಾರದ ಹಿಡಿತ ಹೆಚ್ಚಿಸಿಕೊಳ್ಳುತ್ತ ನಡೆದ. ಈ ಸುಮಾರಿಗೆ ಅಹಮ್ಮದನಗರ, ಬೆರಾರ ಮತ್ತು ಬಿಜಾಪುರ ಈ ಪ್ರಾಂತಗಳ ಮುಖ್ಯಸ್ಥರುಗಳು ತಮ್ಮನ್ನು ಸ್ವತಂತ್ರರೆಂದು ಘೋಷಿಸಿಕೊಂಡರು. ನಿಜಾಂಶಾಹಿ, ಇಮಾದಶಾಹಿ ಮತ್ತು ಆದಿಲ್‌ಶಾಹಿ ಮನೆತನಗಳು ಹುಟ್ಟಿಕೊಂಡವು. ಕಾಸಿಂ ಬರೀದನೂ ಜೌಸಾ ಮತ್ತು ಕಂದಹಾರದಿಂದ ತನ್ನನ್ನು ಸ್ವತಂತ್ರ ಅರಸನೆಂದು ಘೋಷಿಸಿಕೊಂಡನು. ಆದರೆ ಬಹಮನಿ ಅರಸ ಒಪ್ಪಂದ ಮಾಡಿಕೊಂಡು ಅವನನ್ನು ಪ್ರಧಾನಮಂತ್ರಿಯಾಗಿ ನೇಮಿಸಿಕೊಂಡ. ಮಹಮೂದ ಶಾಹನ ನಂತರ ನಾಮ ಮಾತ್ರಕ್ಕೆ ನಾಲ್ವರು ಅರಸರು ಆಗಿಹೋದರು. ಆದರೆ ಅವರು ಯಾರೂ ಸಶಕ್ತರಾಗಿರ ಲಿಲ್ಲ. ಎರಡನೇ ಅಹಮದ ಶಾಹ, ಮೂರನೇ ಅಲ್ಲಾವುದ್ದೀನ ಶಾಹ, ವಲಿ-ಉಲ್ಲಾ ಕೊನೆಯ ಕಲಿಮುಲ್ಲಾ. ಕಲಿಮುಲ್ಲಾ ಅಹಮದನಗರದಲ್ಲಿ ಮರಣ ಹೊಂದಿದ.

೧೭. ಬರೀದ ಶಾಹಿ ಮನೆತನ

ಬಹಮನಿಯರ ನಂತರ ಬೀದರ್‌ನಿಂದ ಆಳಿದ ಬರೀದ ಶಾಹಿಗಳು ತುರ್ಕಿ ಮೂಲದವರು. ಜಾರ್ಜಿಯಾ ಕಡೆಯಿಂದ ಸೇವೆ ಅರಸಿ ಬೀದರಿಗೆ ಬಂದವರು. ಜಾಣನಾಗಿದ್ದ ಕಾಸಿಂ ಬರೀದ ಮಹಮ್ಮದ ಶಾಹ ಬಹಮನಿಯಿಂದ ವಕೀಲ (ಆಡಳಿತಗಾರ)ನಾಗಿ ನೇಮಕಗೊಂಡಿದ್ದ. ೧೫೦೪ರಲ್ಲಿ ಮಹಮ್ಮದ ಶಾಹ ಬಹಮನಿಯ ಮರಣದ ನಂತರ ಅವನ ಮಗ ಅಮೀರ ಬರೀದ ಸುಲ್ತಾನನ ಕುಟುಂಬದ ಮೇಲೆ ಹೆಚ್ಚಿನ ಹಿಡಿತ ಸಾಧಿಸಿದ. ಇವನು ಆದಿಲ್‌ಶಾಹಿಗಳೊಂದಿಗೆ ಸೆಣಸಾಡಬೇಕಾಯಿತು. ಒಂದು ಹಂತದಲ್ಲಿ ಅವರಿಂದ ಬಂಧಿಸಲ್ಪಟ್ಟ. ಆದರೂ ಸಹ ಅರಸ ಆತನನ್ನು ಕ್ಷಮಿಸಿದ. ವಜ್ರವೈಡೂರ್ಯಗಳೊಂದಿಗೆ ಉದಗೀರಕ್ಕೆ ಹೋದನು. ನಂತರ ಬೀದರ್‌ಗೆ ಮರಳಿ ಅಮೀರ ಬರೀದನ ಅಧಿಕಾರ ಕೊಡಲ್ಪಟ್ಟಿತ್ತು. ೧೫೪೨ರಲ್ಲಿ ಅಮೀರ ಬರಿದನ ಮರಣಾನಂತರ ಅವನ ಮಗ ಅಲಿ ಬರೀದ ಶಾಹ ಎಂಬ ಬಿರುದನ್ನು ಧರಿಸಿದ, ಅಂದರೆ ಸ್ವತಂತ್ರನಾಗಿ ಆಳ್ವಿಕೆ ನಡೆಸಲಾರಂಭಿಸಿದ. ಇದಕ್ಕೆ ಕಾರಣವೆಂದರೆ ಬಹಮನಿ ಸುಲ್ತಾನರ ವಾರಸುದಾರರಲ್ಲಿ ಯಾರೂ ಅಷ್ಟೊಂದು ಶಕ್ತೆ ಹೊಂದಿದವರಾಗಿರಲಿಲ್ಲ. ಅಲ್ಲದೇ ಅದೇ ಸಂದರ್ಭದಲ್ಲಿ ದಕ್ಷಿಣದ ಅರಸರಾದ ವಿಜಯನಗರ ಸಾಮ್ರಾಜ್ಯ ಉತ್ತರದತ್ತ ತಮ್ಮ ರಾಜ್ಯ ವಿಸ್ತರಣೆ ಯಲ್ಲಿ ಹವಣಿಕೆ ಹಾಕುತ್ತಿದ್ದರು. ಈ ಸಂದರ್ಭ ಉಪಯೋಗಿಸಿಕೊಂಡು ವಿಜಯ ನಗರ ಅರಸರ ವಿರುದ್ಧ ತಾಳಿಕೋಟೆ ಯುದ್ಧದಲ್ಲಿ ಅಲಿ ಬರೀದ ಭಾಗಿಯಾಗಿದ್ದ.

ಅಲಿಯ ನಂತರ ಅವನ ಮಗ ಇಬ್ರಾಹಿಂ ಬರೀದ ೧೫೮೦ ರಲ್ಲಿ ಪಟ್ಟಕ್ಕೆ ಬಂದು ಮುಂದೆ ಏಳು ವರ್ಷಗಳ ಕಾಲ ರಾಜ್ಯಭಾರದ ನಂತರ ೧೫೮೭ ರಲ್ಲಿ ಎರಡನೇ ಕಾಸಿಂ ಬರೀದ ಬೀದರ ಬರೀದ ಶಾಹಿ ಮನೆತನಕ್ಕೆ ಪಟ್ಟಕ್ಕೆ ಬಂದ. ಆದರೆ ಈಗಾಗಲೇ ಇಲ್ಲಿನ ಪರಿಸ್ಥಿತಿ ಮತ್ತು ಆತನ ಅಶಕ್ತತೆಯಿಂದಾಗಿ ಈ ರಾಜ್ಯ ತನ್ನ ಮಹತ್ವ ಕಳೆದು ಕೊಂಡಿದ್ದಿತು. ಕ್ರಮವಾಗಿ ಎರಡನೇ ಕಾಸಿಂ ಬರೀದ, ಎರಡನೇ ಅಮೀರ ಬರೀದ ಆಳ್ವಿಕೆ ನಡೆಸಿದರಾದರೂ ಹಿಂದಿನ ಅರಸರ ಶೂರತನವಾಗಲಿ ಚಾತುರ್ಯವಾಗಲಿ ಇವರಲ್ಲಿರಲಿಲ್ಲ.

ಕ್ರಿ.ಶ. ೧೬೧೯ ರಲ್ಲಿ ಬಿಜಾಪುರದ ಆದಿಲ್ ಶಾಹನು ಬರೀದ್‌ಶಾಹಿಗಳ ಮೇಲೆ ದಾಳಿಯಿತ್ತು ಬೀದರನ್ನು ವಶಪಡಿಸಿಕೊಂಡ. ಆಗ ಬೀದರ ತನ್ನ ಸ್ವತಂತ್ರ ಅಸ್ತಿತ್ವ

ಕಳೆದುಕೊಂಡಿತ್ತು. ಬೀದರ ಆದಿಲ್‌ಶಾಹಿ ರಾಜ್ಯದ ಒಂದು ಭಾಗವಾಯಿತು. ಕಾಲಕ್ರಮೇಣದಲ್ಲಿ ಸಂಪೂರ್ಣವಾಗಿ ತನ್ನ ಭವ್ಯತೆಯನ್ನು ಕಳೆದುಕೊಂಡಿತ್ತು.

ಆದಿಲ್ ಶಾಹಿಗಳ ಆಳ್ವಿಕೆಯ ಕಾಲದಲ್ಲಿ ವಿಜಾಪುರದಿಂದ ಕಳುಹಿಸಲ್ಪಟ್ಟ ಅಧಿಕಾರಿಗಳಿಂದ ಇಲ್ಲಿಯ ಆಡಳಿತ ನೋಡಿಕೊಳ್ಳಲಾಗುತ್ತಿತ್ತು. ಇಬ್ರಾಹಿಂ ಆದಿಲ್‌ಶಾಹನಿಂದ ನೇಮಿಸಲ್ಪಟ್ಟ ಓರ್ವ ಅಧಿಕಾರಿ ಮಲಿಕ ಮರ್ಜನ್ ಅವನು ಅಬ್ಬೆಸೀನಿಯನ್ ಆಗಿದ್ದು ಆತ ಸುಮಾರು ೩೦ ವರ್ಷಗಳ ಕಾಲ ಬೀದರ್‌ನ ಆಡಳಿತ ನೋಡಿಕೊಳ್ಳುತ್ತಿದ್ದ. ಈತನ ಕಾಲದಲ್ಲಿ ಉತ್ತಮ ಆಡಳಿತದ ಜೊತೆಗೆ ಕಲೆ ಸಂಸ್ಕೃತಿ ಮುಂತಾದವುಗಳು ಉನ್ನತಮಟ್ಟಕ್ಕೇರಿದ್ದವು. ಅಲ್ಲದೇ ಬೀದರ ಕೋಟೆ ಹಾಗೂ ಅರಮನೆಗಳ ರಿಪೇರಿಯನ್ನು ಮಾಡಿಸಿದನು.

೧೬೫೬ರಲ್ಲಿ ಔರಂಗಜೇಬನು ಬೀದರ್‌ನ ಕೋಟೆಯ ಮೇಲೆ ದಾಳಿ ಮಾಡಿದಾಗ ಅದರ ರಕ್ಷಣೆಗಾಗಿ ಮಲಿಕ್ ಮರ್ಜನ್ ತನ್ನ ಮಕ್ಕಳೊಂದಿಗೆ ಹೋರಾಡಿದ. ಬೀದರ್ ಕೋಟೆಯ ರಕ್ಷಣೆಗಾಗಿ ಮಲಿಕ್ ಮರ್ಜನ್ ಸತತ ಪ್ರಯತ್ನಪಟ್ಟನು. ಯುದ್ಧದಲ್ಲಿ ಆಧುನಿಕ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಿ, ಮಕ್ಕಳೊಂದಿಗೆ ಹೋರಾಡಿದನು. ಆದಾಗ್ಯೂ ವಿಜಯಲಕ್ಷ್ಮಿ ಅವನಿಗೆ ಒಲಿಯಲಿಲ್ಲ. ಘೋರವಾದ ಈ ಯುದ್ಧದಲ್ಲಿ ಔರಂಗಜೇಬನ ಸೈನ್ಯದ ಮದ್ದುಗುಂಡಿಗೆ ಬಲಿಯಾಗಿ ಗಾಯಗೊಂಡ ಮಲ್ಲಿಕ್‌ಮರ್ಜನ್ ೧೮ನೇ ಏಪ್ರಿಲ್ ೧೬೫೬ರಂದು ವೀರಮರಣವನ್ನಪ್ಪಿದ. ಔರಂಗಜೇಬನ ಸೈನಿಕರಿಗೆ ಬೀದರ ಕೋಟೆ ಭೇದಿಸಲು ೨೭ ದಿನಗಳು ಹಿಡಿದವು. ಇದು ಮಲ್ಲಿಕ್‌ಮರ್ಜನ್ ಮತ್ತು ಆತನ ಮಕ್ಕಳ ಶೌರ್ಯತನವನ್ನು ಎತ್ತಿ ತೋರಿಸುತ್ತದೆ. ಇದರ ಪರಿಣಾಮವಾಗಿ ಬೀದರ್ ಕೋಟೆ ಮೊಗಲ್ ಸಾಮ್ರಾಜ್ಯದ ಭಾಗವಾಯಿತು. ಬೀದರ್‌ಗೆ ಜಾಫರಾಬಾದ ಎಂಬುದಾಗಿ ಹೆಸರು ಬದಲಾಯಿತು.

೧೮. ಬೀದರದಲ್ಲಿ ಮೊಗಲರು

೧೬೫೬ರಲ್ಲಿ ನಡೆದ ಯುದ್ಧದ ಪರಿಣಾಮವಾಗಿ ಬೀದರ್ ಮೊಗಲ ಸಾಮ್ರಾಜ್ಯದ ಒಂದು ಪ್ರಾಂತವಾಯಿತು. ಬೀದರದ ಮೇಲೆ ನಡೆದ ದಾಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಇಫ್ತಿಖಾನ ಈ ಪ್ರಾಂತದ ಪ್ರಥಮ ರಾಜ್ಯಪಾಲನಾಗಿ ನೇಮಕಗೊಂಡ. ಮೊಗಲ್ ಚಕ್ರವರ್ತಿಗಳಿಂದ ನೇಮಕಗೊಂಡು ಆಳ್ವಿಕೆ ನಡೆಸಿದ ರಾಜ್ಯಪಾಲರುಗಳ ಪಟ್ಟಿ ಈ ಕೆಳಗಿನಂತಿದೆ.

ರಾಜ್ಯಪಾಲರುಗಳು	**ಅಧಿಕಾರ ವಹಿಸಿಕೊಂಡ ವರ್ಷ**
ಇಫ್ತಿಖಿರ ಖಾನ್	೧೬೫೬
ಖಾನ್ ಜಮಾಮ ಮೀರ ಖಲಿಲ್ ಉಲ್ಲಾ	೧೬೫೮
ಮೀರ ಶಮಶುದ್ದೀನ್ ಮುಖ್ತಾರ ಖಾನ್	೧೬೬೦
ಕಲಂದರ ಖಾನ್ (ಜಾನ ನಿಸಾರ ಖಾನ್)	೧೬೭೨
ಜಾನ ಸಿಫಾರಖಾನ್ ಬಾಹದೂರ ದಿಲ್	೧೬೮೧
ರುಸ್ತಮ ದಿಲ್ ಖಾನ್	೧೬೮೬
ಔರಂಗ ಖಾನ್	(ಕೆಲದಿನಗಳು ಮಾತ್ರ)
ಕುಬಾಡ ಖಾನ್	೧೬೮೮
ಹುಸಾಮುದ್ದೀನ್ ಖಾನ್	೧೬೯೧
ಖಾನ್ ಜಾದ್‌ಖಾನ್	೧೬೯೫
ಸಜಾವರ ಖಾನ್	೧೬೯೬
ಅನುಪಸಿಂಗ್ ಬುಂದೇಲಾ	೧೭೨೪

೧೭೨೪ರಲ್ಲಿ ದಖನ್‌ಗೆ ಬಂದ ಉಲ್ ಮುಲ್ಕ ಅಸಫ್ ಜಾಹನು ತನ್ನನ್ನು ಸ್ವತಂತ್ರನೆಂದಾಗಿ ಘೋಷಿಸಿಕೊಂಡು ಆಸಫಜಾ ಮನೆತನದ ಆಳ್ವಿಕೆಯನ್ನು ತನ್ನ ಪರವಾಗಿ ಬೀದರ ಪ್ರಾಂತಕ್ಕೆ ರಾಜ್ಯಪಾಲರುಗಳನ್ನು ಕಳುಹಿಸಲಾರಂಭಿಸಿದ. ಹಾಗೆ ನೇಮಕಗೊಂಡವರಲ್ಲಿ ಆತನಿಗೆ ವಿಧೇಯತೆ ಮತ್ತು ನಿಷ್ಠೆಯನ್ನು ತೋರಿದ ಮೀರ

ಕಲಾನಖಾನನನ್ನು ಬೀದರ ಪ್ರಾಂತ್ಯದ ಮೊದಲ ರಾಜ್ಯಪಾಲನನ್ನಾಗಿ ನೇಮಿಸಿದನು. ಆತನ ನಂತರ ನೇಮಕಗೊಂಡು ಆಳಿದ ರಾಜ್ಯಪಾಲರುಗಳೆಂದರೆ :

ರಾಜ್ಯಪಾಲರುಗಳು

ವಾಸಿಲ್‌ಖಾನ್	ಹಿರಿಯ
ವಾಸಿಲ್ ಖಾನ್	ಕಿರಿಯ
ಖ್ವಾಜಾ ಮೋಮಿನ ಖಾನ್	೧೭೫೦
ಮುಕ್ತ್ತದಾಖಾನ	೧೭೫೨
ಸಿಯಾದತ್ತ ಖಾನ್	೧೭೬೩
ಅಲಾವುದೀನ ದೌಲಾ ದಿಲೀರ ಜಂಗ್	-
ಎರಡನೇ ಮೀರ ಕಲಾನ	೧೭೬೬
ಮುರ್ತದಾಖಾನ್	೧೭೬೭
ಮಹ್ಮದ ಗೌಧ ಸೈಫುದೌಲಾ	೧೭೭೩
ಸೈಫ ಜಂಗ ನಜಮುದೌಲಾ ಬಹಾದೂರ	೧೭೭೩
ನವಾಬ ಅಮೀನ ಉಲ್ ಮುಲ್ಕ ಬಹಾದೂರ	೧೭೮೩
ನೂರ ಮೊಹ್ಮದ ಖಾನ್	-
ಖ್ವಾಜಾ ಮೊಮಿನ ಖಾನ್	-
ಖಾನ್ ಜಹಾನ ಬಹಾದ್ದೂರ	೧೭೯೬-೯೯
ಯಕ್ಕಾ ತಾಜ ಜಂಗ ಬಹಾದೂರ	೧೭೯೯-೧೮೦೦
ಮೀರ ಅಸದ ಅಲಿ ಖಾನ್	೧೮೦೦-೧೮೨೨
ಸೈಯದ ಖಲೀಲುಲ್ಲಾ ಖಾನ ಬಹಾದೂರ	೧೮೨೨-೨೮

೧೮೨೮ ರಿಂದ ೧೮೪೬ ರವರೆಗೆ ಸೇವೆ ಸಲ್ಲಿಸಿದ ರಾಜ್ಯಪಾಲರುಗಳು :

ನವಾಬ ನಜರ ಬಹಾದೂರ ಖಾನ್	೧೮೨೮
ಮೀರ ಹಸನ ಅಲಿ ಖಾನ	೧೮೩೮
ಕಿಶನದಾಸ ಸಾಹುಕಾರ (ಕೇವಲ ಎರಡು ತಿಂಗಳು ಮಾತ್ರ ೧೮೩೮ರಲ್ಲಿ)	

ನವಾಬ ಶಮಶುದ್ದೀನ ಖಾನ್	೧೮೩೯
ಅಬ್ದುಲ್ಲಾ ಬಿನ್ ಅಲಿ	೧೮೪೨
ಪಿಂಡರಿನಾಥ	ಜುಲೈ ೧೮೪೬
ನವಾಬ ಸುಲ್ತಾನ ಮಿರ್ಝಾಖಾನ್	ಸೆಪ್ಟೆಂಬರ್ ೧೮೪೬
ನವಾಬ ಶಮಶುದ್ದೀನ ಖಾನ್	ಡಿಸೆಂಬರ ೧೮೪೬

೧೮೪೬ರಲ್ಲಿ ನೈಜಾಂನ ರಾಜ್ಯವನ್ನು ಹೊಸ ಆಡಳಿತ ವ್ಯವಸ್ಥೆ ಜಾರಿಗೆ ತಂದ ಪರಿಣಾಮವಾಗಿ ರಾಜ್ಯವನ್ನು ಜಿಲ್ಲೆಗಳಾಗಿ ವಿಭಜಿಸಲಾಯಿತು. ಸೈನ್ಯಾಧಿಕಾರಿಗಳಿಂದ ನಡೆಸಲಾಗುತ್ತಿದ್ದ ಹಳೆಯ ಆಡಳಿತ ವ್ಯವಸ್ಥೆ ಸ್ಥಗಿತಗೊಂಡಿತ್ತು. ಹೊಸ ವ್ಯವಸ್ಥೆಯಲ್ಲಿ ಪ್ರಾಂತದ ಮುಖ್ಯಾಲಯದ ಬದಲಾಗಿ ಸದರ ತಾಲ್ಲೂಕದಾರ, ಅಂದರೆ ಕಮಿಷನರ್ ಮಟ್ಟದ ಕೇಂದ್ರಸ್ಥಾನ ಬೀದರ್‌ನಲ್ಲಿ ಆರಂಭಗೊಂಡಿತ್ತು.

೨೦. ಬೀದರಿನ ಪ್ರಮುಖ ಐತಿಹಾಸಿಕ ಘಟನಾವಳಿಗಳು

ಕ್ರಿ.ಪೂ. ೨೩೦	ದಖನ್‌ನಲ್ಲಿ ಶಾತವಾಹನ ಮನೆತನದ ಆಳ್ವಿಕೆ
ಕ್ರಿ.ಶ. ೨೫೦	ದಖನ್ನಿನಲ್ಲಿ ಶಾತವಾಹನರ ಆಳ್ವಿಕೆಯ ಅವಸಾನದೊಂದಿಗೆ ಕುಂತಳದಲ್ಲಿ ಚುಟುಗಳ ಪ್ರಾಬಲ್ಯ
ಕ್ರಿ.ಶ. ೩೪೫	ದಖನ್ನಿನ ದಕ್ಷಿಣ ಪಶ್ಚಿಮದಲ್ಲಿ ಕದಂಬರ ಉದಯ ಬನವಾಸಿಯಲ್ಲಿ ಮಯೂರ ಶರ್ಮ ವಾಸಿಮ್‌ನಲ್ಲಿ ವಾಕಾಟಕರ ವತ್ಸಗುಲ್, ಶಾಖೆ ರಂಜೇರುವಿನ ಸಿಂದರ ಶಾಸನದ ಪ್ರಕಾರ ಕದಂಬನ ಮಯೂರ ಶರ್ಮನ ಮೊಮ್ಮಕ್ಕಳು (ಮಯೂರ ಶರ್ಮನ ಮಕ್ಕಳಾಗಿದ್ದ ಲಕ್ಷ್ಮೀಪತಿ ಹಾಗೂ ನಿಡುದೋಳ ಸಿಂದ ಇವರ ಮಕ್ಕಳು ಬಳ್ಳರೆ ನಾಡು, ಬಾಗಡಿಗೆ, ಪಳಿಯುಂಡ ಮತ್ತು ರಂಜಿರು (ಬಳ್ಳಾರಿಯ ಕುರುಗೋಡು, ಬಾಗಲಕೋಟೆ, ಮಹಾರಾಷ್ಟ್ರದ ಇಂದಿನ ಪರೆದಾರ ಮತ್ತು ಬೀದರ ಜಿಲ್ಲೆಯ ರಂಜೋಳಖೇಣಿ) ಇವುಗಳನ್ನು ರಾಜಧಾನಿಯನ್ನಾಗಿಸಿಕೊಂಡು ಆಳಲು ಆರಂಭಿಸಿದರು.
೫೦೦-೭೫೭	ವಾತಾಪಿ (ಬಾದಾಮಿ) ಚಾಲುಕ್ಯರ ಆಳ್ವಿಕೆ ರಾಷ್ಟ್ರಕೂಟರ ಆಳ್ವಿಕೆ, ದಖನ್ನಿನಲ್ಲಿ ಅವರ ಪ್ರಾಬಲ್ಯ ಮಾನ್ಯಖೇಟ ರಾಜಧಾನಿಯಾಗಿತ್ತು, ಕಂಬಿತಾಣ (ಇಂದಿನ ಕಮಠಾಣ) ಜೈನರ ಒಂದು ಕೇಂದ್ರವಾಗಿದ್ದಿತು.
೯೩೭	ಎರಡನೇ ಚಾಲುಕ್ಯ ತೈಲಪನು ರಾಷ್ಟ್ರಕೂಟರ ಎರಡನೇ ಕರ್ಕನನ್ನು ಉಚ್ಚಾಟಿಸಿದನು. ಕೊಂಕಣ ಸೇವುಣ ಲಾಟಿ ಮುಂತಾದ ದೇಶಗಳನ್ನು ಗೆದ್ದುಕೊಂಡನು. ಕಲ್ಯಾಣಿ ಚಾಲುಕ್ಯ ಸಾಮ್ರಾಜ್ಯದ ಆರಂಭ. ಆರಂಭದ ರಾಜಧಾನಿ ಮಾನ್ಯಖೇಟ (ಮಳಖೇಡ)ವೇ ಆಗಿದ್ದಿತು. ಚಾಲುಕ್ಯರು ಮಳಖೇಡದಿಂದ ಕಲ್ಯಾಣಪುರಕ್ಕೆ ರಾಜಧಾನಿಯನ್ನು ವರ್ಗಾಯಿಸಿದರು.
೧೦೦೭	ಕಾಕತೀಯ ಎರಡನೇ ಬೇತನು ಕಲ್ಯಾಣಿ ಚಾಲುಕ್ಯರಿಂದ ಸಬ್ಬಿನಾಡನ್ನು ಪಡೆದುಕೊಂಡನು.

ಬೀದರ ಒಳಗೊಂಡಂತೆ ಹೈದ್ರಾಬಾದ ಕರ್ನಾಟಕದ ಜನತೆ ಪುನಃ ವಿಮೋಚನೆಗಾಗಿ ಹೋರಾಟ ನಡೆಸಿದರು. ಅದು ಇಲ್ಲಿನ ಜನತೆಗೆ ಎರಡನೆಯ ಸ್ವಾತಂತ್ರ್ಯ ಚಳುವಳಿಯಾಗಿ ಪರಿಣಮಿಸಿತು. ಸೆಪ್ಟೆಂಬರ್ ೧೭ರ ೧೯೪೮ರಂದು ಹೈದ್ರಾಬಾದ್ ಕರ್ನಾಟಕ ವಿಮೋಚನೆಯಾಗಿ ಸ್ವಾತಂತ್ರ್ಯವನ್ನು ಅನುಭವಿಸಿತು. ಆಗ ಬೀದರ ಕೂಡ ಸ್ವತಂತ್ರ ಜಿಲ್ಲೆಯಾಯಿತು.

೧೯೪೮ರಿಂದ ೧೯೫೬ರವರೆಗೆ ಜಾಗೀರು ವ್ಯವಸ್ಥೆ ಹೋಗಲಾಡಿಸಿದ ನಂತರ ಬೀದರ ಜಿಲ್ಲೆ ಪುನರ್‌ರಚಿತಗೊಂಡು ಬೀದರ, ಭಾಲ್ಕಿ, ಹುಮನಾಬಾದ, ಔರಾದ, ನಿಲಂಗಾ, ಅಹ್ಮದನಗರ, ಉದಗೀರ, ಜಹೀರಾಬಾದ ಮತ್ತು ನಾರಾಯಣಖೇಡ ಈ ತಾಲೂಕುಗಳನ್ನು ಒಳಗೊಂಡಿತ್ತು. ನಂತರ ೧೯೫೬ ನವೆಂಬರ ೧ರಂದು ಕರ್ನಾಟಕ ಏಕೀಕರಣವಾಗಿ ವಿಲೀನಗೊಂಡು ಕೇವಲ ನಾಲ್ಕು ತಾಲೂಕುಗಳೊಂದಿಗೆ ರಚಿತವಾದ ಬೀದರ ಜಿಲ್ಲೆ, ಮುಂದೆ ಪುನರ್‌ರಚಿತವಾಗಿ ಬಸವ ಕಲ್ಯಾಣ, ಬೀದರ, ಔರಾದ, ಹುಮನಾಬಾದ ಮತ್ತು ಭಾಲ್ಕಿಯೆಂಬ ಈ ಐದು ತಾಲೂಕುಗಳನ್ನು ಹೊಂದಿರುವ ಚಿಕ್ಕ ಜಿಲ್ಲೆಯಾಗಿದೆ. ಅಗಾಧ ಐತಿಹಾಸಿಕ ಪರಂಪರೆಯನ್ನು ತನ್ನ ಒಡಲಿನಲ್ಲಿ ಹುದುಗಿಸಿಟ್ಟುಕೊಂಡಿದೆ. ಹಳೆ ಬೇರಿಗೆ ಹೊಸ ಚಿಗುರಿನಂತೆ ಈ ಜಿಲ್ಲೆ ಇಂದು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ.

★★★★★★

೨೦. ಬೀದರಿನ ಪ್ರಮುಖ ಐತಿಹಾಸಿಕ ಘಟನಾವಳಿಗಳು

ಕ್ರಿ.ಪೂ. ೨೩೦	ದಖನ್‌ನಲ್ಲಿ ಶಾತವಾಹನ ಮನೆತನದ ಆಳ್ವಿಕೆ
ಕ್ರಿ.ಶ. ೨೫೦	ದಖನ್ನಿನಲ್ಲಿ ಶಾತವಾಹನರ ಆಳ್ವಿಕೆಯ ಅವಸಾನದೊಂದಿಗೆ ಕುಂತಳದಲ್ಲಿ ಚುಟುಗಳ ಪ್ರಾಬಲ್ಯ
ಕ್ರಿ.ಶ. ೩೪೫	ದಖನ್ನಿನ ದಕ್ಷಿಣ ಪಶ್ಚಿಮದಲ್ಲಿ ಕದಂಬರ ಉದಯ ಬನವಾಸಿಯಲ್ಲಿ ಮಯೂರ ಶರ್ಮ ವಾಸಿಮ್‌ನಲ್ಲಿ ವಾಕಾಟಕರ ವತ್ಸಗುಲ್, ಶಾಖೆ ರಂಜೇರುವಿನ ಸಿಂದರ ಶಾಸನದ ಪ್ರಕಾರ ಕದಂಬನ ಮಯೂರ ಶರ್ಮನ ಮೊಮ್ಮಕ್ಕಳು (ಮಯೂರ ಶರ್ಮನ ಮಕ್ಕಳಾಗಿದ್ದ ಲಕ್ಷ್ಮೀಪತಿ ಹಾಗೂ ನಿಡುದೋಳ ಸಿಂದ ಇವರ ಮಕ್ಕಳು ಬಳ್ಳರೆ ನಾಡು, ಬಾಗಡಿಗೆ, ಪಳಿಯುಂಡ ಮತ್ತು ರಂಜಿರು (ಬಳ್ಳಾರಿಯ ಕುರುಗೋಡು, ಬಾಗಲಕೋಟೆ, ಮಹಾರಾಷ್ಟ್ರದ ಇಂದಿನ ಪರೆದಾರ ಮತ್ತು ಬೀದರ ಜಿಲ್ಲೆಯ ರಂಜೋಳಖೇಣಿ) ಇವುಗಳನ್ನು ರಾಜಧಾನಿಯನ್ನಾಗಿಸಿಕೊಂಡು ಆಳಲು ಆರಂಭಿಸಿದರು.
೫೦೦-೭೫೭	ವಾತಾಪಿ (ಬಾದಾಮಿ) ಚಾಲುಕ್ಯರ ಆಳ್ವಿಕೆ ರಾಷ್ಟ್ರಕೂಟರ ಆಳ್ವಿಕೆ, ದಖನ್ನಿನಲ್ಲಿ ಅವರ ಪ್ರಾಬಲ್ಯ ಮಾನ್ಯಖೇಟ ರಾಜಧಾನಿ ಯಾಗಿತ್ತು. ಕಂಬಿತಾಣ (ಇಂದಿನ ಕಮಠಾಣ) ಜೈನರ ಒಂದು ಕೇಂದ್ರವಾಗಿದ್ದಿತು.
೯೩೭	ಎರಡನೇ ಚಾಲುಕ್ಯ ತೈಲಪನು ರಾಷ್ಟ್ರಕೂಟರ ಎರಡನೇ ಕರ್ಕನನ್ನು ಉಚ್ಚಾಟಿಸಿದನು. ಕೊಂಕಣ ಸೇವುಣ ಲಾಟಿ ಮುಂತಾದ ದೇಶಗಳನ್ನು ಗೆದ್ದುಕೊಂಡನು. ಕಲ್ಯಾಣಿ ಚಾಲುಕ್ಯ ಸಾಮ್ರಾಜ್ಯದ ಆರಂಭ. ಆರಂಭದ ರಾಜಧಾನಿ ಮಾನ್ಯಖೇಟಿ (ಮಳಖೇಡ)ವೇ ಆಗಿದ್ದಿತು. ಚಾಳುಕ್ಯರು ಮಳಖೇಡದಿಂದ ಕಲ್ಯಾಣಪುರಕ್ಕೆ ರಾಜಧಾನಿಯನ್ನು ವರ್ಗಾಯಿಸಿದರು.
೧೦೦೭	ಕಾಕತೀಯ ಎರಡನೇ ಬೇತನು ಕಲ್ಯಾಣಿ ಚಾಲುಕ್ಯರಿಂದ ಸಬ್ಬಿನಾಡನ್ನು ಪಡೆದುಕೊಂಡನು.

೧೦೭೭ ಚಾಲುಕ್ಯರ ೬ನೆಯ ವಿಕ್ರಮಾದಿತ್ಯನು ಪಟ್ಟವೇರಿದನು.

ಚಾಲುಕ್ಯ ವಿಕ್ರಮವರ್ಷ ಆರಂಭ. ವಿಜ್ಞಾನೇಶ್ವರ ಹಾಗೂ ಬಿಲ್ಹಣ ಇವರು ಆರನೇ ವಿಕ್ರಮಾದಿತ್ಯನ ಆಸ್ಥಾನಪಂಡಿತರಾಗಿದ್ದರು.

೧೧೫೫ ಕಳಚೂರಿ ಬಿಜ್ಜಳ ಕಲ್ಯಾಣದಲ್ಲಿ ಪ್ರಾಧಾನ್ಯತೆ ತಳೆದು ಮೂರನೇ ತೈಲಪ ಹೆಸರಿನಲ್ಲಿ ಆಡಳಿತ ನಿರ್ವಹಿಸಲಾರಂಭಿಸಿದನು.

೧೧೫೭ ಕಳಚೂರಿ ಬಿಜ್ಜಳ ತನ್ನ ಹೆಸರಿನಲ್ಲಿ ಆಳಲಾರಂಭಿಸಿದ ಕಾಕತೀಯರ ಏಖೇಳಿ (ಇಂದಿನ ಜಹಿರಾಬಾದ)ವರೆಗೆ ರಾಜ್ಯ ವಿಸ್ತಾರಗೊಂಡಿತ್ತು.

೧೧೬೨ ಬಲದೇವ ಮಂತ್ರಿಯ ನಿಧನಾನಂತರ ಆ ಸ್ಥಾನಕ್ಕೆ ಬಿಜ್ಜಳನು ಬಸವೇಶ್ವರನನ್ನು ತನ್ನ ಮಂತ್ರಿಯನ್ನಾಗಿ ನೇಮಿಸಿಕೊಂಡನು. ಕಲ್ಯಾಣದಲ್ಲಿ ಶರಣ ಚಳುವಳಿ, ಅನುಭವ ಮಂಟಪ ಸ್ಥಾಪನೆ, ವಚನ ಸಾಹಿತ್ಯ ರಚನೆ, ಅಲ್ಲಮಪ್ರಭುಗಳಿಂದ ಶೂನ್ಯ ಸಿಂಹಾಸನ ಆರೋಹಣ.

೧೧೬೮ ಕಲ್ಯಾಣ ಕ್ರಾಂತಿ. ಬಸವೇಶ್ವರರಿಂದ ಕಲ್ಯಾಣ ನಿರ್ಗಮನ, ಕಳಚೂರಿ ಪತನ

೧೧೮೧ ಚಾಲುಕ್ಯ ಮೂರನೇ ತೈಲಪನ ಮಗ ನಾಲ್ಕನೇ ಸೋಮೇಶ್ವರನಿಂದ ಕಳಚೂರಿಗಳ ಪತನ

೧೧೮೮ ಹೊಯ್ಸಳ ಎರಡನೇ ಬಲ್ಲಾಳನಿಂದ ಚಾಲುಕ್ಯರ ಮೇಲೆ ದಾಳಿ, ಯಾದವ ಬಿಲ್ಲಮ ದಾಳಿ ನಡೆಸಿ ನಾಲ್ಕನೇ ಸೋಮೇಶ್ವರನನ್ನು ಕಲ್ಯಾಣದಿಂದ ಹೊರದೂಡಿದ. ಸೋಮೇಶ್ವರನು ಬನವಾಸಿ ಯತ್ತ ಹೋದ. ಕಲ್ಯಾಣಿ ಚಾಲುಕ್ಯರ ಆಳ್ವಿಕೆ.

ಕಲ್ಯಾಣಿ ಸಾಮ್ರಾಜ್ಯ ಮೂರು ಪ್ರಮುಖ ರಾಜ್ಯಗಳಲ್ಲಿ ಹಂಚಿ ಹೋಯಿತು. ದೇವಗಿರಿಯ ಯಾದವರು, ಓರಂಗಲ್ಲಿನ ಕಾಕತೀಯರು ಮತ್ತು ದ್ವಾರಸಮುದ್ರದ ಹೊಯ್ಸಳರು.

೧೧೯೧ ಐದನೇ ಬಿಲ್ಲಮನು ದೇವಗಿರಿ ಪಟ್ಟಣವನ್ನು ಸ್ಥಾಪಿಸಿ ಅದನ್ನು ಯಾದವರ ರಾಜ್ಯದ ರಾಜಧಾನಿಯನ್ನಾಗಿಸಿದನು.

ಯಾದವರು ಹಾಗೂ ಕಾಕತೀಯರ ನಡುವೆ ಯುದ್ಧಗಳು

೧೨೬೧-೧೨೭೧ ದೇವಗಿರಿಯಲ್ಲಿ ಯಾದವ ಮಹಾದೇವನ ಆಳ್ವಿಕೆ.

೧೨೬೧-೧೨೯೫ ಕಾಕತೀಯ ಗಣಪತಿ ಮಗಳು ರುದ್ರಾಂಬಳನ್ನು ಸೋಲಿಸಿದನು.

ನಂತರ ಸಿಂದ ಭೈರವನ ಸಹಾಯದೊಂದಿಗೆ ರುದ್ರಾಂಬ ಯಾದವ ಮಹಾದೇವನನ್ನು ಸೋಲಿಸಿ ಬೇಡದ (ಬೆಡಣದ) ಕೋಟಿ ಬೀದರ ಕೋಟೆಯನ್ನು ಕಾಕತೀಯ ರಾಜ್ಯದ ಭಾಗವಾಗಿಸಿದಳು.

೧೨೯೫ ರುದ್ರಾಂಬಳು ತನ್ನ ಮೊಮ್ಮಗ ಪ್ರತಾಪರುದ್ರದೇವನನ್ನು ೧೨೮೦ ರಲ್ಲಿಯೇ ಯುವರಾಜನನ್ನಾಗಿ ನೇಮಿಸಿದಳು. ೧೨೯೫ ರಲ್ಲಿ ಪಟ್ಟಕ್ಕೆ ಬಂದ ಕಾಕತೀಯ ಪ್ರತಾಪರುದ್ರನು ತನ್ನ ರಾಜ್ಯದ ಆಡಳಿತವನ್ನು ನಾಯಕರ ನಡುವೆ ವಿಭಾಗಗಳನ್ನಾಗಿ ಹಂಚಿದನು.

೧೨೯೬ ಅಲಾವುದ್ದೀನ ಖಿಲ್ಜಿಯು ದೇವಗಿರಿಯ ಮೇಲೆ ದಾಳಿ ಮಾಡಿ ಅಪಾರ ಸಂಪತ್ತಿನ ಸುಲಿಗೆ ಮಾಡಿದ. ಯಾದವರ ರಾಮಚಂದ್ರ ನಿಗೆ ರಾಜ್ಯಉಳಿಯಿತಾದರೂ ಸ್ವಾತಂತ್ರ್ಯ ಉಳಿಯಲಿಲ್ಲ. ಆತನ ಮಗ ಶಂಕರದೇವನು ಸೆಣಸಾಡಿದನಾದರೂ ಸ್ವಾತಂತ್ರ್ಯ ಉಳಿಸಿಕೊಳ್ಳಲು ಆಗಲಿಲ್ಲ.

೧೩೦೭ ದೇವಗಿರಿ ದಕ್ಷಿಣ ಭಾರತದಲ್ಲಿ ಮುಸ್ಲಿಂ ನೆಲೆ ಆಯಿತು.

೧೩೦೯ ಅಲ್ಲಾವುದ್ದೀನನು ಕಾಫುರನ ನೇತೃತ್ವದಲ್ಲಿ ಸೈನ್ಯ ಕಳುಹಿಸಿದನು.

ಜನವರಿ ೧೩೧೦ ಪ್ರತಾಪ ರುದ್ರದೇವನು ಅಪಾರ ಸಂಪತ್ತು ನೀಡಿ ಶಾಂತಿ ಒಪ್ಪಂದ ಮಾಡಿಕೊಂಡನಲ್ಲದೆ ಸುಲ್ತಾನನಿಗೆ ವಾರ್ಷಿಕ ನಿಗದಿತ ಕಾಣಿಕೆ ಕಳುಹಿಸುತ್ತಿರುವುದಾಗಿ ಒಪ್ಪಿಕೊಂಡ.

೧೩೧೨ ಯಾದವ ರಾಮಚಂದ್ರನ ನಂತರ ಪಟ್ಟಕ್ಕೆ ಬಂದ ಆತನ ಪುತ್ರ ಶಂಕರದೇವ ಪರಕೀಯರ ಆಳ್ವಿಕೆಯಿಂದ ಸ್ವಾತಂತ್ರ್ಯ ಘೋಷಿಸಿಕೊಂಡ. ಆದರೆ ಅಲ್ಲಾವುದ್ದೀನನಿಂದ ಕಳುಹಿಸಲ್ಪಟ್ಟ ಸೇನೆಯೊಂದಿಗಿನ ಯುದ್ಧದಲ್ಲಿ ಕೊಲ್ಲಲ್ಪಟ್ಟ. ಯಾದವರ ರಾಜ್ಯವು ಖಿಲ್ಜಿ ಆಳ್ವಿಕೆಯ ಭಾಗವಾಯಿತು. ಯಾದವ ರಾಮ ಚಂದ್ರನ ಅಳಿಯ ಹರಪಾಲದೇವನು ಸ್ವಾತಂತ್ರ್ಯಕ್ಕಾಗಿ ನಡೆಸಿದ ಪ್ರಯತ್ನ ಕೂಡ ವಿಫಲವಾಯಿತು.

೧೩೧೬ ಸುಲ್ತಾನ ಅಲ್ಲಾವುದ್ದೀನನ ಮರಣದ ನಂತರ ಕಾಕತೀಯ ಪ್ರತಾಪರುದ್ರನು ದೆಹಲಿಯ ಸುಲ್ತಾನನಿಗೆ ಹಣದ ವಂತಿಗೆ ಸಲ್ಲಿಸುವುದನ್ನು ನಿಲ್ಲಿಸಿ ಸ್ವಾತಂತ್ರ್ಯ ಘೋಷಿಸಿಕೊಂಡ.

೧೩೧೮ ಕುತುಬುದ್ದಿನ ಮುಬಾರಕ ಶಾಹನು ದಖ್ಖನಿನಲ್ಲಿ ಆಳ್ವಿಕೆಯನ್ನು

ಪುನಃ ಸ್ಥಾಪಿಸಲು ಖುಸ್ರೋಖಾನನ ನೇತೃತ್ವದಲ್ಲಿ ಸೇನೆ ರವಾನಿಸಿದ. ಇದರಿಂದ ಕಾಕತೀಯರಿಗೆ ಹಿನ್ನಡೆಯಾಯಿತು. ಬೀದರ ಕೋಟೆಸಹಿತ ಇತರ ಸ್ಥಳಗಳು ಖುಸ್ರೋಖಾನನ ವಶವಾದವು.

೧೩೨೦ ಗಾಝಿ ಮಲ್ಲಿಕನು ದೆಹಲಿಯ ಗಿಯಾಸುದ್ದಿನ ತುಘಲಕನ ಹೆಸರಿನಲ್ಲಿ ಪಟ್ಟಕ್ಕೆ ಬಂದನು. ಪ್ರತಾಪರುದ್ರನು ಬೀದರಕೋಟೆ ಹಾಗೂ ಇತರ ಸ್ಥಳಗಳನ್ನು ಪುನಃ ವಶಪಡಿಸಿಕೊಂಡು ದೆಹಲಿಗೆ ಹಣ ಕಳುಹಿಸುವುದನ್ನು ನಿಲ್ಲಿಸಿದ.

೧೩೨೨ ಗಿಯಾಸುದ್ದಿನನ್ನು ತನ್ನ ಮಗ ಉಲ್ಫ ಖಾನ್ (ಮುಂದೆ ಮಹ್ಮದಬಿನ್ ತುಘಲಕ) ನನ್ನು ದಖ್ಖನಿಗೆ ತನ್ನ ವೈಸರಾಯ ನನ್ನಾಗಿಸಿ ವಾರಂಗಲ್ಲಿನ ಎರಡನೇ ಪ್ರತಾಪರುದ್ರನನ್ನು ಮಣಿಸಲು ಕಳುಹಿಸಿದನು. ವಾರಂಗಲ್ಲಿಗೆ ಹೋಗುವ ದಾರಿ ಯಲ್ಲಿನ ತೆಲಂಗಾಣ ಸೀಮೆಯಲ್ಲಿ ಪ್ರಮುಖ ಕೋಟೆಗಳಾಗಿದ್ದ ಬೀದರ ಹಾಗೂ ಬಸವಕಲ್ಯಾಣ ಇವುಗಳನ್ನು ವಶಪಡಿಸಿ ಕೊಂಡನಲ್ಲದೆ ಅಲ್ಲಿ ಕಾವಲಿಗಾಗಿ ಸೇನೆಯೊಂದಿಗೆ ತನ್ನ ನಂಬಿಕೆಯ ಅಧಿಕಾರಿಗಳನ್ನು ನೇಮಿಸಿ ಇರಿಸಿದ.

೧೩೨೩ ಎರಡನೇ ಪ್ರತಾಪ ರುದ್ರನ ಸೋಲಿನೊಂದಿಗೆ ನೊಂದು ಅಪ್ಪಿದ ಸಾವಿನೊಂದಿಗೆ ವಾರಂಗಲ್ಲಿನ ಕಾಕತೀಯರ ಆಳ್ವಿಕೆ ಕೊನೆಗೊಂಡಿತು. ಮುಂದೆ ಅಲ್ಲಲ್ಲಿ ಚಿಕ್ಕಪುಟ್ಟ ರಾಜ್ಯಗಳು ಹುಟ್ಟಿಕೊಂಡವು.

(ಕ್ರಿ.ಶ. ೧೧೮೮ರಲ್ಲಿ ಬೀದರ ಸಹಿತ ಕಲ್ಯಾಣ ಪ್ರದೇಶ ಯಾದವರ ವಶವಾಯಿತು. ಬೀದರ ಪಟ್ಟಣ ಪ್ರಾಧಾನ್ಯತೆ ತಳೆಯಲಾರಂಭಿಸಿತು. ಬೀದರ ಮೈಲಾರ ಪ್ರದೇಶ ದೇವಗಿರಿಯ ಯಾದವರು ಹಾಗೂ ಓರಂಗಲ್ಲಿನ ಕಾಕತೀಯರ ನಡುವೆ ರಣರಂಗವಾಯಿತು. ಸಿಂದ ಮನೆತನದ ಭೈರವನ ಸಹಾಯ ದಿಂದ ಓರಂಗಲ್ಲಿನ ಕಾಕತೀಯರು ಬೀದರ್‌ನಿಂದ ಯಾದವ ರನ್ನು ಹೊರದೂಡಿದರು. ಭವ್ಯ ಮಹಾದೇವ ಮಂದಿರ ನಿರ್ಮಾಣಗೊಂಡಿತು. ಅದರ ಸುತ್ತಲೂ ಹಲವಾರು ಬಡಾವಣೆಗಳೊಂದಿಗೆ ಬೇಡಣದ ಕೋಟೆ ಭವ್ಯತೆ ತಳೆಯಿತು. ಕಾಕತೀಯರ ಕೋಟೆ ನಿರ್ಮಾಣಗೊಂಡಿತು. ಗಡಿಭಾಗದ

ರಕ್ಷಣ ಕೋಟೆಯೂ ಅದಾಗಿತ್ತು. ೧೩೧೮ರಲ್ಲಿ ಬೀದರಕೋಟೆ ದೆಹಲಿಯ ಕುತುಬುದಿನ್ ಮುಬಾರಕ ಶಾಹನ ವಶವಾಯಿತು. ೧೩೨೦ರಲ್ಲಿ ಬೀದರ ಕೋಟೆ ತುಘಲಕನ ವಶವಾಯಿತು. ಅಧಿಕಾರಿ ಸಹಿತ ಸೇನಾ ನೆಲೆಯ ಕೇಂದ್ರವಾಯಿತು. ಬೀದರ ಪಟ್ಟಣದ ಇತಿಹಾಸದಲ್ಲಿ ೧೩೨೨ರಿಂದ ಮತ್ತೊಂದು ಹೊಸ ಅಧ್ಯಾಯ ಪ್ರಾರಂಭವಾಯಿತು.)

೧೩೨೪-೨೫ ದೆಹಲಿಯಲ್ಲಿ ಮೊಹ್ಮದ ಬಿನ್ ತುಘಲಕ್ ಪಟ್ಟಕ್ಕೆ ಬಂದನು.

೧೩೩೬ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ.

೧೩೪೦ ದೇವಗಿರಿ ದೌಲತಾಬಾದ ಆಗಿ ರಾಜಧಾನಿಯಾಯಿತು.

೧೩೪೧ ಮಹ್ಮದ ಬಿನ್ ತುಘಲಕನು ಮುಲ್ತಾನಿನ ಶಾಹಬುದ್ದೀನನಿಗೆ ನುಸರತ ಖಾನ ಎಂಬ ಬಿರುದನ್ನು ನೀಡಿ ವಾರ್ಷಿಕ ಒಂದು ಕೋಟಿ ಕಂದಾಯ ತನ್ನ ಖಜಾನೆಗೆ ಭರಿಸುತ್ತಿರಬೇಕಾದ ಕರಾರಿನೊಂದಿಗೆ ಬೀದರ ಹಾಗೂ ಅದರ ಅಧೀನ ಪ್ರದೇಶವನ್ನು ವಹಿಸಿಕೊಟ್ಟನು. ಬೀದರ ಪ್ರಾಂತೀಯ ರಾಜಧಾನಿಯಾಯಿತು.

ಅದೇ ಸಮಯದಲ್ಲಿ ಕುತಲುಘು ಖಾನನಿಗೆ ದೌಲತಾಬಾದನ ಸರಕಾರ ವಹಿಸಿಕೊಡಲಾಯಿತು.

೧೩೪೫ ಬೀದರಿನ ನುಸರತ ಖಾನ್ ಕಂದಾಯ ಸಲಿಕೆ ಒಪ್ಪಂದ ಪಾಲಿಸಲಿಲ್ಲ, ಅಷ್ಟೇ ಅಲ್ಲ ದಂಗೆಯೂ ಎದ್ದ. ತುಘಲಕ್ ನುಸರತಖಾನನನ್ನು ತೆಗೆದುಹಾಕಲು ದೌಲತಾಬಾದಿನಲ್ಲಿದ್ದ ಕುತಲಘು ಖಾನನಿಗೆ ತಿಳಿಸಿದ. ನುಸರತ ಖಾನನನ್ನು ಅಧಿಕಾರದಿಂದ ತೆಗೆದುಹಾಕಲಾಯಿತು.

ಆದರೆ ದಖ್ಖನಿನಲ್ಲಿನ ಅರಾಜಕತೆ ಮುಂದುವರೆಯಿತು.

೧೩೪೬ ದೌಲತಾಬಾದ್‌ನಿಂದ ಗುಲಬರ್ಗಾದ ಕಂದಾಯ ವಸೂಲಿಗೆಂದು ಕಳುಹಿಸಲ್ಪಟ್ಟ ಅಮೀರ ಅಲಿ ಅಧಿಕಾರಿಯವರು ಸೈನ್ಯ ಒಂದನ್ನು ಕಟ್ಟಿಕೊಂಡು ಗುಲಬರ್ಗಾ ಮತ್ತು ಬೀದರ ಇವುಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಮೊಹಮ್ಮದ ಬಿನ್ ತುಘಲಕನು ದಂಗೆ ಅಡಗಿಸಲು ಮತ್ತೆ ಕುತಲುಘು ಖಾನನನ್ನು ನಿಯೋಜಿಸಿದನು. ಬೀದರ್‌ನಲ್ಲಿ ಯುದ್ಧ ಜರುಗಿತು. ಸೋತ

ಅಮೀರ ಸೆರೆ ಹಿಡಿಯಲ್ಪಟ್ಟು ಬಂಧಿಯಾಗಿ ದೆಹಲಿಗೆ ಕಳುಹಿಸಲ್ಪಟ್ಟನು. ೧೩೪೫ರಲ್ಲಿ ಕುತಲುಘ ಖಾನನು ಹಿಂದಕ್ಕೆ ಕರೆಯಲ್ಪಟ್ಟು ಆ ಸ್ಥಳಕ್ಕೆ ಆತನ ಸಹೋದರ ಐನ ಉಲ್ ಮುಲ್ಕ ನೇಮಿಸಲ್ಪಟ್ಟ. ಮುಂದೆ ಸ್ವಲ್ಪ ಸಮಯದ ನಂತರ ಇಮಾದ ಉಲ್ ಮುಲ್ಕ ದಖನ್ನಿನ ವೈಸರಾಯ ಆಗಿ ನೇಮಕಗೊಂಡ. ತುಘಲಕನ ಸಾಮ್ರಾಜ್ಯವು ೨೩ ಅಕಲಿಮ (ಪ್ರಾಂತಗಳಲ್ಲಿ) ವಿಭಜಿಸಲ್ಪಟ್ಟಿತ್ತು. ಬೀದರ ಅಕಲಿಮ ಅವುಗಳಲ್ಲಿ ಒಂದು. ಪ್ರತಿಯೊಂದು ಪ್ರಾಂತವು ಶಿಕ್ (ಗ್ರಾಮೀಣ ಜಿಲ್ಲೆ) ಮದಿನಾ (ಪಟ್ಟಣ ಜಿಲ್ಲೆ)ಗಳಲ್ಲಿ ವಿಭಜಿಸಲ್ಪಟ್ಟಿದ್ದವು. ಪ್ರತಿ ಶಿಕ್ ಸಾವಿರ ಗ್ರಾಮಗಳನ್ನೊಳಗೊಂಡ ಹಜಾರಿಗಳಲ್ಲಿ ಮತ್ತು ಹಜಾರಿಯೊಂದು ಸದ ಅಂದರೆ ನೂರು ಗ್ರಾಮಗಳ ಘಟಕಗಳಲ್ಲಿ ವಿಭಜಿಸಲ್ಪಟ್ಟಿತ್ತು. ಗ್ರಾಮಗಳಲ್ಲಿ ಮುತಸರಫ ಚೌದರಿ ಪಠವಾರಿ ಮುಂತಾದವರು ಆಡಳಿತ ನೋಡಿಕೊಳ್ಳುತ್ತಿದ್ದರು. ಆದರೆ ಆಡಳಿತದ ಪ್ರಮುಖ ಜವಾಬ್ದಾರಿ ಸದಾಹ ಅಮೀರರ ಮೇಲೆ ಇದ್ದಿತ್ತು. ಅವರು ಕಂದಾಯ ಹಾಗೂ ಮಿಲಿಟರಿ ಅಧಿಕಾರಿಗಳೆರಡೂ ಆಗಿದ್ದರು. ೧೩೪೭ ತುಘಲಕನ ಆಳ್ವಿಕೆ ಹಾಗೂ ಸದಾಹ ಅಮೀರರು ಅವರುಗಳು ದೌಲತಾಬಾದನ್ನೇ ತಮ್ಮ ವಶಕ್ಕೆ ತೆಗೆದುಕೊಂಡರು. ಅವರೆಲ್ಲ ಕೂಡಿ ತಮ್ಮಲ್ಲಿಯೇ ಓರ್ವ ಇಸ್ಮಾಯಿಲ ಮುಖ ಎನ್ನುವಾತನನ್ನು ನಸಿರುದಿನ ಶಾಹ ಎಂಬ ಬಿರುದಿನೊಂದಿಗೆ ದಖ್ಖನಿನ ಸುಲ್ತಾನನೆಂದು ಆರಿಸಿ ಘೋಷಿಸಿಕೊಂಡರು. ಇಸ್ಮಾಯಿಲ ಮುಖನು ತನ್ನ ಬೆಂಬಲಿಗರಿಗೆ ಜಾಗೀರು ಹಾಗೂ ಬಿರುದುಗಳನ್ನು ನೀಡಿದನು. ಹಸನ ಎನ್ನುವಾತನಿಗೆ ಜಫಾರಖಾನ್ ಎಂಬ ಬಿರುದು ಹಾಗೂ ಜಾಗೀರು ದೊರೆಯಿತು.

ಇಸ್ಮಾಯಿಲ ಮುಖ (ನಸಿರುದ್ದೀನ್)ನು ತುಘಲಕನ ಸೈನ್ಯದಿಂದ ಸುತ್ತುವರಿಯಲ್ಪಟ್ಟಿದ್ದ. ಕೆಲ ಅಮೀರರು ಗುಲಬರ್ಗಾ ಕಡೆ ಧಾವಿಸಿದರು. ಮುಂದೆ ನಡೆದ ಘಟನೆಗಳಲ್ಲಿ ತುಘಲಕನಿಗೆ ಅನಿವಾರ್ಯವಾಗಿ ದೆಹಲಿಯತ್ತ ಧಾವಿಸಿ ಹೋಗಬೇಕಾಯಿತು. ಅವನ ಸೇನೆ ಹಿಂದಕ್ಕೆ ಸರಿಯಬೇಕಾಯಿತು. ಜಾಫರಖಾನ (ಹಸನ)ನು ೨೦ ಸಾವಿರ ಕುದುರೆಗಳ ಸೈನ್ಯದೊಂದಿಗೆ ಬೀದರ್‌ನತ್ತ ಧಾವಿಸಿದ. ಆ ಕೋಟೆ ತುಘಲಕನ ಪರ ಅಧಿಕಾರಿ

ಇಮಾದುಲ್ ಮುಲ್ಕನ ವಶದಲ್ಲಿತ್ತು. ತೆಲಂಗಾಣ ಮತ್ತು ದೌಲತಾಬಾದ್‌ನಿಂದ ಹೆಚ್ಚಿನ ಪಡೆ ಬಂದ ನಂತರ ಬೀದರ ಕೋಟೆಯ ಮೇಲೆ ದಾಳಿಯಿಟ್ಟನು. ಯುದ್ಧ ಒಂದೇ ದಿನದಲ್ಲಿ ಇಮಾದುಲ್‌ಮುಲ್ಕನ ಸಾವಿನೊಂದಿಗೆ ಮುಗಿಯಿತು. ಜಾಫರ ಖಾನ ದೌಲತಾಬಾದ ತಲುಪಿದ. ಆತನ ನಾಯಕತ್ವ ಶೌರ್ಯ ಎಲ್ಲಾ ಗಮನ ಸೆಳೆಯಿತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ನಸುರುದ್ದೀನ್ ಇಸ್ಮಾಯಿಲ ಮುಖನು ಪ್ರಮುಖ-ಅಧಿಕಾರಿಗಳ ಸಭೆ ಕರೆದು ತಾನು ನಿವೃತ್ತನಾಗುವ ಇಚ್ಛೆ ವ್ಯಕ್ತಪಡಿಸಿದನಲ್ಲದೆ ತನ್ನ ಪರವಾಗಿ ಜಾಫರಖಾನನ ಹೆಸರನ್ನು ಸೂಚಿಸಿದ. ಸಭಿಕರೆಲ್ಲರೂ ಒಮ್ಮತದಿಂದ ಅದಕ್ಕೆ ಸಮ್ಮತಿಸಿದರು.

೧೩೪೭ ಇತಿಹಾಸಕಾರ ಫೇರಿಸ್ತಾ ಬರೆದಿರುವಂತೆ ಶುಕ್ರವಾರ ಆಗಸ್ಟ್ ೧೨ ೧೩೪೭ರಂದು ಹಸನನ ಶಿರದ ಮೇಲೆ ಅಲ್ಲಾವುದ್ದೀನ ಹಸನ ಬಹಮನ ಷಾಹ ಬಿರುದಿನೊಂದಿಗೆ ಕಿರೀಟ ಇರಿಸಲ್ಪಟ್ಟು ಸಿಂಹಾಸನಾರೋಹಣ ಜರುಗಿತು. ಪೂರ್ಣ ಬಿರುದು - ''ಸಿಕಂದರ ಎ-ಸಾನಿ ಅಬುಲ ಮುಜಫರ ಸುಲ್ತಾನ ಅಲ್ಲಾವುದ್ದೀನ ಹಸನ ಷಾಹ ಅಲ್-ವಲಿ-ಅಲ್ ಬಹಮನಿ'' ಆಗಿದ್ದಿತು. ಆತನು ತನ್ನನ್ನು ಹಸನಗಂಗು ಬಹಮನಿ ಎಂದು ಕರೆದುಕೊಂಡು ಹಿಂದೆ ದೆಹಲಿಯಲ್ಲಿ ತನಗೆ ಒಡೆಯನಾಗಿದ್ದ ಗಂಗು ಬ್ರಾಹ್ಮಣನಿಗೆ ಮಾತು ಕೊಟ್ಟಂತೆ ನಡೆದುಕೊಂಡ. ಅಷ್ಟೇ ಅಲ್ಲ ತನ್ನ ಖಜಾನೆಯ ನಿರ್ವಹಣಕಾರ್ಯವನ್ನು ಆತನಿಗೆ ಗೌರವಪೂರ್ವಕವಾಗಿ ವಹಿಸಿಕೊಟ್ಟ. ದಖ್ಖನಿನಲ್ಲಿ ಪ್ರಚಲಿತ ಈ ಸಂಗತಿಯನ್ನು ಇತಿಹಾಸಕಾರ ಫೆರಸ್ತಾ ತನ್ನ ಕೃತಿಯಲ್ಲಿ ದಾಖಲಿಸಿರುತ್ತಾರೆ.

ಕಲ್ಬುರ್ಗಿಯ ಹೆಸರು (ಅ)ಹಸುನಾಬಾದ ಎಂದಾಗಿ ಪರಿವರ್ತಿತಗೊಂಡು ದಖ್ಖನಿನ ಪ್ರಥಮ ಮಹ್ಮದೀಯ ಅರಸನ ರಾಜಧಾನಿಯಾಯಿತು.

ಬೀದರ ರಾಜ್ಯದ ನಾಲ್ಕು ಪ್ರಾಂತಗಳಲ್ಲಿ ಒಂದು ಪ್ರಾಂತ (ತರ್ಫೆಗೆ) ರಾಜಧಾನಿಯಾಯಿತು. ಅದರ ರಾಜ್ಯಪಾಲರಿಗೆ ಅರ್ಖುಮ-ಎ-ಹುಮಾಯುನ (ಶುಭಕಾರಕ ಮುಖ್ಯಸ್ಥ) ಎಂಬ ಬಿರುದು ನೀಡಲಾಯಿತು. ಪ್ರಾಂತದ ರಾಜಧಾನಿಯಾಗಿ

ಗುಲಬರ್ಗಾ ನಂತರ ಎರಡನೇ ಪ್ರಮುಖ ಪಟ್ಟಣವಾಗಿ ಬೆಳೆಯಲಾರಂಭಿಸಿತ್ತು.

ಬೀದರ ಇಂದೋರ ಕೌಳಾಸ ಮತ್ತು ತೆಲಂಗಾಣದ ಕೆಲಭಾಗ ಗಳು ಬೀದರ ಪ್ರಾಂತದ ವ್ಯಾಪ್ತಿಗೆ ಸೇರಿದವು.

೧೩೫೮ ಅಲ್ಲಾವುದ್ದೀನ ಹಸನನ ನಿಧನ, ಒಂದನೇ ಮಹ್ಮದ ಶಾಹ ಬಹಮನಿ ಪಟ್ಟಕ್ಕೆ ಬಂದ. ತನ್ನ ಮಾವನಾಗಿದ್ದ ಮಲ್ಲಿಕ ಸೈಫೋದ್ದಿನ ಘೋರಿಯನ್ನು ತನ್ನ ಪ್ರಧಾನಮಂತ್ರಿಯಾಗಿ ಮಾಡಿಕೊಂಡ.

ಬೀದರ ಪ್ರಾಂತದ ಅಝುಮ-ಎ-ಹುಮಾಯೂನನನ್ನು ಓರಂಗಲ್ಲಿನ ನಾಯಕ ಕಾಕತೀಯ ವಿನಾಯಕನ ಮೇಲೆ ದಾಳಿ ಇಡಲು ನಿಯೋಜಿಸಿದ. ನಾಯಕನು ಸೋತು ಗೋವಳ ಗೊಂಡ ಪ್ರದೇಶವನ್ನು ನೀಡಿದನಲ್ಲದೆ ಅಪಾರ ಹಣ ಕೂಡ ಕೊಟ್ಟನು. ಅಝುಮ-ಎ-ಹುಮಾಯೂನ ಗೋವಳಗೊಂಡ ರಾಜ್ಯಪಾಲನಾಗಿ ನೇಮಕಗೊಂಡ. ಮೂಲತಃ ಮಹಮ್ಮದ ತುಘಲಕನಿಗೆಂದು ತಯಾರಿಸಲ್ಪಟ್ಟ ಬೆಲೆಬಾಳುವ ರತ್ನ ಜಡಿತ ತಃಖ್ತೆ ಫೆರೋಜಾ ಸಿಂಹಾಸನವನ್ನು ಓರಂಗಲ್ಲಿನ ಅರಸನು ಒಂದನೇ ಮಹಮ್ಮದನಿಗೆ ಅರ್ಪಿಸಿದ. ಅದನ್ನು ಪಡೆದ ಒಂದನೇ ಮಹ್ಮದ ಕಲ್ಬುರ್ಗಿಯಲ್ಲಿ ಹಬ್ಬವನ್ನು ಏರ್ಪಡಿಸಿದ.

ಕೌಳಾಸನಿಂದ ವಾಪಸು ಗುಲ್ಬರ್ಗಾಕ್ಕೆ ಹೋಗುವಾಗ ಮಹ್ಮದ ಶಾಹ ೩ ತಿಂಗಳು ಕಾಲ ಬೀದರಿನಲ್ಲಿ ವಾಸ್ತವ್ಯ ಹೂಡಿದ. ಅದಕ್ಕೆ ಬೀದರಿನ ಹವಾಗುಣ ಮತ್ತು ಸುಂದರ ಪರಿಸರ ಕಾರಣವಾಗಿದ್ದಿತು.

ಒಂದನೇ ಮಹ್ಮದ ಶಾಹನ ಆಳ್ವಿಕೆ ಕಾಲದಲ್ಲಿ ಇರಾನ್ ತುರ್ಕಿ ಮತ್ತು ಅರಬ್ ದೇಶಗಳಿಂದ ಅನೇಕರು ಬಂದುದರಿಂದ ಬಹಮನಿ ರಾಜ್ಯದಲ್ಲಿ ಹೊಸ ರಾಜಕೀಯ ಬೆಳವಣಿಗೆ ಯಾಯಿತು. ಅಫಾಕಿಗಳು (ಹೊಸದಾಗಿ ಹೊರಗಿನಿಂದ ಬಂದವರು) ಮತ್ತು ದಖ್ಖನಿಗಳು (ಹೊಸದಾಗಿ ಹೊರಗಿನಿಂದ ಬಂದವರಿಗಿಂತ ಮುನ್ನ ಇಲ್ಲಿ ಇದ್ದವರು) ಹೀಗೆ ಎರಡು ಗುಂಪುಗಳಾಗಿ ಸಂಘರ್ಷ ಏರ್ಪಟ್ಟಿತ್ತು. ಹಬ್ಶಿಗಳು ಮುಂದೆ ದಖ್ಖನಿಯವರೊಂದಿಗೆ ಸೇರಿದರು.

೧೩೭೫ ಒಂದನೇ ಮಹಮ್ಮದಶಾಹನ ನಂತರ ಮುಜಾಹಿದನು ಪಟ್ಟಕ್ಕೆ ಬಂದನು.

೧೩೭೮ ದಾವುದಖಾನನು ಮುಜಾಹಿದನ ಹತ್ಯೆಗೈದು ಪಟ್ಟಕ್ಕೆ ಬಂದ. ಆದರೆ ೩೫ ದಿವಸಗಳೊಳಗಾಗಿ ಹತ್ಯೆಗೊಂಡ. ಎರಡನೇ ಮಹಮ್ಮದ ಪಟ್ಟಕ್ಕೆ ಬಂದ. ಆತನು ಸಾಹಿತ್ಯಪ್ರೇಮಿಯಾಗಿದ್ದನು. ಈತನ ಆಡಳಿತ ಕಾಲಾವಧಿಯಲ್ಲಿ ಬೀದರಿನಲ್ಲಿ ಅನಾಥರಿಗಾಗಿ ಶಾಲೆಗಳು ತೆರೆಯಲ್ಪಟ್ಟವು.

೧೩೯೭ ಎರಡನೇ ಮಹಮ್ಮದನ ಮಗ ಘಿಯಾಸುದ್ದಿನ್ ಪಟ್ಟವೇರಿದ. ತಗಲಚಿನ ಎನ್ನುವ ಈತನನ್ನು ಕೊಂದು ಶಮಶುದ್ದಿನ್ ದಾವುದನನ್ನು ಪಟ್ಟಗಟ್ಟಿ ತನ್ನನ್ನು ಮಲ್ಲಿಕ ನಾಯಬ ಎಂದಾಗಿ ಘೋಷಿಸಿಕೊಂಡನು. ಆದರೆ ನಡೆದದ್ದು ೫ ತಿಂಗಳು ಮಾತ್ರ. ಫಿರೋಝುಶಾಹನು ಶಮಶೋದ್ದಿನ್‌ನನ್ನು ಸೋಲಿಸಿ ಕಣ್ಣುಗಳನ್ನು ಕೀಳಿಸಿ ಬೀದರಕೋಟೆಯಲ್ಲಿ ಬಂಧಿಯಾಗಿ ಇಟ್ಟಿದನು. ಈತನ ಆಳ್ವಿಕೆಯ ಕಾಲದಲ್ಲಿ ಅನೇಕ ವಿದ್ವಾಂಸರು ಗುಲ್ಬರ್ಗಾಕ್ಕೆ ಬಂದರು. ಭೀಮಾ ನದಿಯ ದಂಡೆ ಮೇಲೆ ಹೊಸ ಪಟ್ಟಣ ನಿರ್ಮಿಸಿ ಅದಕ್ಕೆ ಫಿರೋಜಾಬಾದ ಎಂದಾಗಿ ಹೆಸರಿಸಿದನು.

೧೪೦೦ ಸಂತ ಖ್ವಾಜಾ ಸೈಯ್ಯದ್ ಮಹಮ್ಮದ ಗೆಸುದರಾಜ್ ಅವರು ದೆಹಲಿಯಿಂದ ರಾಜಧಾನಿ ಗುಲಬರ್ಗಾಕ್ಕೆ ಬಂದರು.

ಸುಲ್ತಾನ ಫಿರೋಜ್ ಶಾಹನ ತಮ್ಮನಾಗಿದ್ದ ಅಹ್ಮದಖಾನ್ ಮತ್ತು ಮಗ ಹಸಿನ್‌ಖಾನ್ ಇವರುಗಳಲ್ಲಿ ಯಾರು ಅರಸರಾಗಬೇಕು? ಈ ಬಗೆಗೆ ಸಂಘರ್ಷ ನಡೆದವು. ಬೀದರಿನ ಖಾನಾಪುರದ ಸಮೀಪ ಹೋಕಿಯಾರ ಮತ್ತು ಬೇಡರ ಇವರ ನೇತೃತ್ವದಲ್ಲಿ ಕಳುಹಿಸಲ್ಪಟ್ಟ ಫಿರೋಜಶಾಹನ ಸೈನ್ಯವನ್ನು ಅಹ್ಮದಖಾನ ಸೋಲಿಸಿ ಸೆಪ್ಟೆಂಬರ್ ೨೨, ೧೪೨೨ರಂದು ಗುಲಬರ್ಗಾದಲ್ಲಿ ಅಹ್ಮದ ಶಾಹ ಬಹಮನಿ ಎಂದಾಗಿ ಪಟ್ಟಕ್ಕೆ ಬಂದನು.

ಖೇರ್ಲಾದ ನರಸಿಂಗ ರಾಯನ ರಾಜ್ಯದ ಮೇಲೆ ದಾಳಿ ನಡೆಸಿ ವಿಜೇತನಾಗಿ ಗುಲ್ಬರ್ಗಾಕ್ಕೆ ಹಿಂತಿರುಗುವ ದಾರಿಯಲ್ಲಿ ಬೇಟೆಯ ಸಂತೋಷ ಅನುಭವಿಸುತ್ತ ಬಂದು ಬೀದರಿನ ನೀರಿನಿಂದ ತಣಿದು ನಿಂತ ತಾಣ ಒಂದಕ್ಕೆ ಬಂದ ಅಹ್ಮದಶಾಹನು ಅಲಿ ಅಹ್ಮದಾಬಾದ ಎಂಬ ಹೆಸರಿನ ಪಟ್ಟಣವನ್ನು ಸ್ಥಾಪಿಸಲು

ನಿರ್ಧರಿಸಿದ. ಭವನಗಳ ನಿರ್ಮಾಣವಾಯಿತು. ಹಿಂದೆ ಅಲ್ಲಿ ಇದ್ದ ಹಿಂದೂ ಕೋಟೆಯ ಜಾಗದಲ್ಲಿ ಹೊಸ ರಾಜಧಾನಿ ರಚಿತಗೊಂಡಿತ್ತು.

ಖಾನ ದೇಶದ ನಸಿರಖಾನ ಫಾರೊಕಿಯ ಮಗಳೊಂದಿಗೆ ತನ್ನ ಮಗ ಅಲ್ಲಾವುದ್ದೀನ ವಿವಾಹ ಜರುಗಿಸಿದ. ವಿವಾಹ ಅಹಮ್ಮದಾಬಾದ್ ಬೀದರ್‌ನಲ್ಲಿ ಭವ್ಯವಾಗಿ ಜರುಗಿತ್ತು.

೧೪೩೨ ಹೊಸದಾಗಿ ಬೀದರ ಕೋಟೆ ನಿರ್ಮಾಣಗೊಂಡ ನಿಮಿತ್ಯ ಸಾರ್ವಜನಿಕ ಸಂತೋಷಕೂಟಗಳು ಅಹ್ಮದಾಬಾದ ಬೀದರ್ ನಲ್ಲಿ ಜರುಗಿದವು.

ಧರ್ಮಗುರು ಶಾಹ ನಿಯಮುತ್ತುಲಾನ ಪ್ರತಿನಿಧಿ ಮುಲ್ಲಾ ಖುತಬೊದ್ದಿನ್ ಕಿರಮಾನಿ ಮೀರ ನುರುಲ್ಲಾ ಅಹ್ಮದಶಾಹನ ಆಮಂತ್ರಣ ಮೇರೆಗೆ ಬೀದರಿಗೆ ಬಂದು ನೆಲೆಸಿದ.

೧೪೩೬ ಅಹ್ಮದ್‌ಶಾಹ ವಲಿ ಬಹಮನಿಯ ನಿಧನ. ಆತನ ಹಿರಿಯ ಮಗ ಅಲ್ಲಾವುದ್ದೀನ್ ಬಹಮನಿ ಪಟ್ಟವೇರಿದ. ಬೀದರಿಗೆ ಸಮೀಪದ ಅಷ್ಟೂರದ ಬಳಿ ತನ್ನ ತಂದೆಯ ಸಮಾಧಿಯ ಮೇಲೆ ಗುಮ್ಮಜ ಒಂದನ್ನು ನಿರ್ಮಿಸಿದ. ಒಳಗಡೆ ಸುಂದರವಾಗಿ ಬಣ್ಣಗಳಿಂದ ಶೃಂಗಾರ ಮಾಡಲಾಯಿತು. ಈ ಕಲೆ ಭಾರತದಲ್ಲಿಯೇ ಏಕೈಕ ತರಹದ್ದು ಆಗಿದೆ.

ಅಲ್ಲಾವುದ್ದೀನನು ಬೀದರಿನಲ್ಲಿ ಚಿಕಿತ್ಸಾಲಯವೊಂದನ್ನು ನಿರ್ಮಿಸಿ ಅದರಲ್ಲಿ ಮುಸ್ಲಿಂ ಹಾಗೂ ಹಿಂದು ತಜ್ಞಚಿಕಿತ್ಸಕರನ್ನು ನೇಮಿಸಿದ. ಅಲ್ಲದೇ ನಿಯಮತಾಬಾದ್‌ನಲ್ಲಿ ಅರಮನೆಯೊಂದನ್ನು ನಿರ್ಮಿಸಿ ತೋಟದಿಂದ ಅಲಂಕರಿಸಿದ.

೧೪೫೩ ಗೀಲಾನನಿಂದ ಮೊಹ್ಮದ ಗವಾನ ಬೀದರಿಗೆ ಆಗಮನ.

೧೪೫೮ ಅಲ್ಲಾವುದ್ದಿನ ಬಹಮನಿಯ ಮಗ ಹುಮಾಯೂನ ಪಟ್ಟಕ್ಕೆ ಬಂದ. ವಲಕಿಲ-ಉಸ-ಸುಲ್ತಾನತ್ ಹುದ್ದೆಯನ್ನು ಖ್ವಾಜಾ ಮಹಮೂದ ಗವಾನನಿಗೆ ವಹಿಸಿಕೊಡಲಾಯಿತು.

೧೪೬೦ ಅಧಿಕಾರಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಹುಮಾಯೂನ ಅತಿ ಕ್ರೂರವಾಗಿ ವರ್ತಿಸಿದ. ತನ್ನ ತಮ್ಮನಾದ ಹುಸೇನ ಖಾನನನ್ನು ಹಸಿದ ಹುಲಿಯ ಬಾಯಿಗೆ ಕೊಟ್ಟ. ಸಂಶಯವಿಲ್ಲದ್ದವರನ್ನೆಲ್ಲಾ ಕೊಲ್ಲಿಸಿದ.

೧೪೬೧ ಹುಮಾಯೂನ ತನ್ನ ಎರಡು ವರ್ಷದ ಮಗ ನಿಜಾಂಶಾಹನನ್ನು ಪಟ್ಟಕ್ಕೆ ಕುಳ್ಳಿರಿಸಿ ತನ್ನ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ನಿದ್ದೆ ಮಾಡುತ್ತಿದ್ದಾಗ ಸ್ತ್ರೀಸೇವಕಿಯಿಂದ ಹತ್ಯೆಗೊಂಡು ತೀರಿ ಕೊಂಡಾಗ ಮಹಮ್ಮದ ಗವಾನನನ್ನು ರಾಣಿ-ತಾಯಿ ಪ್ರಧಾನ ಮಂತ್ರಿಯಾಗಿ ನೇಮಿಸಿದಳು.

ಮಾಳವದ ಮಹಮೂದ ಖಿಲ್ಜಿ ಬೀದರ ಕೋಟೆಯ ಮೇಲೆ ದಾಳಿಯಿತ್ತು, ಅನೇಕ ಕಟ್ಟಡಗಳನ್ನು ಧ್ವಂಸಗೊಳಿಸಿದ, ಅವು ಗಳನ್ನು ನಂತರ ದುರಸ್ತಿಗೊಳಿಸಲಾಯಿತು.

೧೪೬೩ ನಿಜಾಂಶಾಹ ಇದ್ದಕ್ಕಿದ್ದಂತೆ ಸಾವಿಗೀಡಾದ. ಒಂಬತ್ತು ವರ್ಷದ ಮೂರನೇ ಮಹಮ್ಮೂದಶಾಹನಿಗೆ ಪಟ್ಟಕಟ್ಟಲಾಯಿತು. ಅವನಿಗೆ ಒಳ್ಳೆಯ ಶಿಕ್ಷಣ ವ್ಯವಸ್ಥೆ ಮಾಡಲಾಯಿತು.

ಮಹಮ್ಮದ ಗವಾನ ರಾಜ್ಯದ ರಕ್ಷಣೆ ಮಾಡಿದನಲ್ಲದೆ, ಅದನ್ನು ವಿಸ್ತರಿಸಿದ. ಅನೇಕ ಸುಧಾರಣೆಗಳಿಗೆ ಕಾರಣವಾದ. ನಾಲ್ಕು ಹೊಸ ಪ್ರಾಂತಗಳು ರಚಿಸಲ್ಪಟ್ಟವು.

೧೪೭೨ ಗೋವೆ ಬಹಮನಿ ರಾಜ್ಯದ ಭಾಗವಾಯಿತು.

ಮಹಮ್ಮದ ಗವಾನನಿಂದ ಬೀದರ್‌ನಲ್ಲಿ ವಿದ್ಯಾಕೇಂದ್ರ ಸ್ಥಾಪಿತಗೊಂಡಿತ್ತು.

೧೪೭೦-೧೪೭೪ ರಾಷ್ಯದ ಪ್ರವಾಸಿ ಅಫಾನಸನಿಕಿಟಿನ ಬೀದರ್‌ಗೆ ಬಂದಿದ್ದ.

ಏಪ್ರಿಲ್ ೫ ೧೪೮೧ ಮೂರನೇ ಮೊಹಮ್ಮದಶಾಹನು ಕೊಂಡಾಪಲ್ಲಿಯಲ್ಲಿ ನೆಲೆ ಹೂಡಿದ.

ಮಹಮ್ಮದ ಗವಾನನ ವಿರುದ್ಧ ಒಳ ಸಂಚು ನಡೆದು, ಅರಸನ ತ್ವರಿತ ಆಜ್ಞೆಯ ಮೇರೆಗೆ ಗವಾನನ ಹತ್ಯೆ ಜರುಗಿತು. ನಂತರ ಅರಸ ಪಶ್ಚಾತ್ತಾಪ ಪಟ್ಟನಾದರೂ ಬಹಮನಿ ಮನೆತನದ ಅವನತಿ ಆರಂಭಗೊಂಡಿತ್ತು.

೧೪೮೨ ಸುಲ್ತಾನ ಮೂರನೇ ಮೊಹಮ್ಮದ ಪಶ್ಚಾತ್ತಾಪದ ಬೇಗೆಯಲ್ಲಿ ಬೆಂದು ತೀರಿಕೊಂಡ. ಸಾಯುವ ಮುನ್ನ ತನ್ನ ಹನ್ನೆರಡು ವರ್ಷದ ಮಗ ಶಾಹಬುದ್ದೀನ್ ಮಹ್ಮದನನ್ನು ಅರಸನನ್ನಾಗಿ ಘೋಷಿಸಿದ. ಅರಸನು ಮಂತ್ರಿ ನಿಜಾಂ-ಉಲ್-ಮುಲ್ಕ ಭೇರಿಯ ಕೈಗೊಂಬೆ ಮಾತ್ರ. ನಂತರ ಕಾಸಿಂ ಬರೀದ ಮಂತ್ರಿ ಆದ.

೧೪೮೯ ಬಿಜಾಪುರ ಆದಿಲಶಾಹ ಸ್ವತಂತ್ರಗೊಂಡ, ಕ್ರಮೇಣ ಉಳಿದವರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು.

೧೪೯೨ ಕಾಸಿಂ ಬರೀದ ಪ್ರಧಾನಮಂತ್ರಿಯಾಗಿ ನೇಮಕಗೊಂಡು ಬರೀದಿಗಳ ಮೇಲುಗೈ, ಬಹಮನಿ ಆಳ್ವಿಕೆ ನಾಮಮಾತ್ರವಾಗಿ ಉಳಿಯಿತು.

೧೫೧೮-೧೫೨೦ ಎರಡನೇ ಅಹಮ್ಮದ ಶಾಹ ಬಹಮನಿ

೧೫೨೦-೧೫೨೩ ಎರಡನೇ ಅಲ್ಲಾವುದ್ದಿನ

೧೫೨೩ ವಿಜಯನಗರ ಅರಸ ಕೃಷ್ಣದೇವರಾಯ ಬೀದರ ಮೇಲೆ ದಾಳಿ ವಲಿ ಉಲ್ಲಾ ಬಹಮನಿಗೆ ಪಟ್ಟಕಟ್ಟಿದ್ದು

೧೫೨೩-೧೫೨೬ ವಲಿ ಉಲ್ಲಾ ಬಹಮನಿ-ಅಮೀರ ಬರೀದನ ದಬ್ಬಾಳಿಕೆಗೆ ವಿರೋಧ ವ್ಯಕ್ತಪಡಿಸಿದ್ದು.

೧೫೨೬-೧೫೩೮ ಕಲಿಂ-ಉಲ್ಲಾ ಮೊಗಲ್ ಬಾದಶಾಹ ಬಾಬರನ ಸಹಾಯ ಕೋರಿ ರಹಸ್ಯ ಪತ್ರ ರವಾನಿಸಿದ. ಅಮೀರ ಬರೀದ ವಿಷಯ ತಿಳಿಯಿತು. ಕಲಿಂ ಉಲ್ಲಾ ಮೊದಲು ಮೊದಲು ಬಿಜಾಪುರ ನಂತರ ಅಹ್ಮದ ನಗರ್‌ಗೆ ಹೋಗಿ ಉಳಿದು ಅಲ್ಲಿಯೇ ತೀರಿಕೊಂಡ. ೧೫೩೮ರ ಸುಮಾರಿಗೆ ಬಹಮನಿ ಆಳ್ವಿಕೆ ಕೊನೆಗೊಂಡಿತ್ತು. ೫ ರಾಜ್ಯಗಳಲ್ಲಿ ಹಂಚಿಹೋಯಿತು.

೧೫೬೫ ತಾಳಿಕೋಟೆಯ ಹತ್ತಿರ ನಡೆದ ವಿಜಯನಗರ ಅರಸ ರಾಮರಾಯನ ಮೇಲಿನ ದಾಳಿಯಲ್ಲಿ ಅಲಿ ಬರೀದ ಸಕ್ರಿಯವಾಗಿ ಪಾಲ್ಗೊಂಡ.

೧೫೮೦ ಇಬ್ರಾಹಿಂ ಬರಿದ

೧೫೮೭ ಎರಡನೇ ಕಾಸಿಂ ಬರೀದ

-೨೫-

೧೫೯೧ ನಾಮಮಾತ್ರಕ್ಕೆ ಎರಡನೇ ಕಾಸಿಂ ಬರೀದನ ಎಳೆಯ ಮಗ ಪಟ್ಟಕ್ಕೆ ಬಂದನಾದರೂ ಅಮೀರ ಬರೀದನ ಸಂಬಂಧಿ ಅಧಿಕಾರ ವಹಿಸಿಕೊಂಡ.

೧೬೦೧ ಅದೇ ಮನೆತನದ ಮಿರ್ಝಾ ಅಲಿ ಬರೀದ ಎನ್ನುವಾತ ಅಮೀರ ಬರೀದನನ್ನು ತಳ್ಳಿ ಅಧಿಕಾರ ವಹಿಸಿಕೊಂಡ. ಆತನ ನಂತರ ೧೬೦೯ರಲ್ಲಿ ಅಮೀರ ಬರೀದ ಅರಸನಾದ.

೧೬೧೯	ಬಿಜಾಪುರ ಎರಡನೇ ಇಬ್ರಾಹಿಂ ಆದಿಲಶಾಹನು ಬೀದರಿನ ಮೇಲೆ ದಾಳಿ ಇತ್ತು ಅಮೀರ ಬರೀದ ಮತ್ತು ಆತನ ಮಕ್ಕಳನ್ನು ಸೆರೆ ಹಿಡಿದ. ಬೀದರ ಆದಿಲಶಾಹಿ ರಾಜ್ಯದ ಭಾಗವಾಯಿತು.
೧೬೧೯-೧೬೫೬	ಈ ಅವಧಿಯಲ್ಲಿ ಬೀದರ ಬಿಜಾಪುರ ಆದಿಲಶಾಹಿಗಳ ವಶದಲ್ಲಿತ್ತು. ಮಲಿಕ್ ಮಾರ್ಜನ ಇಲ್ಲಿ ಅಧಿಕಾರಿಯಾಗಿದ್ದ.
೧೬೫೬	ದಖ್ಖನಿನಲ್ಲಿ ವೈಸರಾಯ ಆಗಿದ್ದ ಔರಂಗಜೇಬ ಬೀದರ ಕೋಟೆಯ ಮೇಲೆ ದಾಳಿ ಇತ್ತ. ೨೭ ದಿನಗಳ ಘರ್ಷಣೆಯ ನಂತರ ಕೋಟೆ ಔರಂಗಜೇಬನ ವಶವಾಯಿತು. ಬೀದರ ಮೊಗಲ ಸಾಮ್ರಾಜ್ಯದ ಭಾಗವಾಯಿತು.

೨೧. ಮೊಗಲ ಸಾಮ್ರಾಟರಿಂದ ನೇಮಕಗೊಂಡ ಬೀದರಿನ ರಾಜ್ಯಪಾಲರುಗಳು

೧೬೫೬-೧೬೫೯	ಇತ್ತಿಖಾರ ಖಾನ
೧೬೫೯-೧೬೬೦	ಖಾನ ಝಮಾನ ಮೀರ ಖಲೀಲ ಉಲ್ಲಾ
೧೬೬೦-೧೬೭೨	ಮೀರ ಶಮಶುದ್ದಿನ ಮುಕ್ತಾರ ಖಾನ ನರಸಿಂಹ ಝರಾ ಗುಹಾಂತರ ದೇವಾಲಯದ ಪಕ್ಕ ಮಸೀದಿ ನಿರ್ಮಿಸಿದ. (೧೧೬೭) ಥಿವನಾದ ಎನ್ನುವ ಪ್ರವಾಸಿ ಬೀದರಿಗೆ ಭೇಟಿ ನೀಡಿದ.
೧೬೭೨-೧೬೮೧	ಕಲಂದರ ಖಾನ
೧೬೮೧	ಜಾನ ಶಿಘಾರ ಖಾನ್ ಬಾಹದುರ ದಿಲ್ಲ
೧೬೮೮	ರುಸ್ತುಮದಿಲ್ ಖಾನ್ ಔರಂಗಾಖಾನ ಕೆಲದಿನಗಳು ಮಾತ್ರ
೧೬೯೧	ಕುಬಾಡ ಖಾನ ಹುಸಾಮೊದಿನ್ ಖಾನ್ ಚಾಂದನಿ ಚಬುತರಾದ ನಿರ್ಮಾಣ
೧೬೯೫-೧೬೯೬	ಖಾನ ಜಾದ ಖಾನ್
೧೬೯೬	ಸಜಾವರ ಖಾನ (ಏಪ್ರಿಲ್ ೪-೧೬೯೬ ರಂದು ಮಹಮದ ಗವಾನ ಮದರಸಾದ ಮೇಲೆ ಸಿಡಿಲು ಎರಗಿತ್ತು) ಅನುಪಸಿಂಗ ಬುಂದೇರಾ.
೧೭೨೪	ಮೀರ ಕಲಾನ ಖಾನ್, ನಿಝುಮ ಉಲ್ ಮುಲ್ಕ, ಹಸಬ ಜಹಾಂನ ಆಳ್ವಿಕೆ ಒಪ್ಪಿಕೊಂಡನು.
೧೭೨೪	ಅಸಫ ಶಾಹಿ ಮನೆತನದ ಆಳ್ವಿಕೆ ಮೊಗಲರ ಕಾಲದ ಬೀದರಿನ ರಾಜ್ಯಪಾಲ ಅಸಫ್ ಶಾಹಿಗಳ ಆಳ್ವಿಕೆಯಲ್ಲಿ ಮುಂದುವರಿದ ಅವನ ನಂತರ ವಾಸಿಲ ಖಾನ ಹಿರಿಯ, ವಾಸಿಲಖಾನ ಕಿರಿಯ ಇವರು ಕೆಲಕಾಲ ರಾಜ್ಯಪಾಲ ಹುದ್ದೆಯಲ್ಲಿದ್ದರು. ಕಿರಿಯ ವಾಸಿಲಖಾನನು ಪಟ್ಟಣದ ಪಶ್ಚಿಮದೆಡೆ ವಾಸಿಲ ಗಂಜ ಎಂಬ ಮಾರುಕಟ್ಟೆ ಸ್ಥಾಪಿಸಿದ.

೧೭೫೦ ಅಸಫ ಜಹಾನಿಂದ ಕಳುಹಿಸಲ್ಪಟ್ಟ ಖ್ವಾಜಾ ಮೊಮಿನ ಖಾನನ್ನು ಕಿರಿಯ ವಾಸಿಲ ಖಾನನು ತೆಗೆದು ಹಾಕಿದ್ದ.

೧೭೫೧ ನವಾಬ ಅಸಫ ಶಾಹನು ಮುಕ್ತ ದಾಖಿನನ್ನು ಬೀದರಿನ ರಾಜ್ಯಪಾಲನಾಗಿ ನೇಮಿಸಿದ. ಇವನು ಅರಸರ ವಿರುದ್ಧ ದಂಗೆ ಎದ್ದ ಮೀರ ನಿಝಾಮ ಅಲಿ ಖಾನನನ್ನು ಬೀದರಿಗೆ ಮುತ್ತಿಗೆ ಹಾಕಿ ಮುಕ್ತ ದಾಖಿನನ್ನು ತೆಗೆದು ಹಾಕಿದ ಮತ್ತು ಸಿಯಾದತ್ತ ಖಾನನನ್ನು ಆ ಸ್ಥಳದಲ್ಲಿ ನೇಮಿಸಿದ.

ನವಾಬ ಸಲಬತ್ತ ಖಾನ ಮತ್ತು ನವಾಬ ನಿಜಾಮ ಅಲಿ ಖಾನ ಈ ಸಹೋದರರ ನಡುವೆ ವೈಮನಸ್ಸು ಬೆಳೆಯಿತು. ನಿಜಾಮ ಅಲಿಖಾನ ದೆಹಲಿಯ ಸಮ್ರಾಟನಿಂದ ಸನ್ನದನ್ನು ಪಡೆದು ಫರ್ಮಾನ್ ವೊಂದನ್ನು ಹೊರಡಿಸಿ ಸಲಬತ್ತ ಜಂಗನನ್ನು ಬೀದರಿನಲ್ಲಿ ಬಂದಿಯಾಗಿ ಇರಿಸಿದ. ಮುಂದೆ ೧೫ ತಿಂಗಳ ನಂತರ ಸಲಬತ್ತ ಜಂಗನು ಬೀದರಿನಲ್ಲಿಯೇ ತೀರಿಕೊಂಡ. ಆತನಿಗೆ ಪರವಾಗಿ ವರ್ತಿಸಿದ. ರಾಜ್ಯಪಾಲ ಸಯಾದತ್ತ ಖಾನನನ್ನು ನಿಜಾಮ ಅಲಿ ಖಾನ ತೆಗೆದುಹಾಕಿ ಆ ಜಾಗಕ್ಕೆ ಅಲಾವು ದೌಲಾ ದಿಲಿರ ಜಂಗನನ್ನು ನೇಮಿಸಲಾಯಿತು. ಅವನು ಸಲಬತ್ತ ಖಾನ ಜಂಗನನ್ನು ಕೊಂದು ಹಾಕಿದ.

೧೭೬೬-೬೭ ದ್ವಿತೀಯ ಮೀರ ಕಲಾಂ ಖಾನ

೧೭೬೭ ಮುರ್ತುದಾಖಾನ್

೧೭೭೩ ಮಾಂಜ್ರಾನದಿಯ ದಡದ ಮೇಲೆ ಮರಾಠರ ಮತ್ತು ನೈಜಾಂರ ನಡುವೆ ಯುದ್ಧ ಜರುಗಿತ್ತು. ಬೀದರ ಚಟುವಟಿಕೆಗಳ ಕೇಂದ್ರವಾಗಿದ್ದಿತು.

೧೭೭೩ ಮಹಮದ ಗೌಥ ಸೈಫುಲ್ಲಾ ದೌಲಾ ಬಾಹದೂರ ತನ್ನ ಪ್ರತಿನಿಧಿಗಳ ಮೂಲಕ ಆಡಳಿತ.

೧೭೮೦-೯೨ ನವಾಬ ಅಮೀನ ಉಲ್ ಮುಲ್ಕ ಬಾಹದೂರ ತಾರಾ ಮಿಯಾ

೧೭೯೨ ನೂರ ಮಹಮದ ಖಾನ್ ದಾಖಿರುದ್ದಿನ ಖಾನ್ ಬೀದರಿನಲ್ಲಿ ಅವನ ಪ್ರತಿನಿಧಿಯಾಗಿದ್ದ. ಅಲಿಝಾ ಬಾಹದುರನು೧೭೯೫ರಲ್ಲಿ ನವಾಬ ನಿಜಾಮ ಅಲಿಖಾನ ಬಾಹದೂರ ವಿರುದ್ಧ ಎದ್ದ ದಂಗೆಯಲ್ಲಿ ಸದಾಶಿವರೆಡ್ಡಿ ಎಂಬ ಜಮೀನುದಾರ ಪಾಲ್ಗೊಂಡ. ಅವರು ಬೀದರ

ಕೋಟೆ ಸೇರಿದರು. ನೈಜಮಾನಸೆಯುರ ರೆಮಂಡನ ನೇತೃತ್ವದಲ್ಲಿ ಕಳುಹಿಸಿದ ಸೈನ್ಯ ಬೀದರಕೋಟೆ ಯನ್ನು ವಶಪಡಿಸಿಕೊಂಡಿತ್ತು.

೧೭೯೫ ಖ್ವಾಜಾ ಮುನಿಮಖಾನ ಬೀದರಿನ ರಾಜ್ಯಪಾಲನಾಗಿ ನೇಮಕಗೊಂಡ.

೧೭೯೬ ಖಾನಜಹಾಂ ಬಾಹದ್ದೂರ (ಮಿರ್ಜಾ ಹುಸೇನ ಬೇಗ ಪ್ರತಿನಿಧಿ)

೧೭೯೯ ಯಕ್ಕಾ ತಾಜ ಜಂಗ ಬಾಹದ್ದೂರ (ಮೀರ ಲಿಲಾಹಿ) (ಆತನು ತನ್ನ ಮಗ ಅಸದ ಅಲಿ ಖಾನ್‌ನನ್ನು ಕಳುಹಿಸಿದ)

೧೮೦೦ ಮೀರ ಅಸದ ಅಲಿ ಖಾನ

೧೮೨೨ ಸೈಯದ ಖಲಿಲುಲ್ಲಾ ಖಾನ ಬಾಹದೂರ

೧೮೨೮ ನವಾಬ ನಜರ ಬಾಹದೂರ ಖಾನ

೧೮೩೮ ಮೀರ ಹಸನ ಅಲಿಖಾನ ಬಾಹದೂರ

೧೮೩೮ ಗುಜರಾತಿನ ಕಿಶನದಾಸ ಸಾಹುಕಾರ

೧೮೪೨ ಅಬ್ದುಲ್ಲಾ ಬೀನ ಆಲಿ

೧೮೪೬ ಜುಲೈ ಪಂಡರಿನಾಥ

೧೮೪೬ ಸೆಪ್ಟೆಂಬರ ನವಾಬ ಸುಲ್ತಾನ ಮಿರ್ಜಾ ಖಾನ

೧೮೪೬ ಡಿಸೆಂಬರ ನವಾಬ ಶಮಶುದಿನ್ ಖಾನ (ಅಬ್ಬಾಸ ಸಾಹೇಬ)

(೧೮೪೬ರಿಂದ ನೈಜಾಂ ಆಡಳಿತವನ್ನು ಜಿಲ್ಲೆಗಳಲ್ಲಿ ವಿಂಗಡಿಸಿ ಮಿಲಿಟರಿ ಅಧಿಕಾರಿಗಳ ಆಡಳಿತ ಕೊನೆಗೊಳಿಸಲಾಯಿತು.)

೧೮೪೬ ಬೀದರ ಸದರ ತಾಲೂಕದಾರ (ಕಮಿಷನರ್)ನ ಮುಖ್ಯ ಕಛೇರಿ ಕೇಂದ್ರವಾಗಿ ಮಾರ್ಪಟ್ಟಿತ್ತು. ೧೮೪೬ರಿಂದ ೧೯೦೫ ರವರೆಗೆ ವಿಭಾಗೀಯ ಕೇಂದ್ರವಾಗಿತ್ತು. ಬೀದರ, ಇಂದೂರ, ಮಹಬೂಬ ನಗರ, ಮೆದಕ ಹಾಗೂ ಸಿರಪೂರ-ತಾಮಡೂರ ಈ ಜಿಲ್ಲೆಗಳೂ ಈ ವಿಭಾಗದ ವ್ಯಾಪ್ತಿಗೆ ಸೇರಿದವು.

೧೯೦೫ ಬೀದರ ಜಿಲ್ಲೆಯನ್ನು ಗುಲಬರ್ಗಾ ವಿಭಾಗಕ್ಕೆ ವರ್ಗಾಯಿಸ ಲಾಯಿತು. ೧೯೨೨ರಲ್ಲಿ ಪುನರಾರಂಭಗೊಂಡು ವಿಭಾಗೀಯ ವ್ಯವಸ್ಥೆ ೧೯೨೯ರಲ್ಲಿ ಪುನರಾರಂಭಗೊಂಡು ೧೯೪೮ರವರೆಗೆ ಮುಂದುವರಿಯಿತು.

ಜುಲೈ ೧ ೧೯೩೨ ಬೀದರ ಮೂಲಕ ಹಾದು ಹೋಗುವ ವಿಕಾರಾಬಾದ-ಪರಳಿ ವೈಜಿನಾಥ ರೈಲ್ವೆ ಮಾರ್ಗದಲ್ಲಿ ಸಂಚಾರ ಆರಂಭಗೊಂಡಿತು.

ಸೆಪ್ಟೆಂಬರ ೧೯೪೮ ನೈಜಾಂ ರಾಜ್ಯ ಸ್ವತಂತ್ರ ಭಾರತದ ಒಕ್ಕೂಟದ ಭಾಗವಾಯಿತು. ಸೆಪ್ಟೆಂಬರ ೧೭/೧೮

೧೯೫೦ ಹೈದ್ರಾಬಾದ ಜಾಗೀರು ರದ್ದತಿ ಕಾಯಿದೆಯನ್ವಯ ನವರಚಿತ ಬೀದರ ಜಿಲ್ಲೆ ಬೀದರ, ಭಾಲ್ಕಿ, ಹುಮನಾಬಾದ, ಔರಾದ, ನಿಲಂಗಾ, ಅಹಮದನಗರ, ಉದಗೀರ, ಜಹೀರಾಬಾದ, ಮತ್ತು ನಾರಾಯಣ ಖೇಡ ತಾಲೂಕುಗಳನ್ನು ಹೊಂದಿತ್ತು.

ನವೆಂಬರ ೧ ೧೯೫೬ ಕೇವಲ ನಾಲ್ಕು ತಾಲೂಕಾಗಳು ಬೀದರ, ಹುಮನಾಬಾದ, ಭಾಲ್ಕಿ, ಮತ್ತು ಔರಾದಗಳೊಂದಿಗೆ ಬೀದರ ಜಿಲ್ಲೆ ನವ ಮೈಸೂರು ಜಿಲ್ಲೆಯ ಭಾಗವಾಯಿತು. ೧೯೬೫ರಲ್ಲಿ ಬಸವ ಕಲ್ಯಾಣ ತಾಲೂಕ ರಚಿತಗೊಂಡು ಇಂದು ಬೀದರ ಜಿಲ್ಲೆ ೫ ತಾಲೂಕುಗಳನ್ನು ಹೊಂದಿದೆ.

೨೨. ಶಾಸನ ಪಠ್ಯ

ಬೀದರ ಕೋಟೆಯ ವಸ್ತುಸಂಗ್ರಹಾಲಯದಲ್ಲಿರುವ ಕಾಕತೀಯ ರುದ್ರಮದೇವಿಯ ಕಾಲದ ಸಿಂಧಭೈರವನಿಗೆ ಸಂಬಂಧಿಸಿದ ಶಾಸನ

ಕಾಲ : ಹದಿಮೂರನೇ ಶತಮಾನದ ಉತ್ತರಾರ್ಧ

೧. ....(ತ)ರ್ಕ್ಕ ಭೈರವ (ನನು?)

೨. ....ತನನಂತ ವನಂತ ಪ್ರತಾಪ.............. .

೩. ....ರಕಂನಡ ಸರಸತಿ ಬಗೆದಂದು ಪೇಳಲುದ್ಯತನಾದಂ ಅದೆಂತೆಂದೊಡೆಂ ಚಂಪ............

೪. ....(ಪಾಳಿ) ಸಿದರಂತವರೊ ಳ್ಳ್ರೂಪರುದ್ರನೆಂ । ದರುತರು ಕೀರ್ತ್ತಿಯಂ ಪಡೆದ ರಾಯ ಜಗದ್ದಳ ರುದ್ರದೇನಾ । ನರಪತಿ.

೫. ....(ತ್ತೇಭ)ಂ॥ ಅವನೀಪಾಳಕ ಚಕ್ರವರ್ತಿ ಮಹಾದೇವಂ ಕಾಕತಿ ವಲ್ಲಭಂ)
ನವಲಖ್ಖಂ ಬೆರಸೆತ್ತಿ ದೇವಗಿರಿಯೋಳ್ವಿಕ್ರಾಂತದಿಂ ಕಾದಿಯಾ । ದ

೬. ....ದೋರ್ಗಬ್ಬದಿಂ । ಭುವನಂ ಬೊಪ್ಪೆನೆ ಕೀತಿಯಂ ಪಡೆದನುಗ್ರಾರಾತಿ
ಭಾಳೇಕ್ಷಣಂ ॥ ಆತನ ತನೂಭವಂ ಮತ್ತೆಬ॥ಜನ ಸಂಮೋಹಾ...

೭. ....ನೆ ರಾಯ ಗಜೇಂದ್ರ ಕೇಸರಿ ಧರಿತ್ರಿಪಾಳನೆ ರಾಜನೀತಿನಿಧಾನಂ ಪ್ರಿಥುವೀ ಪರಾರ್ತ್ಥ ನಿಧಿಯೆ ಭೂಲೋಕ ಸಾಹಿತ್ಯಸ(೧)★ ಜ್ಜನರಕ್ಷಾ

೮. ....ಸೇಸ್ತಿ॥ ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ ಮಹಾ ಮಂಡಳೇಶ್ವರಂ। ಕಾಕತಿಪುರವರಾಧೆಶ್ವರಂ । ಮೂರು ರಾಯ ಜಗದ್ದಳ । ರಾಯ (ಚ)

೯. ....ಶಾಪಟ್ಟ ಮಾಳವ ರಾಯ ಮದನ ತ್ರಿಣೇತ್ರ । ನೀಳಿರಾಯ ಮಸ್ತಕ ಸೂಲ। ದೂರೀರಾಯ ಧಾಟೀ ಧಡಕ್ಕ ಪ್ರಥ್ವೀಶ್ವರ ರಾಯಸಿ............

೧೦. ....ಉಣ ಬಳಜಳದಿ ಬಡವಾನಳ । ಸರಣಾಗತ ರಾಯ ರಕ್ಷಾಮಣಿ ।
ರಾಯಗಜ ಕೇಸರಿ । ಶ್ರೀ ಸ್ವಯಂಭುನಾಥ ದೇವ
ಶ್ರೀಪಾದಪ (ದ್ಮೋ)........

೧೧. ....ದ್ರ ನೋರುಗಲ್ಲ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆಯಿರೆ ॥ ಮಲ್ಲಿಕಾಮಾಲೆ ॥ ಆ ನರೇಂದ್ರನ ಗರ್ಭ್ಬದುಗ್ಧ ಪಯೋ.......

೧೨. ....ರಿ ರಾಯ ನೋತ್ತಿ ತಂನಯ ತೇಜದಿಂ । ದಾನ ಧರ್ಮ್ಮ ಪರಾರ್థ ಸಂಪದ ಸತ್ಯ ಸಂಗ್ರಹಾ ಲೀಲೆಯಿಂ। ತಾನೆ ಪಾಳಿಪಳರ್ತ್ಥಿಯಿಂ

೧೩. ....ಜ್ಜರರಾಯ ನಂಬುಗೆಯಳಾ ಬಂಗಾಳನಂ ರಾಯನೆಂ । ದೆಣಿ ಸಳ್ಗೌಳ ನನೆಳಿ

ಪಳ್ಮಗಧನಂ ರೋಡಾಡು ವಳ್ಕಾಡಿ ಸೇವುಣನಂ ಮಾಳವನಂ ಮರು

೧೪. ....ನೆಂದು ಧರಿತ್ರೀ ಕೂಡೆ ಪೊಗಳ್ಗುಂ ಶ್ರೀ ರುದ್ರಮದೇವಿಯುಂ ॥ ಚಂಪಕ ॥

ಅದಿರದೆ ವೈರಿ ರಾಯ ಗಜಕೇಸರಿ ರುದ್ರಮ ದೇವಿ ಧೀರೆಯೆಂ। ಬು.......

೧೫. ....ಂ ನ್ಯ ವೋ। ಡಿ ದ ಹೂ ಲನಂಗ ನಿರ್ದ್ದಮೆಳೆವಂಗ ನಡಂಗಿ ಡ ವಾರ್ದ್ಧಿ ಚೋಳನೆ । ಳಿ ದ ಗಿ ರಿ ಗೌಳ ನಿತ್ತಗಜಮುಂ ಪ್ರಿಥುವೀಶ್ವರ ರಿತ್ತ ಮಂಡಳಂ ॥ ಚಂಪಕ ॥ ಧರೆ...........

೧೬. ....ಂ। ಧರಿಸಲು ರುದ್ರ ದೇವನೆನ ಲೊಪ್ಪದೆ ರಾಯ ಲಲಾಟ ನೇತ್ರ ನಂ।

ಬಿರುದ ವಿರೋಧಿ ರಾಯ ಕುಳ ಭಂಜನನಂ ಚಲಪರ್ತಿ ಗಂಡನಂ।

ದುರದಿ............

೧೭. ....ತಾಂತನಂ ॥ ಉತ್ಪಳ ॥ ಅಂತು ಪೊಗಳ್ತೆಯಂ ಪಡೆದ ರುದ್ರ ಮ

ದೇವಿಯ ರಾಜ್ಯ ಭಾರಮಂ। ಸಂತತ ಉದ್ಧರಿಪ್ಪ ಕಲಿ ಶೇಷ

ಕುಲೋದ್ಭವ ನಿತನೀತನ। ತ್ಯಂತ ತೇಲ................................

೧೮. ....(ಳಾಲ) ತರ ವೆಯ್ದೆ ಕೀರ್ತಿಸುಉದಿ ಧರೆ ಭೈರವ ಭುಮಿ

ಪಾಳನಂ ॥ ಮತ್ತೇಭ ॥ ದನುಜಾರಾತಿಗೆ ವೈನತೇಯನಣುವಂ

ರಾಮಂಗೆ ರಾಜೀವ

೧೯. .... ಭಕ್ತಿ ಭಾ। ವನೆಯಿಂದಂ ಬೆಸಕೆಯ್ದು ರುದ್ರ ಮಹಾದೇವಿ

ಸೌರ್ಯ್ಯ ಸಂಪತ್ತಗೀತನೆ ಮುಖ್ಯಂ ನವಲಖ್ಖಿದೊತ್ತಿಹಿತಂ ।

ನವಲಖ್ಖಿದೊಳ್ವತಿ ಹಿತಂ । ಸಿಂದಾನ್ವಯ ಭೈರವ ....

೨೦. ....ಯೆಂ ನವಲಖ್ಖಿ ರಾಯ ನೊಳ್ವರುಡಿ ಸವಂಗವೇಂಗಿ ಕಲಿ ಸೇಉಣ

ಸೆನೆಯ ವೀರಡಂಕುರಂ ಕರಿಯೊಳೆ ವೊದವಿಂಬೆ ವೆಳನಾ............

೨೧. ....ವನ ಕೂರಸೆ ಧಾರೆಯ ನಂಜು ಗಾಳಿಯೆಳು ॥ ಮತ್ತೇಭ ॥

ದ್ರವಿಳಾಧೀಶನೋಳಾನೆಯಂ ಕುದುರೆಯಂ ಕಾಂಭೋಜನೋಳ್ಕಾಡಿ ಯಾ ।

ದವ ನೋದ್ದೇಶ ಮನಂಗನೆ..........

೨೨. .... ಕ್ತಿಕ ಭಾರಮುಂ ನಿಜ ಭುಜಾವಷ್ಟಂಭದಿಂ ತಂದ ವ ।

ಸ್ತುವನಾ ರುದ್ರಮದೇವಿಗಿತ್ತು ಪಡೆದಂ ವಿಖ್ಯಾತಿಯಂ ಭೈರವಂ । ಮತ್ತೇಭ॥

ಧುರದೊಳ್ಕಂಡು............

೨೩. .... ಲ್ಸರಣೆಂದಂಗೆ ಭುಜಾಸಿಯಂ ಸೆಳದಡಂ ಮೈಳಾತ್ಮಜಂ ಭೈರವಂ।

ಪರವೆಂಣ್ಗೊತಟಚೀ ಡಿದಂಗ ಮರ ದೇ ನೀಲ್ಲೆದಡಂ ಮೇರು ಮಂ ।

ದರವಲ್ಲಾಡವೆನೆ............

೨೪. ....ಭ ॥ ಮನುಜಾಧೇಶ್ವರ ಮಾತ್ರವೆ ಸಕಳ ಧಾತ್ರೀ ಭಾರಮಂ ತಾಳ್ದ ।

ಶೇ। ಷನವವಂ ಶಾತ್ರವ ರಾಜಮಂಡಳಸಮಸ್ತ ಗ್ರಾಸಿ ಸಾಮ್ರಾಜ್ಯೆಪಾ

೨೫. ....ಯ ರುದ್ರನ ಕಂಠಾಭರಣಂ ನ್ರಿಪಾವ ತರಣಂ ಶೇಷಾನ್ವಯಂ ಭೈರವಂ ॥

ಅಂತಾ ವೀರ ಭೈರವ ನರೇಂದ್ರನಂ ॥ ಮತ್ತೇಭ ॥ ಪರಮಾರ್ತ್ಥಂಹಿ...........

೨೬. ....ದೆ ಯುಂ ! ಗುರ ಉಂ ದೆಯ್ವ ಮು ಮೆಂಡು ಭೈರವನ

ಪಾದಾಂಭೋಜಮಂ ಭಕ್ತಿಯಿಂದೆರ ಉತ್ತಾಲಗಿ ಸುತ್ತವಂಘ್ರಿಗೆರಗುತ್ತಾರಾಧಿಸುತ್ತಿಪ್ಪ (ಕಾ) ....

೨೭. ....ದ್ದ ಭೂಪಾಳಕರು । ಅಂತು ಸಹೋದರರ್ವ್ವೆರಸು ಸುಖ ಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತ ಮೀದವೀರವನ ನಿಜರಾಜಧಾನಿವೆರ್ಣ್ಣೆರ

ಸುವ ಭೈರ ಸಂಕಥಾವಿನೊರದಿಂ ರಾಜ್ಯಂಗೆಯ್ಯುತ್ತ ಮಿದ್ದ ವೀರ ಭೈರವನ ನಿಜರಾಜಧಾನಿ ವರ್ಣಿಸುವ ....

೨೮. .... ತರು ಶೋಭಾವಹಂ ಭಾವ ಹಂ ಶ್ರೈ । ವಾಳಾವಾಳಾ ಭಿ

ಪೊತಪ್ರಕರ ಮಕರ ಕುಂಭೀಕರಂ ಭೀಕರಂ ಜಂ । ಬಾಳಂ ಬಾಳಂ ಮ್ರಿಣೊಬ್ಬ.....

೨೯. .... ನಧ್ವನಿ ಜನಿತ ದಿಶಾವಾಸಮುದ್ರಂ ಸಮುದ್ರಂ॥ ಮತ್ತೇಭ॥ ವಿಕಶಾಂಭೋರುಹದಂತೆ ಕಣ್ಗೆಸಗು ಜಂಬೂದ್ವೀಪವಂಭೋಜಕಂ । ರ್ಣಿಕೆಯಂ ತಿರ್ಪ್ಪುದು ಮೆರ...........

೩೦. .... ಹೀ ಧರದ ತಂಕಲ್ಬಾರತ ಕ್ಷೋಣಿಕಂ । ಜಿಕು ತದ್ದಕ್ಷಿಣ ಭಾಗದೊಳ್ವಿಷಯ ಲಕ್ಷ್ಮೀ ಕುಂತಳಂ ಕುಂತಳಂ ॥ ಕ ॥ ಅಂತು ದೆಸೆ ದೆಸೆಗೆ ಸೊಗಂ................

೩೧. .... ಮಸಉದು ನಿಚ್ಚ ಬಸಂತಂ ದೇಶಂಗಳರಸಟ್ಟ (ಡ್ಡ?) ಳೆ ದೇಶಂ॥ ಮತ್ತೇಭ॥

ಲಲಿತೋತುಂಗ ತಮಾಳ ಮಾಳ ಸರಸೀ ಕಲ್ಲೋಳ ಲೋಳ ಪ್ರಾವಾ । ಳ ಲತಾ ರಂ (ಜಿ)

೩೨. .... ಬಾ ! ಳಲವಂಗ ದ್ರುಮ ರಾಜಿ ರಾಜಿ ವಸಂತಾರಂಭ ರಂಭಾಕದಂ। ಬಲ

ಸಚ್ಚಂದನ ಸಾರ ಸಾರಸ ಮಯೂರಾನಂ ದನಂ॥ ಮತ್ತೇಭ॥ ....

೩೩. .... ಗ ಶ್ವರೋಂನ್ನತಿಯಿ ಚಂದನ ಚಾರು ಚಂಪಕ ವನೌಘಾಮೋದದಿಂ

ಮಂದುಮಾರುತನಿಂ ಪಕ್ವ ಫಳಪ್ರಪೂರ್ಣರಸದಿಂ ಲೋಕೈಕ ಸೌಭಾಗ್ಯಸಂ । ಚಿತವಾದ ....

೩೪. .... ಯಂ॥ ಜ॥ ಅಲ್ಲಲ್ಲಗೆಸಿವ ಭವನಮಲ್ಲಲ್ಲಿಗೆ ದಿಬ್ಯ ತೀರ್ಥನಂದನ ವನಮಂ। ತಲ್ಲಲ್ಲಗೆ (ಪು)ರ ಶೋಭೆಗಳೆಲ್ಲಾ ಗುಣದಿಂದ ವಧಿತ (-) ಳೆದೆ ....

೩೫. .... ರಾಂತಕಂ ಮೂಡಲೂ ಕೆಂ। () ಡಿಯ ಜಲೆಶಂ ತೆಂಕ

(ಸೆಲೆಕ್ಟ ಎಪಿಗ್ರಾಫ್ಸ್ ಆಫ್ ಆಂಧ್ರಪ್ರದೇಶ, ಶ್ರೀ ಪಿ.ವಿ. ಪರಬ್ರಹ್ಮಶಾಸ್ತ್ರೀ, ಆಂಧ್ರ ಪ್ರದೇಶ ಸರಕಾರ, ಹೈದರಾಬಾದ, ೧೯೬೫ ಇದರಲ್ಲಿ ಪ್ರಕಟಿತ ಪು. ೬೧-೬೫)

೨೩. ಮುಖ್ಯ ಅರಸು ಮನೆತನಗಳ ವಂಶಾವಳಿ

ಪಶ್ಚಿಮದ / ಕಲ್ಯಾಣಿ ಚಾಲುಕ್ಯರು ಕ್ರಿ.ಶ. ೯೭೩/೧೧೯೦

ಎರಡನೆ ತೈಲಪ

↓

ಸತ್ಯಾಶ್ರಯ

↓

ದೇವಶರ್ಮ

↓

ಐದನೇ ವಿಕ್ರಮಾದಿತ್ಯ

↓

ಒಂದನೇ ಜಯಸಿಂಹ

↓

ಜಗದೇಕ ಮಲ್ಲ

↓

ಒಂದನೇ ಸೋಮೇಶ್ವರ

↓

ಎರಡನೇ ಸೋಮೇಶ್ವರ

↓

ಆರನೇ ವಿಕ್ರಮಾದಿತ್ಯ

↓

ಮೂರನೇ ಸೋಮೇಶ್ವರ

↓

ಎರಡನೇ ಜಗದೇಕ ಮಲ್ಲ

↓

ಮೂರನೇ ತೈಲಪ

ಕಳಚೂರಿ ಬಿಜ್ಜಳ

↓

ಸೋವಿದೇವಿ

↓

ಎರಡನೇ ಸಂಕಮ

↓

ನಾಲ್ಕನೇ ಸೋಮೇಶ್ವರ

ರಾಜಧಾನಿ ಬೀದರದಿಂದ ಆಳಿದ ಬಹಮನಿ ಸುಲ್ತಾನರು

ಅಹಮದ ಶಾಹವಲಿ ಅಲ್-ಬಹಮನಿ

↓

ಅಲ್ಲಾವುದ್ದೀನ್ ಶಾಹ

↓

ಹುಮಾಯೂನ್ ಶಾಹ

↓

ನೈಝಾಂಮುದ್ದೀನ್ ಶಾಹ

↓

ಮೂರನೇ ಮಹಮದ್ ಶಾಹ

↓

ಶಿಯಾಬುದ್ದೀನ್ ಮಹಮೂದ್ ಶಾಹ

↓

ಎರಡನೇ ಅಹಮದ್ ಶಾಹ

↓

ಮೂರನೇ ಅಲ್ಲಾವುದ್ದೀನ್ ಶಾಹ

↓

ವಲಿ ವುಲ್ಲಾ

↓

ಕಲೀಂ ವುಲ್ಲಾ

ಬೀದರದ ಬರೀದ ಶಾಹಿ ಅರಸರು ಕ್ರಿ.ಶ. ೧೫೪೨

(ಕಾಸಿಂ ಬರೀದ - ಮಂತ್ರಿ - ಪ್ರಧಾನ ಮಂತ್ರಿ

ಅಮೀರ್ ಅಲಿ ಬರೀದ - ಪ್ರಧಾನ ಮಂತ್ರಿ)

ಅಲಿ ಬರೀದ ಶಾಹ

↓

ಇಬ್ರಾಹಿಂ ಬರೀದ ಶಾಹ

↓

ಎರಡನೇ ಕಾಸಿಂ ಬರೀದ ಶಾಹ

↓

ಎರಡನೇ ಅಮೀರ್ ಬರೀದ ಶಾಹ

↓

ಮಿರ್ಜಾ ಅಲಿ ಬರೀದ ಶಾಹ

೨೪.ಆಕರ ಗ್ರಂಥಗಳು

ಇಂಗ್ಲಿಷ್ ಕೃತಿಗಳು

1. Historical and cultural studies of the Region Around Basavakalyan - Based on inscriptions - V.S. Kulkarni Thesis KUD 1979.

2. History of Medieval Deccan Vol - 1(1295-1724) Editor : Prof. H.K. Sherwani Jt. Ed., P.M.Jhoshi, Government of A.P. Hyderabad - 1973

3. Gazetteer of Media Karnataka State Uttara Kannada District Chief Ed. Suryanath U. Kamat, 1985.

4. BIDAR - Its History and Monuments : G. Yazdani, Published under the special Authority of His Exalted Highness the Nizami Government 1947

5. History of the Rize of the Mahodan Power in India translated from the original Persian of Mohomed Kasim Ferishta Vol I - Jhon Briggs - Low price publication, New Delhi, reprinted 1997.

6. The Anitquities of Bidar - G. Yazdani, AES, Reprint 1992

7. Afanasy Nikitin's Voyage Beyond Three seas, Raduga Publishers Moscow, 1985

8. The Kadamba kula - A History of Ancient and Mediaeval Karnataka | George M. Moraes, Asian Educational service, Reprint 1990

9. The Imperial Gazetteer of India Vol. VIII 1908 p. 164-7

10. Selected Waqail of the deccan (1660-1671 A.D.)Ed. by Dr. Yusuf Husain, Published by Central Records Office, Hyderabad, 1953 stock

11. The Bahamanis of the deccan - An objective study by Haroon Khan Sherwani, Hyderabad, 1953

12. Tha Chalukyas of Kalyani-Krishna Murari, Concept Publishing co. Delhi

13. Gazetteer of India Karnataka State Bidar District Govt. of Karantaka Publication. 1977.

14. Pre Historic and Early Historic Cultures in the Manjra and the Karanja Valleys - R.M. Shadaksharaiah. Kannada Research Institute Karantaka University, 1995.

15. Sindas of Ranjeru - B. R. Gopal, the Indian History Congress 1968 p. 56-64.

16. The Chalukyas of Kalyana and Kalachuris - B. R. Gopal ; Karnataka University, Dharwad, 1981.

ಕನ್ನಡ ಕೃತಿಗಳು

೧. ಭಾರತದ ಇತಿಹಾಸ - ಫಾಲಾಕ್ಷ, ಶಶಿ ಪ್ರಕಾಶನ, ತಿಪಟೂರು ೧೯೯೪
Articles/Papers.

೨. ಬೀದರಿನ ವಸ್ತು ಸಂಗ್ರಹಾಲಯದಲ್ಲಿಯ ಒಂದು ಶಾಸನ - ಸೀತಾರಾಮ ಜಾಗೀರದಾರ. ಶರಣಸಿರಿ.


೩. ರಂಜೇರಿನ ಸಿಂಧರು - ಪ್ರೊ॥ ಸೂಗಯ್ಯ ಹಿರೇಮಠ. ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ ೨೦೦೨.

★★★★★★

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೭ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮